ಸಂಪುಟ: 13 Volume | ಸಂಚಿಕೆ: 292 Issue | ಪುಟಗಳು 08 Pages | ಗುರುವಾರ 08 ಜನವರಿ 2026 | ₹6 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

MN
ಸತ್ಯಮೇವ ಜಯತೆ
ಕನ್ನಡ ಕಿರಣ
Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ
ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಮಾನವನೆದೆಯಲಿ ಆರದೆ ಉರಿಯಲಿ ದೇವರು ಹಚ್ಚಿದ ದೀಪ , ರೇಗುವ ದನಿಗೂ ರಾಗವು ಒಲಿಯಲಿ ಮೂಡಲ ಮಧುರಾಲಾಪ.

–ಲಕ್ಷ್ಮೀನಾರಾಯಣ ಭಟ್

ಐಜಿಪಿ ಕಟಿಯಾರ್ ಎತ್ತಂಗಡಿ 6
ಭಕ್ತರಿಗೆ ಚರಂಡಿಯ ಗಬ್ಬುವಾಸನೆಯ ಕೊಡುಗೆ 7
ಕರ್ನಾಟಕ ಬಯಲಾಟ ಅಕಾಡೆಮಿ ಪ್ರಶಸ್ತಿ ಪ್ರಕಟ 8



ಹುಣಸಗಿಯಲ್ಲಿ ಶಾಸಕರಿಂದ ಮಲ್ಲಮ್ಮ ನುಡಿ ಪತ್ರಿಕೆ ಅನಾವರಣ ಮಾಡಲಾಯಿತು.

## ಅಪಘಾತ: ನಾಲ್ವರು ಸಾವು

**ಚಿತ್ರದುರ್ಗ:** ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲೂಕಿನ ಸಾಸಲು ಬಳಿ ಭೀಕರ ಅಪಘಾತ ಸಂಭವಿಸಿದೆ. ಮರಕ್ಕೆ ಬೊಲೆರೊ ವಾಹನ ಡಿಕ್ಕಿ ಹೊಡೆದ ಪರಿಣಾಮ ನಾಲ್ವರು ಕಾರ್ಮಿಕರು ಮೃತಪಟ್ಟಿದ್ದಾರೆ.




ಕಿರಣ್(25), ಅರುಣ್(32), ಗಿರಿರಾಜ್(46) ಸ್ಥಳದಲ್ಲೇ ಮೃತಪಟ್ಟರೆ ಗಂಭೀರವಾಗಿ ಗಾಯಗೊಂಡಿದ್ದ ಹನುಮಂತಪ್ಪ (32) ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ.

**ಒಂದೇ ಗ್ರಾಮದ ನಾಲ್ವರ ಸಾವು:** ಮಾಯಕೊಂಡದಲ್ಲಿ ಅಡಿಕೆ ಕೆಲಸಕ್ಕೆ ಹೋಗಿ ವಾಪಸ್ ಬರುವಾಗ ಈ ಅಪಘಾತ ಸಂಭವಿಸಿದೆ. ಮೃತರೆಲ್ಲರೂ ಕಲ್ಲವ್ವ ನಾಗತಿಹಳ್ಳಿಯವರಾಗಿದ್ದಾರೆ.

## ಬಾಯ್ಲರ್ ಸ್ಫೋಟಕ್ಕೆ 2 ಬಲಿ

**ಬೆಳಗಾವಿ:** ಬೆಳಗಾವಿ ಜಿಲ್ಲೆಯ ಸಕ್ಕರೆ ಕಾರ್ಖಾನೆಯೊಂದರಲ್ಲಿ ಬಾಯ್ಲರ್ ಸ್ಫೋಟಗೊಂಡು ಕನಿಷ್ಠ ಇಬ್ಬರು ಸಾವನ್ನಪ್ಪಿದ್ದು, ಆರು ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮೂಲಗಳ ಪ್ರಕಾರ, ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಮರಕುಂಬಿಯಲ್ಲಿರುವ ಇನಾಮದಾರ್ ಸಕ್ಕರೆ ಕಾರ್ಖಾನೆಯಲ್ಲಿ ಈ ದುರಂತ ಸಂಭವಿಸಿದೆ. ಮಧ್ಯಾಹ್ನ 2 ಗಂಟೆಗೆ ಈ ಘಟನೆ ನಡೆದಿದ್ದು, ಇಬ್ಬರು ಮೃತಪಟ್ಟಿದ್ದಾರೆ ಮತ್ತು ಆರು ಜನ ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಸೂಪರಿಂಟೆಂಡೆಂಟ್ ಕೆ. ರಾಮರಾಜನ್ ತಿಳಿಸಿದ್ದಾರೆ.



## ಮಹಿಳೆಗೆ ಸಂದೇಶ: ಶಾಸಕ ದೂರು

**ಬೆಂಗಳೂರು:** ಫೇಸ್‌ಬುಕ್, ಇನ್‌ಸ್ಟಾಗ್ರಾಂ ಖಾತೆಯನ್ನು ಹ್ಯಾಕ್ ಮಾಡಿ ಯುವತಿಯೊಬ್ಬರಿಗೆ ಸಂದೇಶ ಕಳುಹಿಸಿರುವ ಕುರಿತು ಬಿಜೆಪಿ ಶಾಸಕ ಸಿ.ಕೆ ರಾಮಮೂರ್ತಿ ಸೈಬರ್ ಕ್ರೈಂಗೆ ದೂರು ನೀಡಿದ್ದಾರೆ. ಜಯನಗರ ಬಿಜೆಪಿ ಶಾಸಕ ಸಿ.ಕೆ.ರಾಮಮೂರ್ತಿ ಹೆಸರಿನಲ್ಲಿ ನಕಲಿ ಖಾತೆ ಸೃಷ್ಟಿಸಿ ಮಾಡಿ ಹಲವರಿಗೆ ಮೆಸೇಜ್ ಕಳುಹಿಸಲಾಗಿದೆ. ಶಾಸಕ ಸಿ.ಕೆ. ರಾಮಮೂರ್ತಿ ಹೆಸರಿನಲ್ಲಿ ಮೆಸೇಜ್ ಹಿನ್ನೆಲೆ ಬೆಂ.ದಕ್ಷಿಣ ಸೈಬರ್ ಪೊಲೀಸ್ ಠಾಣೆಗೆ ಶಾಸಕ ದೂರು ನೀಡಿದ್ದಾರೆ. ಮೊಬೈಲ್ ಹ್ಯಾಕ್ ಆಗಿದೆ ಎಂದು ಸಿ.ಕೆ ರಾಮೂರ್ತಿ ಸ್ಪಷ್ಟನೆ ನೀಡಿದ್ದಾರೆ.ಈ ಹಿನ್ನೆಲೆಯಲ್ಲಿ ನಕಲಿ ಖಾತೆ ಸೃಷ್ಟಿಸಿದವರ ವಿರುದ್ಧ ಕ್ರಮಕೈಗೊಳ್ಳುವಂತೆ ಸೂಚಿಸಿದ್ದಾರೆ.

## ಕೈಗಾರಿಕೆಗಳಿಂದ ಪರಿಸರ ಸುಸ್ಥಿರತೆ ಅಗತ್ಯ

**ಬೆಂಗಳೂರು:** ರಾಜ್ಯದಲ್ಲಿರುವ ಕೈಗಾರಿಕೆಗಳು ತಮ್ಮ ಆರ್ಥಿಕ ಪ್ರಗತಿಯ ಜೊತೆಗೆ ಪರಿಸರ ಸುಸ್ಥಿರತೆಯನ್ನೂ ಕಾಯ್ದುಕೊಳ್ಳಬೇಕು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಕರೆ ನೀಡಿದ್ದಾರೆ.

ನಗರದಲ್ಲಿಂದು ಫಾರ್ವರ್ಡ್ ಕರ್ನಾಟಕದ ವತಿಯಿಂದ ಆಯೋಜಿಸಲಾಗಿದ್ದ ಪರಿಸರ ಸುಸ್ಥಿರತೆ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ನೈಸರ್ಗಿಕ ಸಂಪನ್ಮೂಲದ ಹಿತಮಿತ ಬಳಕೆ, ಮರುಬಳಕೆ ಮತ್ತು ಪುನರ್ ಬಳಕೆಗೆ ಒತ್ತು ನೀಡಿದರೆ ಮಾತ್ರ ಪರಿಸರ ಪ್ರಕೃತಿ ಉಳಿಸಲು ಸಾಧ್ಯ ಎಂದಿದ್ದಾರೆ.

ಉತ್ತಮ ಸುಸ್ಥಿರ ಪರಿಸರ ನೀತಿಯಿದ್ದರೆ ಸಾಲದು ಅದರ ಉತ್ತಮ ಅನುಷ್ಠಾನ ಆದಾಗ ಮಾತ್ರ ಪರಿಣಾಮ ಬೀರಲು ಸಾಧ್ಯ. ಕೊರೊನಾ ಸಮಯದಲ್ಲಿ ಸಾವಿರಾರು



ಜನರು ಆಮ್ಲಜನಕ ಸಿಗದೆ ಮೃತಪಟ್ಟರು. ನಮಗೆ ಉಚಿತವಾಗಿ ಆಮ್ಲಜನಕ ನೀಡುವ ವೃಕ್ಷ ಸಂರಕ್ಷಣೆಯನ್ನು ನಾವೇ ಮಾಡಬೇಕು, ಮರ ಗಿಡ ಬೆಳೆಸಲು ಎಲ್ಲರೂ ಕೈಜೋಡಿಸಬೇಕು ಎಂದು ಹೇಳಲಿದ್ದಾರೆ.

## ಗೃಹ ಸಚಿವ ಹೆಬ್ಬೆಟ್ಟು ಸಚಿವರೆ...?

• ಮಲ್ಲಮ್ಮ ನುಡಿ ವಾರ್ತೆ ನವದೆಹಲಿ

ಬಳ್ಳಾರಿಯಲ್ಲಿ ಪೊಲೀಸ್ ಅಧಿಕಾರಿಗಳ ಸಭೆ ನಡೆಸುವುದಕ್ಕೆ ಡಿಸಿಎಂ ಯಾರು? ಅವರಿಗೆ ಆ ಅಧಿಕಾರ ಯಾರು ಕೊಟ್ಟರು? ರಾಜ್ಯದಲ್ಲಿ ಇರೋದು ರಬ್ಬರ್ ಸ್ಟ್ಯಾಂಪ್ ಗೃಹ ಸಚಿವರಾ? ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನವದೆಹಲಿಯ ತಮ್ಮ ಗೃಹ ಕಚೇರಿಯಲ್ಲಿ ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತಾಡಿದ ಕೇಂದ್ರ ಸಚಿವರು; ಡಿಸಿಎಂ ಅವರು ಮಂಗಳವಾರ ಬಳ್ಳಾರಿಯಲ್ಲಿ ಪೊಲೀಸ್ ಅಧಿಕಾರಿಗಳ ಸಭೆ ನಡೆಸಿದ್ದಾರೆ. ಅದಕ್ಕೆ ಗೃಹ ಸಚಿವರು ಇಲ್ಲವೇ? ರಾಜ್ಯದಲ್ಲಿ ಇರುವ ಗೃಹ ಸಚಿವರು ಹೆಬ್ಬೆಟ್ಟು ಸಚಿವರಾ? ಇಂದು ಕೇಂದ್ರ ಸಚಿವರು ಖಾರವಾಗಿ ಪ್ರಶ್ನಿಸಿದ್ದಾರೆ. ನನಗೆ ಹಲವು ಮಾಹಿತಿಗಳು, ನೈಜ ಘಟನೆಗಳ ಬಗ್ಗೆ ಮಾಹಿತಿಕೊಡುವವರು ಇದ್ದಾರೆ. ಅದರ ಸತ್ಯಾಸತ್ಯತೆ ಪರಿಶೀಲಿಸಿ ಆ ಬಳಿಕ ನಾನು ಮಾಧ್ಯಮಗಳಿಗೆ ವಿವರಿಸಿದ್ದೇನೆ. ಜನತೆಗೆ ಸತ್ಯ ತಿಳಿಯಬೇಕಲ್ಲವೇ? ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದ್ದಾರೆ.



# ಮತ್ತದೇ ಕುರ್ಚಿ ಕಲರವ

## ಹೈಕಮಾಂಡ್ ಬಗ್ಗೆ ನನಗೆ ನಂಬುಗೆ: ಸಿಎಂ | ಕೊಟ್ಟ ಮಾತು ಉಳಿಸಿಕೊಳ್ಳಲಿ: ಡಿಕೆಶಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಮಾಜಿ ಮುಖ್ಯಮಂತ್ರಿ ದೇವರಾಜು ಅರಸು ದಾಖಲೆ ಮುರಿದ ಬೆನ್ನಲ್ಲೇ ಮತ್ತೆ ಕುರ್ಚಿ ಕದನ ಶುರುವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಸಕ್ತ ಅವಧಿಗಷ್ಟೇ ಅಲ್ಲ, ಮುಂದಿನ ಅವಧಿಗೂ ಮುಖ್ಯಮಂತ್ರಿ ಆಗಬೇಕು ಎಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ಪ್ರತಿಪಾದಿಸುವ ಮೂಲಕ ಡಿ.ಕೆ.ಶಿವಕುಮಾರ್ ಅವರ ಬಣವನ್ನು ಕೆಣಕುವ ಪ್ರಯತ್ನಗಳು ನಡೆಯುತ್ತಿವೆ.

**ಭಾರಿ ಚರ್ಚೆಗೆ ಗ್ರಾಸ:** ರಾಜ್ಯ ರಾಜಕೀಯದಲ್ಲಿ ರಾಜಣ್ಣ ನೀಡುವ ಹೇಳಿಕೆಗಳು ಕಾಲಕಾಲಕ್ಕೆ ಭಾರಿ ಚರ್ಚೆಗೆ ಗ್ರಾಸವಾಗುತ್ತಿವೆ.ಈ ಹಿಂದೆ ಜಾತಿವಾರು ಉಪಮುಖ್ಯಮಂತ್ರಿಗಳ ಹುದ್ದೆ ಸೃಷ್ಟಿಸಬೇಕು ಎಂದು ರಾಜಣ್ಣ ಹೇಳಿದಾಗ, ಅದು 9 ತಿಂಗಳ ಕಾಲ ಚರ್ಚೆಯಲ್ಲಿತ್ತು. ನಾಯಕತ್ವದ ಬದಲಾವಣೆ ಚರ್ಚೆಗೂ ಮುನ್ನುಡಿಯಾಗಿತ್ತು. ಡಿ.ಕೆ.ಶಿ ಬಣ ಸತತ ಪ್ರಯತ್ನ ನಡೆಸಿ ಸಿಎಂ ಅವರನ್ನು ಅಧಿಕಾರದಿಂದ ಕೆಳಗಿಳಿಸುವ ತಂತ್ರ ನಡೆಸಿತ್ತು.

**ಕುತೂಹಲದ ಹೇಳಿಕೆ:** ರಾಜಕೀಯ ಸ್ಥಿರವಲ್ಲ, ನನಗೆ ಹೈಕಮಾಂಡ್ ಮೇಲೆ ಪರಿಪೂರ್ಣ ವಿಶ್ವಾಸ ಇದೆ. ಪೂರ್ಣಾವಧಿ ಸಿಎಂ ಆಗುವ ವಿಶ್ವಾಸವೂ ಇದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಹುದ್ದೆ ಬದಲಾವಣೆ ಕುರಿತ ತೀವ್ರ ಚರ್ಚೆ ನಡೆಯುತ್ತಿರುವ ಹೊತ್ತಲ್ಲಿಯೇ ಮೈಸೂರಿನಲ್ಲಿ ಸಿಎಂ ಹೇಳಿದ್ದು ಕುತೂಹಲ ಹುಟ್ಟಿಸಿದೆ.



### ಹೈಕಮಾಂಡ್ ತೀರ್ಮಾನ: ಸಿಎಂ

ಏನೇ ಆದರೂ ಹೈಕಮಾಂಡ್ ಎಲ್ಲವನ್ನೂ ತೀರ್ಮಾನಿಸುತ್ತದೆ. ಹೈಕಮಾಂಡ್ ನಿರ್ಧಾರವೇ ಅಂತಿಮ ಎಂದು ಸಿಎಂ ಸ್ಪಷ್ಟಪಡಿಸಿದ್ದಾರೆ. ರಾಜ್ಯದ ಸುದೀರ್ಘ ಅವಧಿಯ ಸಿಎಂ ಆಗಿದ್ದ ದೇವರಾಜ ಅರಸು ಅವರ ದಾಖಲೆ ಸರಿಗಟ್ಟಿರುವ ಸಿದ್ದರಾಮಯ್ಯ, ನನಗೆ ದೇವರಾಜ ಅರಸು ದಾಖಲೆ ಬಗ್ಗೆ ಅರಿವು ಇರಲಿಲ್ಲ. ಜನರ ಆಶೀರ್ವಾದದಿಂದ ಇಲ್ಲಿಯ ತನಕ ಬಂದಿದ್ದೇನೆ. ಇಲ್ಲಿವರೆಗಿನ ರಾಜಕೀಯ ತೃಪ್ತಿ ಕೊಟ್ಟಿದೆ ಎಂದಿದ್ದಾರೆ.

### ವಿಶ್ವಶಕ್ತಿಗಿಂತ ಮಾತಿನ ಶಕ್ತಿ!

ಅಧಿಕಾರಕ್ಕೆ ಬರುವ ಮುನ್ನ ಕೊಟ್ಟ ಮಾತಿನಂತೆ ನಡೆಯಬೇಕು ಎಂದು ಡಿಕೆಶಿವಕುಮಾರ್ ಅವರು ಮತ್ತೊಮ್ಮೆ ಸಿದ್ದರಾಮಯ್ಯನವರಿಗೆ ಪರೋಕ್ಷವಾಗಿ ಎಚ್ಚರಿಸಿದ್ದಾರೆ. ಅಭಿನಂದನಾ ಸಮಾರಂಭದಲ್ಲೇ ಡಿಕೆಶಿವಕುಮಾರ್ ಅವರ ಈ ಹೇಳಿಕೆ ರಾಜ್ಯ ಕಾಂಗ್ರೆಸ್ ವಲಯದಲ್ಲಿ ಮತ್ತೆ ಚರ್ಚೆಯನ್ನು ಹುಟ್ಟುಹಾಕಿದೆ. ಇದ–ರಿಂದ ಎರಡೂ ಬಣಗಳು ಸಕ್ರಿಯವಾಗಿವೆ.

### ಸಿಎಂ ಹೇಳಿದ ಮೇಲೂ ಚರ್ಚೆ?

ಮುಖ್ಯಮಂತ್ರಿಯಾಗಿ ಅಧಿಕಾರಾವಧಿ ಪೂರ್ಣಗೊಳಿಸುವುದಾಗಿ ಸಿದ್ದರಾಮಯ್ಯ ಅವರು ಈಗಾಗಲೇ ಹೇಳಿಕೆ ನೀಡಿದ್ದಾರೆ. ಅದರ ಮೇಲೂ ಅನುಮಾನ ಪಡುವ ಅಗತ್ಯ ಇಲ್ಲ ಎಂದು ಸಚಿವ ಪ್ರಿಯಾಂಕ ಖರ್ಗೆ ಹೇಳಿದ್ದಾರೆ. ಮೈಸೂರಲ್ಲಿ ಮಾತನಾಡಿ, ಕಾಂಗ್ರೆಸ್ ಪಕ್ಷದಲ್ಲಿ ಎಲ್ಲರಿಗೂ ಅವಕಾಶ ನೀಡುವುದು ಪ್ರಮುಖ ಆಶ್ರಯವಾಗಿದೆ ಎಂದಿದ್ದಾರೆ.

### ಅಹಿಂದದ ಮೇಲೆ ಪರಿಣಾಮ

ಮುಖ್ಯಮಂತ್ರಿ ಸಿದ್ದರಾಮಯ್ಯ ಮುಳುಗಿದರೆ ಕಾಂಗ್ರೆಸ್ ಮತ್ತು ಅಹಿಂದ ವರ್ಗ ಮುಳುಗುತ್ತದೆ ಎಂದು ಸಮಾಜ ಕಲ್ಯಾಣ ಸಚಿವ ಹೆಚ್.ಸಿ.ಮಹದೇವಪ್ಪ ಹೇಳಿದ್ದಾರೆ. ಮೈಸೂರಿನಲ್ಲಿ ಸುದ್ದಿಗಾರರ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಯಾವುದೇ ಹಿನ್ನಡೆ ಉಂಟಾದರೆ ಅದು ಕಾಂಗ್ರೆಸ್ ಮತ್ತು ಅಹಿಂದ ಸಮುದಾಯಗಳ ಮೇಲೆ ಗಂಭೀರ ಪರಿಣಾಮ ಬೀರುತ್ತದೆ ಎಂದಿದ್ದಾರೆ.

## ಐಜಿ ವರ್ತಿಕಾ ಕಟಿಯಾರ್ ತಲೆದಂಡ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಗಂಗಾವತಿ ಶಾಸಕ ಜನಾರ್ದನ ರೆಡ್ಡಿ ನಿವಾಸದ ಮುಂದೆ ಬ್ಯಾನರ್ ವಿಚಾರವಾಗಿ ನಡೆದ ಘರ್ಷಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೊಬ್ಬರು ಉನ್ನತ ಅಧಿಕಾರಿಯ ತಲೆ ದಂಡವಾಗಿದೆ.

ಇದೀಗ ತೆರವಾಗಿರುವ ಐಜಿಪಿ ಸ್ಥಾನಕ್ಕೆ ಹುದ್ದೆ ನಿರೀಕ್ಷೆಯಲ್ಲಿದ್ದ ಡಾ. ಪಿ.ಎಸ್.ಹರ್ಷ ಅವರನ್ನು ಬಳ್ಳಾರಿ ವಲಯ ಐಜಿಪಿಯನ್ನಾಗಿ ನಿಯೋಜಿಸಿದೆ. ಇನ್ನು ಗಲಾಟೆ ಸಂಬಂಧ ಎಸ್ ಪಿ ಅವರನ್ನು ಅಮಾನತು ಮಾಡಿದ್ದ ಸರಕಾರ ಬದಲಿಗೆ ತಾತ್ಕಾಲಿಕವಾಗಿ ಚಿತ್ರದುರ್ಗ ಎಸ್ ಪಿ ರಂಜಿತ್ ಕುಮಾರ್ ಅವರಿಗೆ ಜಿಲ್ಲೆಯ ಉಸ್ತುವಾರಿ ವಹಿಸಿಲಾಗಿದೆ. ಇದೀಗ ಆ ಸ್ಥಾನಕ್ಕೆ ಗುಪ್ತಾಚಾರ ಇಲಾಖೆಯ ಡೆಪ್ಯೂಟಿ ಕಮೀಷನರ್ ಆಗಿದ್ದ ಡಾ. ಸುಮನ್ ಡಿ.ಪನ್ನೇಕರ್ ಅವರನ್ನು ನಿಯೋಜಿಸಿ ಆದೇಶ ಹೊರಡಿಸಿದೆ. ಪೊಲೀಸ್ ಐಜಿ ವರ್ತಿಕಾ ಕಟಿಯಾರ್ ಅವರನ್ನ ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಬಳ್ಳಾರಿ ವಲಯಕ್ಕೆ ನೂತನ ಐಜಿ ಆಗಿ ಪಿಎಸ್ ಹರ್ಷ ಹಾಗೂ ನೂತನ ಎಸ್ಪಿ ಆಗಿ ಡಾ.ಸುಮನ್ ಡಿ ಪೆನ್ನೇಕರ್ ಅವರನ್ನ ನೇಮಕ ಮಾಡಿ ಆದೇಶ ಹೊರಡಿಸಲಾಗಿದೆ.

## ಮಹಿಳೆಯ ವಿವಸ್ತ್ರ: ಸತ್ಯ ಮಿಥ್ಯ?

• ಮಲ್ಲಮ್ಮ ನುಡಿ ವಾರ್ತೆ ಹುಬ್ಬಳ್ಳಿ

ಪೊಲೀಸರು ತಮ್ಮ ಕಾರ್ಯಕರ್ತೆಯನ್ನು ಬಂಧಿಸಿ ಆಕೆಯ ಮೇಲೆ ಹಲ್ಲೆ ನಡೆಸಿ ಬಟ್ಟೆ ಹರಿದು ಹಾಕಿದ್ದಾರೆ ಎಂದು ಭಾರತೀಯ ಜನತಾ ಪಕ್ಷ (ಬಿಜೆಪಿ) ಆರೋಪಿಸಿದೆ.

ಬಸ್‌ನಲ್ಲಿ ಪುರುಷ ಮತ್ತು ಮಹಿಳಾ ಪೊಲೀಸರು ಬಿಜೆಪಿ ಕಾರ್ಯಕರ್ತೆಯನ್ನು ಸುತ್ತುವರೆದಿರುವ ವೀಡಿಯೊವೊಂದು ಹರಿದಾಡುತ್ತಿದ್ದು, ಆಕೆಯ ಮೇಲೆ ಹಲ್ಲೆ ನಡೆಸಿ ಬಟ್ಟೆಹರಿದು ಹಾಕಲಾಗಿದೆ ಎಂದು ಬಿಜೆಪಿ ಆರೋಪಿಸಿದೆ. ಮಹಿಳೆ ಟಾಪ್ಲೆಸ್ ಆಗಿರುವ ವಿಡಿಯೋ ವೈರಲ್ ಆಗಿದ್ದು, ವಿವಾದಕ್ಕೆ ಕಾರಣವಾಗಿದೆ. ಆದರೆ ಬಿಜೆಪಿಯ ಈ ಆರೋಪವನ್ನು ಪೊಲೀಸರು ತಳ್ಳಿಹಾಕಿದ್ದಾರೆ. ಮಹಿಳೆಯನ್ನ ವಶಕ್ಕೆ ಪಡೆದಾಗ ಆಕೆ ವಿವಸ್ತ್ರಳಾಗಿರಲಿಲ್ಲ. ವ್ಯಾನ್ ಹತ್ತಿದ ಮೇಲೆ ತಾನೇ ಬಟ್ಟೆ ಬಿಚ್ಚಿ ಸೀನ್ ಕ್ರಿಯೇಟ್ ಮಾಡಿದ್ದಾಳೆ ಎಂದು ಹುಬ್ಬಳ್ಳಿ ಧಾರವಾಡ ಪೊಲೀಸ್ ಆಯುಕ್ತ ಶಶಿಕುಮಾರ್ ತಿಳಿಸಿದ್ದಾರೆ.

## ಬಿಎಂಟಿಸಿ ಬಸ್ ಸಂಚಾರ ವಿಸ್ತರಣೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು ದಕ್ಷಿಣ

ಮಹಾನಗರ ಪಾಲಿಕೆ ಗಡಿಯಿಂದ 40 ಕಿಲೋ ಮೀಟರ್ ವ್ಯಾಪ್ತಿವರೆಗೆ ಬಿಎಂಟಿಸಿ ಬಸ್‌ಗಳ ಸಂಚಾರ ವಿಸ್ತರಿಸಲು ತೀರ್ಮಾನಿಸಲಾಗಿದೆ ಎಂದು ಸಾರಿಗೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾರೆಡ್ಡಿ ಹೇಳಿದ್ದಾರೆ. ನಗರದ ಕೆಎಸ್ ಆರ್ ಟಿಸಿ ಬಸ್ ನಿಲ್ದಾಣದ ಆವರಣದಲ್ಲಿ ನಗರಸಭೆ ವ್ಯಾಪ್ತಿಯಲ್ಲಿ ನಗರ ಸಾರಿಗೆ ಬಸ್ ಸಂಚಾರ ಪ್ರಾರಂಭೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಚಿವ, ಇಂದೇ ಆದೇಶ ಹೊರಡಿಸಲಾಗುವುದು. ಇದರಿಂದ ಬೆಂಗಳೂರು ದಕ್ಷಿಣ ಜಿಲ್ಲೆಗೂ ಬಿಎಂಟಿಸಿ ಬಸ್ ಗಳ ಸೇವೆ ಸಿಗಲಿದೆ ಶಾಸಕರ ಬೇಡಿಕೆಯಂತೆ ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರ, ಚನ್ನಪಟ್ಟಣ, ಕನಕಪುರ, ಹಾರೋಹಳ್ಳಿ ಹಾಗೂ ಮಾಗಡಿ ತಾಲೂಕುಗಳಲ್ಲಿಯೂ ಬಿಎಂಟಿಸಿ ಬಸ್ಗಳು ಸಂಚರಿಸಲಿವೆ ಎಂದು ಮಾಹಿತಿ ನೀಡಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೆಲ ತಾಲೂಕುಗಳಲ್ಲಿ ಬಿಎಂಟಿಸಿ ಬಸ್‌ಗಳು ಸಂಚರಿಸುತ್ತಿದ್ದವು. ಈಗ ಬೆಂಗಳೂರು ದಕ್ಷಿಣ ಜಿಲ್ಲೆಗೂ ಸೇವೆ ವಿಸ್ತರಣೆಯಾಗಿದೆ. ಶಾಸಕ ಇಕ್ಬಾಲ್ ಹುಸೇನ್ ಅಧಿವೇಶನದಲ್ಲಿ ಜಿಲ್ಲಾ ಕೇಂದ್ರ ರಾಮನಗರಕ್ಕೆ ನಗರ ಸಾರಿಗೆ ಬಸ್ ಬೇಕೆಂದು ಮನವಿ ಮಾಡಿದ್ದರು. ಅದರಂತೆ ನಗರ ಸಾರಿಗೆ ಬಸ್ ವ್ಯವಸ್ಥೆ ಕಲ್ಪಿಸಿದ್ದೇವೆ ಎಂದು ಸ್ಪಷ್ಟಪಡಿಸಿದ್ದಾರೆ.



## ಕಾರಾಗೃಹದಲ್ಲಿ ಮತ್ತೆ ಕಾದಾಟ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಕೇಂದ್ರ ಕಾರಾಗೃಹ (ಸೆಂಟ್ರಲ್ ಜೈಲ್) ದಲ್ಲಿ ಕೈದಿಗಳ ನಡುವೆ ಹೊಡೆದಾಟ ನಡೆದಿದೆ. ಬೆಂಗಳೂರು ಮೂಲದ ಕೈದಿ ಮತ್ತು ಸ್ಥಳೀಯ ಕೈದಿಗಳ ಮಧ್ಯೆ ಮಾರಾಮಾರಿ ನಡೆದಿದೆ ಎನ್ನಲಾಗಿದೆ.




ಕ್ಷುಲ್ಲಕ ಕಾರಣಕ್ಕೆ ಕೈದಿಗಳು ಪರಸ್ಪರ ಹೊಡೆದಾಡಿಕೊಂಡಿದ್ದಾರೆ. ಬೆಂಗಳೂರು ಮೂಲದ ವೆಂಕಟರಮಣ ಎಂಬ ಕೈದಿಯಿಂದ ಅವ್ಯಾಚ್ಯ ಶಬ್ದಗಳಿಂದ ಸ್ಥಳೀಯ ಕೈದಿಗಳಿಗೆ ನಿಂದನೆ ಮಾಡಿದ್ದಾನೆ ಎನ್ನಲಾಗಿದೆ. ಸ್ಥಳೀಯ ಕೈದಿಗಳು ಪ್ರತಿಯಾಗಿ ಅವ್ಯಾಚ್ಯ ಶಬ್ದಗಳಿಂದ ನಿಂದನೆ ಮಾಡಿದ್ದಾರೆ. ಮಾತಿಗೆ ಮಾತು ಬೆಳೆದು ಹೊಡೆದಾಟ ನಡೆದಿದೆ. ಪ್ರಮುಖವಾಗಿ ರೊಚ್ಚಿಗೆದ್ದ ಸ್ಥಳೀಯ ಕೈದಿಗಳಿಂದ ಬೆಂಗಳೂರು ಮೂಲದ ಕೈದಿ ಮೇಲೆ ಹಲ್ಲೆ ನಡೆದಿದೆ. ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಿಂದ ಕಲಬುರಗಿ ಜೈಲಿಗೆ ವೆಂಕಟರಮಣ ವರ್ಗಾವಣೆ ಮಾಡಲಾಗಿತ್ತು. ವಿಡಿಯೋವೊಂದನ್ನ ರಿಲಿಸ್ ಮಾಡಿದ್ದಕ್ಕೆ ಕೈದಿ ವೆಂಕಟರಮಣನಿಗೆ ಪನಿಷಮೆಂಟ್ ಟ್ರಾನ್ಸಫರ್ ಕಲಬುರಗಿ ಜೈಲಿಗೆ ಮಾಡಲಾಗಿತ್ತು. ಈ ಹೊಡೆದಾಟದಿಂದ ಸೆಂಟ್ರಲ್ ಜೈಲಿನಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದೆ.ಎಸಿಪಿ ಸೇರಿದಂತೆ, ಫರಹತಾಬಾದ್ ಠಾಣೆಯ ಇನ್ಸ್ ಪೆಕ್ಟರ್ ಹುಸೇನ್ ಭಾಷಾ ಹಾಗೂ ಇತರರು ಜೈಲಿಗೆ ದೌಡಾಯಿಸಿದ್ದಾರೆ.

## ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವ ಪೂರ್ವಭಾವಿ ಸಭೆ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಹುಮನಾಬಾದ ಪಟ್ಟಣದ ಆರಾಧ್ಯ ದೇವರಾದ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವ ಅಂಗವಾಗಿ ಜ.6 ರಂದು ಶ್ರೀ ಬಸವರಾಜ ಎಚ್.ಪಾಟೀಲ ಕಲ್ಯಾಣ ಮಂಟಪದಲ್ಲಿ ಪೂರ್ವಭಾವಿ ಸಭೆಯನ್ನು ಏರ್ಪಡಿಸಲಾಗಿತ್ತು. ಕಾರಣಾಂತರಗಳಿಂದ ಮುಂದೂಡಲಾಗಿದ್ದ ಜಾತ್ರಾ ಪೂರ್ವಭಾವಿ ಸಭೆಯನ್ನು ಜನವರಿ.9 ರಂದು ಸಾಯಂಕಾಲ 7 ಗಂಟೆಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಶ್ರೀ ಬಸವರಾಜ ಎಚ್.ಪಾಟೀಲ ಕಲ್ಯಾಣ ಮಂಟಪದಲ್ಲಿ ಜಾತ್ರಾ ಪೂರ್ವಭಾವಿ ಸಭೆಯನ್ನು ಮರುನಿಗದಿಪಡಿಸಲಾಗಿದೆ.



ಆದ್ದರಿಂದ ಹುಮನಾಬಾದ ತಾಲ್ಲೂಕಿನ ಜನಪ್ರತಿನಿಧಿಗಳು, ದೇವಸ್ಥಾನ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರು ಹಾಗೂ ಸರ್ವ ಸದಸ್ಯರು, ಗಣ್ಯವ್ಯಕ್ತಿಗಳು, ಎಲ್ಲಾ ಭಕ್ತಾಧಿಗಳು ಹಾಗೂ ಹಿಂದಿನ ವರ್ಷದ ಜಾತ್ರಾ ಸಮಿತಿಯ ಎಲ್ಲಾ ಸದಸ್ಯರು ಸಭೆಗೆ ಹಾಜರಾಗುವಂತೆ ಬಸವಕಲ್ಯಾಣ ಸಹಾಯಕ ಆಯುಕ್ತರು ಹಾಗೂ ಹುಮನಾಬಾದ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಾಜ್ಯದ ದುರಾಡಳಿತವನ್ನು ನಾಡಿನ ಜನರ ಮುಂದೆ ಇಡುತ್ತೇವೆ: ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ

# ಶಿಸ್ತು ಬದ್ಧತೆಯಿಂದ ಕೆಲಸ ಮಾಡಿ ನ್ಯಾ.ರಮಾಕಾಂತ ಚವ್ಹಾಣ್

• **ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್:**



ಜ. 07 ತಾಲ್ಲೂಕಿನ ಸರಕಾರಿ ಕಚೇರಿಗಳ ಕಾರ್ಯಪದ್ಧತಿ ಮತ್ತು ಸ್ವಚ್ಛತೆಯ ಕುರಿತು ಲೋಕಾಯುಕ್ತ ನ್ಯಾಯಾಧೀಶ ನ್ಯಾ. ರಮಾಕಾಂತ ಚವ್ಹಾಣ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪಟ್ಟಣದಲ್ಲಿನ ಪುರಸಭೆ, ತಾಪಂ, ತಹಸೀಲ್ದಾರ್, ಬಸ್ ನಿಲ್ದಾಣ, ಅಂಗನವಾಡಿ ಭೇಟಿ ನೀಡಿ ಅಧಿಕಾರಿಗಳ ಕೆಲಸದ ನಡವಳಿಕೆಯನ್ನು ಪರಿಶೀಲಿಸಿ "ತಾಲ್ಲೂಕಿನಲ್ಲಿ ಸ್ವಚ್ಛತೆಯಿಲ್ಲ, ಶೌಚಾಲಯ ನಿರ್ಮಾಣದ ಪ್ರಗತಿ ಕುಂಠಿತವಾಗಿದೆ. ಕಚೇರಿಗಳಲ್ಲಿ ಸೂಚನಾ ಫಲಕಗಳೂ ಸರಿಯಾಗಿ ಅಳವಡಿಸಿಲ್ಲ. ತರಾತುರಿಯಲ್ಲಿ ಕೆಲಸ ಮುಗಿಸುವ ಬದಲು ಶಿಸ್ತಿನಿಂದ ಕಾರ್ಯನಿರ್ವಹಿಸಬೇಕು. ಜನರಿಂದ ಬಂದ ತಕರಾರುಗಳ ಪರಿಹಾರ ಕ್ರಮಗಳ ಕುರಿತು ತಕ್ಷಣ ವರದಿ ನೀಡಲು ಅಧಿಕಾರಿಗಳಿಗೆ ಸೂಚಿಸಿದರು.

ಪುರಸಭೆಯ ವಾಣಿಜ್ಯ ಮಳಿಗೆಗಳ ಮರು ಟೆಂಡರ್, ಕಸ ವಿಲೇವಾರಿ, ಉದ್ಯಾನವನ, ಅನಧಿಕೃತ ಲೇಔಟ್ ಸೇರಿದಂತೆ ಸಾರ್ವಜನಿಕರ ದೂರುಗಳ ವಿವರ ಪಡೆದು ಮಾಹಿತಿ ನೀಡಲು ಮುಖ್ಯಾಧಿಕಾರಿಗಳಿಗೆ ತಿಳಿಸಿದರು.

ತಾಲ್ಲೂಕು ಪಂಚಾಯಿತಿ ದಾಖಲೆ ನಿರ್ವಹಣೆ, ಸಕಾಲ ಮಾಹಿತಿ ಫಲಕ ಹಾಗೂ ಹಾಜರಾತಿ ನಿರ್ವಹಣೆಯಲ್ಲಿನ ಲೋಪದೋಷಗಳ ಬಗ್ಗೆ ಲೋಕಾಯುಕ್ತರು ಅಸಮಾಧಾನ ವ್ಯಕ್ತಪಡಿಸಿ ಗ್ರಾಮಾಂತರ ಪ್ರದೇಶಗಳಲ್ಲಿ ಇನ್ನೂ ಬಾಕಿಯಿರುವ 1000 ಶೌಚಾಲಯ ನಿರ್ಮಾಣ ಹಾಗೂ ಗ್ರಾಮ ಪಂಚಾಯಿತಿ ಪಿಡಿಓಗಳು ಸರಿಯಾಗಿ ಜನರಿಗೆ ಸಿಗುತ್ತಿಲ್ಲ ಎನ್ನುವ ದೂರುಗಳು ಸೇರಿದಂತೆ 15% ವಿಕಲಚೇತನರ ಅನುದಾನ ಬಳಕೆಯ ವರದಿ ನೀಡಲು ಯೋಜನಾಧಿಕಾರಿಗಳಿಗೆ ಸೂಚಿಸಿದರು.

ತಹಶೀಲ್ದಾರ್ ಕಚೇರಿಗೆ ಬರುವ ಮಾರ್ಗ ಸರಿ ಪಡಿಸಲು, ಬಾರಿ ಬಿರುಗಾಳಿಗೆ ತುತ್ತಾದ ಮನೆಗಳಿಗೆ ಪರಿಹಾರ, ಖಾಯಂ ಹಾಗೂ ಗುತ್ತಿಗೆ ಅಧಾರದ ಮೇಲೆ ಕಾರ್ಯ ನಿರ್ವಹಿಸುವ ಸಿಬ್ಬಂದಿ ಹಾಜರಾತಿ ವಿವರಗಳ ಮಾಹಿತಿಯನ್ನೂ ನೀಡಲು ತಹಸೀಲ್ದಾರ್ ರವರಿಗೆ ಸೂಚಿಸಿದರು. ಕಂದಾಯ ಸಿಬ್ಬಂದಿಯ ಡಿಜಿಟಲ್ ಪಾವತಿ ಪರಿಶೀಲನೆ ಮಾಡಿ ಅವರಿಂದ ಹಣ ಸಂದಾಯದ ಮಾಹಿತಿ ಪಡೆದರು.

ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿ ಮಕ್ಕಳಿಗೆ ಸರಿಯಾದ ಪೌಷ್ಟಿಕ ಆಹಾರ ಸರಬರಾಜು ಹಾಗೂ ಮೊಟ್ಟೆ ವಿತರಣೆ ಕುರಿತು ಮಾಹಿತಿ ಪಡೆದರು. ಬಸ್ ನಿಲ್ದಾಣದಲ್ಲಿನ ತಂಗುದಾಣ, ಕುಡಿಯುವ ನೀರಿನ ವ್ಯವಸ್ಥೆ, ಕಸದ ತೊಟ್ಟಿ, ಸಾರ್ವಜನಿಕ ಶೌಚಾಲಯ, ಮಾಹಿತಿ ಪಡೆದು ಸ್ವಚ್ಛತೆಗೆ ಹೆಚ್ಚಿನ ಮಹತ್ವ ನೀಡಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

# ಶಾಂತಿ, ತಾಳ್ಮೆಯಿಂದ ಬದುಕಲು ಮಾನವೀಯ ಮೌಲ್ಯಗಳ ಪಾತ್ರ ದೊಡ್ಡದು: ಪ್ರೊ| ಅಮರೇಶ ಪಾಟೀಲ



• **ಮಲ್ಲಮ್ಮ ನುಡಿ ವಾರ್ತೆ ಬೀದರ :**

8ನೇ ಜ. 2026. ಗೌರವಾನ್ವಿತ ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಸದಸ್ಯರು ಹಾಗೂ ಬಿ.ವಿ.ಬಿ. ಶಾಲಾ ಕಾಲೇಜು ಆವರಣದ ಸಂಚಾಲಕರಾದ ಡಾ. ರಜನೀಶ್ ಎಸ್. ವಾಲಿಯವರು ತಮ್ಮ ಅಮೃತ ಹಸ್ತದಿಂದ ಸಸಿಗೆ ನೀರೆಯುವುದರ ಮುಖಾಂತರ ಮಾನವೀಯ ಮೌಲ್ಯಗಳ ಕಾರ್ಯಗಾರವನ್ನು ಉದ್ಘಾಟಿಸಿ ಮಾತನಾಡುತ್ತಾ ಇಂದು ಜಗತ್ತು ನೈತಿಕ ಮೌಲ್ಯಗಳು ಹಾಗೂ ಪ್ರಮಾಣಿಕತೆ, ಗೌರವ, ಸಹಾನುಭೂತಿ, ನ್ಯಾಯ, ಪ್ರೀತಿ ವಿಶ್ವಾಸ ಪ್ರತಿಯೊಬ್ಬ ವ್ಯಕ್ತಿ ಗಳಿಸಿಕೊಂಡು ಹೋಗಬೇಕು ಆಗ ಮಾತ್ರ ಕುವೆಂಪು ಅವರು ಹೇಳಿದ ಸಂದೇಶ ಮನುಜಕುಲ ತಾನೊಂದೇ ವಲಂ ಎಂಬ ಮಾತಿಗೆ ಗೌರವ ಸೂಚಿಸಿದಂತೆ ಆಗುತ್ತದೆ ಎಂದು ಮಾರ್ಮಿಕವಾಗಿ ನುಡಿದರು.

ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಪ್ರೊ: ಅಮರೇಶ ಪಾಟೀಲ ಅವರು ಶಿಕ್ಷಕರನ್ನು ಉದ್ದೇಶಿಸಿ ಮಾನವೀಯ ಮೌಲ್ಯಗಳ ಬಗ್ಗೆ ಮಾತನಾಡುತ್ತಾ ಇಂದು ಪ್ರತಿಯೊಬ್ಬ ವ್ಯಕ್ತಿ ಇತರರನ್ನು ಗೌರವಿಸುವುದು, ಪರರ ನೋವಲ್ಲಿ ಆತ್ಮ ವಿಮರ್ಶೆ ಮಡಿಕೊಂಡು ಅವರ ನೋವಲ್ಲಿ ಭಾಗವಹಿಸಿ ಅದಕ್ಕೆ ಪರಿಹಾರ ಕಂಡುಕೊಳ್ಳುವುದು ಮುಖ್ಯವಾಗಿದೆ ಹಾಗೂ ಪರಸ್ಪರಲ್ಲಿ ನಂಬಿಕೆ, ಪ್ರೀತಿ, ವಿಶ್ವಾಸ ಸಂಬಂಧಗಳಲ್ಲಿ ವಿಶ್ವಾಸ ಸಮಾನತೆ ಮತ್ತು ಸರಿಯಾದುದನ್ನು ಬೆಂಬಲಿಸುವುದು ಕ್ರೌರ್ಯಕ್ಕೆ ಒತ್ತುಕೊಡದೆ ವ್ಯಕ್ತಿಗಳ ಮನಸ್ಸಿನಲ್ಲಿ ತಾಳ್ಮೆ, ಸಹನೆ, ಮಾನವೀಯ ಮೌಲ್ಯಗಳ ವ್ಯಕ್ತಿಗಳ ನಡುವಿನ ಸಂಬಂಧಗಳನ್ನು ಸುಧಾರಿಸುತ್ತದೆ, ಒತ್ತಡವನ್ನು ಕಡಿಮೆ ಮಾಡುತ್ತದೆ ಸಮಾಜದಲ್ಲಿ ಸಾಮರಸ್ಯದ ಜೀವನಕ್ಕೆ ನೆರವಾಗುತ್ತದೆ, ಮಹಾತ್ಮ ಗಾಂಧೀಜಿಯವರು ಹೇಳಿದಂತೆ ಸರ್ವೆ ಜನ: ಸುಖಿನೋ ಭವಂತು ಎಂಬ ನುಡಿಯಲ್ಲಿ ಅಡಗಿರುವ ಮಾರ್ಮಿಕ ಸತ್ಯವನ್ನು ತಿಳಿದುಕೊಂಡಾಗ ಈ ಜಗತ್ತು ಶಾಂತಿಯಿಂದ ಬದುಕಲು ಸಾಧ್ಯ ಹಾಗೂ ಸ್ವಾಮಿ ವಿವೇಕಾನಂದರು ನುಡಿದಂತೆ ಪ್ರತಿಯೊಬ್ಬ ವ್ಯಕ್ತಿಯಲ್ಲಿಯು ಒಂದು ನಿಗೂಢ ಶಕ್ತಿ ಒಳಗೊಂಡಿದೆ ಆ ಶಕ್ತಿ ಸದಾ ಚೈತನ್ಯಶೀಲವಾಗಿ ಸಮಾಜದ ಪ್ರತಿಯೊಬ್ಬರ ವ್ಯಕ್ತಿಯ ಸಹೃದಯಕ್ಕೆ ನಾಟುವಂತೆ ಕಾರ್ಯ ಮಾಡಿದಾಗ ಸಮಾಜ ಹಾಗೂ ಸಮಾಜದಲ್ಲಿ ಇರುವ ವಿದ್ಯಾರ್ಥಿಗಳಿಗೆ ಶಿಕ್ಷಕರು ನುಡಿದಂತೆ ನಡೆಯುವಂತೆ ಹಾಗೂ ಅರಿವೇ ಗುರುವೆಂಬ ವಿಶ್ವಗುರು ಬಸವಣ್ಣನವರ ಸಂದೇಶವನ್ನು ಜಗತ್ತಿಗೆ ತಿಳಿಸಲು ಶಿಕ್ಷಕರ ಪಾತ್ರ ಬಹಳ ಮುಖ್ಯವಾಗಿದೆ ಎಂದು ಮಾರ್ಮಿಕವಾಗಿ ನುಡಿದರು. ಈ ಕಾರ್ಯಕ್ರಮದಲ್ಲಿ ವೇದಿಕೆಯ ಮೇಲೆ ಶ್ರೀ ಮನ್‌ಪ್ರಿತಸಿಂಗ್ ಬಂಟಿ ಉಪಸ್ಥಿತರಿದ್ದರು.

ಈ ಕಾರ್ಯಕ್ರಮದಲ್ಲಿ ಶ್ರೀಮತಿ ಅಂಜನಾ ಆರ್.ವಾಲಿ, ಶ್ರೀ ಆದೀಶ ವಾಲಿ, ಶ್ರೀ ಅನುಶೂಲ್ ವಾಲಿ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ದೀಪಾ ರಾಗ ಬಸವೇಶ್ವರ ಶಿಕ್ಷಣದ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಮಲ್ಲಿಕಾರ್ಜುನ ಕನಕಟ್ಟೆ, ನ್ಯಾಷನಲ್ ಆಂಗ್ಲ ಮಾಧ್ಯಮ ಶಾಲೆ ಹಾಗೂ ಸೈನಿಕ ಶಾಲೆ ಪ್ರಾಂಶುಪಾಲರಾದ ಶ್ರೀಮತಿ ಶ್ರೀಲತಾ ಹಾಜರಿದ್ದರು ಹಾಗೂ ಈ ಕಾರ್ಯಗಾರದಲ್ಲಿ ಬಿ.ವಿ.ಬಿ. ಶಾಲಾ ಕಾಲೇಜು ಆವರಣದ ಎಲ್ಲಾ ಅಂಗ ಸಂಸ್ಥೆಗಳ ಪ್ರಾಧ್ಯಾಪಕರು, ಶಿಕ್ಷಕರು ಹಾಗೂ ಬೋಧಕೇತರ ಸಿಬ್ಬಂದಿಗಳು ಹಾಜರಿದ್ದರು.



**ಸಿದ್ದಣ್ಣಾ ಗಿರಿಗೌಡರ ಆರಕ್ಷಕ ಉಪ ನಿರೀಕ್ಷಕರಾದ ಮಾರ್ಕೆಟ್ ಪೊಲೀಸ್ ಠಾಣೆ ಅವರಿಗೆ 2026ನೇ ಸಾಲಿನ ಮಲ್ಲಮ್ಮ ನುಡಿ ಪ್ರಾದೇಶಿಕ ಪತ್ರಿಕೆಯ ಕ್ಯಾಲೆಂಡರ್ ನೀಡಲಾಯಿತು,**



ಬೀದರ ತಾಲೂಕಾ ಪಂಚಾಯತ್ ಕಾರ್ಯನಿರ್ವಹಣಾ ಅಧಿಕಾರಿಯಾದ ಮಾಣಿಕರಾವ್ ಪಾಟೀಲ್ ಅವರಿಗೆ 2026ನೇ ಸಾಲಿನ ಮಲ್ಲಮ್ಮ ನುಡಿ ಪ್ರಾದೇಶಿಕ ಪತ್ರಿಕೆಯ ಕ್ಯಾಲೆಂಡರ್ ವಿತರಿಸಲಾಯಿತು,

# ಹೆಚ್ಚುವರಿ ಎಸ್ಪಿ ಪೂಜಾರಿ ಕಾರ್ಯಕ್ಕೆ ಎಲ್ಲೆಡೆ ಮೆಚ್ಚುಗೆ

**ಮಲ್ಲಮ್ಮ ನುಡಿ ವಾರ್ತೆ**



**ಬೀದರ್:** ಒಬ್ಬ ಅಧಿಕಾರಿಯಲ್ಲಿ ಸಮಯಪ್ರಜ್ಞೆ, ಪರಿಸ್ಥಿತಿಯ ಸೂಕ್ಷ್ಮ ಗ್ರಹಿಕೆ,ಮುಂದಾಲೋಚನೆ ಇದ್ದರೆ ದೊಡ್ಡ ಘರ್ಷಣೆ, ಅನಾಹುತ ತಪ್ಪಿಸಬಹುದು ಎಂಬುದಕ್ಕೆ ಬೀದರ್ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಚಂದ್ರಕಾಂತ ಪೂಜಾರಿ ನಿದರ್ಶನ ಎನಿಸಿದ್ದಾರೆ.

ಹೌದು.ಸೋಮವಾರ ಜಿಪಂ ಸಭಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅಧ್ಯಕ್ಷತೆಯ ಕೆಡಿಪಿ ಸಭೆಯಲ್ಲಿ ಶಾಸಕ ಡಾ.ಸಿದ್ದು ಪಾಟೀಲ್ ಮತ್ತು ವಿಧಾನ ಪರಿಷತ್ ಸದಸ್ಯ ಭೀಮರಾವ ಪಾಟೀಲ್ ನಡುವೆ ಕೈ ಕೈ ಮಿಲಾಯಿಸಿ ಜಗಳ ಆರಂಭವಾಗುತ್ತಿತ್ತು. ಇನ್ನೇನು ಹೊಡೆದಾಟ ಆರಂಭವಾಗುವ ಹೊತ್ತಿನಲ್ಲೇ ಚಂದ್ರಕಾಂತ ಪೂಜಾರಿ ಮಧ್ಯೆ ಪ್ರವೇಶಿಸಿ ಗಲಾಟೆಗೆ ಬ್ರೇಕ್ ಹಾಕಿ, ಮುಂದೆ ಆಗಬಹುದಾದ ದೊಡ್ಡ ಸಂಘರ್ಷ ಅಕ್ಷರಶಃ ತಪ್ಪಿಸಿದರು.

ಇಬ್ಬರ ನಡುವೆ ಶುರುವಾದ ವಾದ-ವಿವಾದ ಕ್ರಮೇಣ ವಿಕೋಪಕ್ಕೆ ಹೋಗುತ್ತಿತ್ತು. ಇದನ್ನು ಅಲ್ಲೇ ಕುಳಿತಿದ್ದ ಪೂಜಾರಿ ಬಹಳ ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಇದು ಮತ್ತಷ್ಟು ತೀವ್ರವಾಗುವುದು ಅರಿತ ಪೂಜಾರಿ ಅವರು ಹಿಂದೆ ಕುರ್ಚಿಯಲ್ಲಿ ಕುಳಿತವರು ಎದ್ದರು. ಅದೇ ವೇಳೆ ಎಂಎಲ್ಸಿ ಭೀಮರಾವ ಪಾಟೀಲ್ ಅವರು ಸಹ ಎದ್ದು ಶಾಸಕ ಡಾ.ಸಿದ್ದು ಪಾಟೀಲ್ ಕಡೆ ಹೊರಟಿದ್ದರು.ತಕ್ಷಣ ಹಿಂದೆ ಓಡಿಬಂದ ಪೂಜಾರಿ ಅವರು ಮಧ್ಯೆ ಪ್ರವೇಶಿಸಿ ಪರಸ್ಪರರ ಹೊಡೆದಾಟ ನಿಲ್ಲಿಸಿದರು. ಪೂಜಾರಿ ಅವರ ಸಮಯಪ್ರಜ್ಞೆ ದೊಡ್ಡ ಗಲಾಟೆ ತಪ್ಪಿಸಿತೆಂದೇ ಹೇಳಬಹುದು. ಪೂಜಾರಿ ಅವರು ನಾಲ್ಕೈದು ಸೆಕೆಂಡ್ ತಡಮಾಡಿದರೂ ಪರಿಸ್ಥಿತಿ ಬೇರೆ ಆಗುತ್ತಿತ್ತು ಎಂಬುದು ಆಗಿನ ಸಮಯದ ಕಾವು ಸ್ಪಷ್ಟವಾಗಿ ತಿಳಿಸುತ್ತದೆ. ಪೂಜಾರಿ ಹಿರಿಯ ಪೊಲೀಸ್ ಅಧಿಕಾರಿ. ಬೀದರ್ ಜಿಲ್ಲೆಯಲ್ಲಿ ಎರಡು ದಶಕ ಸೇವೆ ಸಲ್ಲಿಸಿದ ಅನುಭವಿಗಳು. ಹುಮನಾಬಾದ್ ಠಾಣೆಯಿಂದಲೇ ಇವರ ಕರ್ತವ್ಯ ಆರಂಭವಾಗಿದೆ. ಹುಮನಾಬಾದ್ ಡಿಎಸ್ಪಿಯಾಗಿಯೂ ಕೆಲಸ ಮಾಡಿದ್ದಾರೆ. ಸ್ಥಳೀಯ ರಾಜಕೀಯ ನಾಯಕರು, ಅವರ ಮನಸ್ಥಿತಿ, ರಾಜಕಾರಣ ಎಲ್ಲವೂ ಚೆನ್ನಾಗಿ ಬಲ್ಲವರು. ಈ ಮಾಹಿತಿ ಜ್ಞಾನ ಪೊಲೀಸ್ ಅಧಿಕಾರಿಗಳಲ್ಲಿ ಇರಬೇಕಾದ ಅಗತ್ಯವೂ ಇದೆ. ಗೌಡರ ಎರಡು ಕುಟುಂಬಗಳ ಈಚೆಗಿನ ಸಂಬಂಧ ಬಹಳ ಹಳಸಿದೆ.ಇಲ್ಲಿ ಇಬ್ಬರ ನಡುವಿನ ಜಗಳವು ವಿಕೋಪಕ್ಕೆ ಹೋಗುವುದು ಪಕ್ಕಾ ಎಂಬುದು ಪೂಜಾರಿ ಅವರು ಹಿಂದಿನ ಬೆಳವಣಿಗೆಗಳ ಊಹೆ ಮೇಲೆ ತಿಳಿದಂತಿದೆ. ಅಂತೆಯೇ ಇಬ್ಬರ ವಾಗ್ವಾದ ಆರಂಭವಾಗುತ್ತಿದ್ದಂತೆಯೇ ಪೂಜಾರಿ ಅಲರ್ಟ ಮೋಡ್ ಗೆ ಬಂದರು. ಜಗಳ ಹೊಡೆದಾಟಕ್ಕೆ ಇಳಿಯುವಾಗ ಎಂಟ್ರಿ ಕೊಟ್ಟರು. ಬೇರೆ ಅಧಿಕಾರಿಗಳಂತೆ ಪೂಜಾರಿ ಸಹ ಕುರ್ಚಿ ಬಿಟ್ಟು ನಾಲ್ಕಾರು ಸೆಕೆಂಡ್ ಏಳದಿದ್ದರೆ ಇವರ ಗದ್ದಲ ಹೇಗೆ ಅಂತ್ಯವಾಗುತ್ತಿತ್ತೋ ಗೊತ್ತಿಲ್ಲ!

ಪೂಜಾರಿ ಕರ್ತವ್ಯಪ್ರಜ್ಞೆ, ಸಮಯಪ್ರಜ್ಞೆ, ಸಮಚಿತ್ತದ ಕಾರ್ಯ ಮೆಚ್ಚಲೇಬೇಕು. ಅವರ ಸಮಯಪ್ರಜ್ಞೆ ಹೇಗಿತ್ತು ಎಂಬುದು ಕ್ಯಾಮರಾಗಳಲ್ಲಿ ಸೆರೆಯಾಗಿದೆ. ಇದು ಸೋಷಿಯಲ್ ಮೀಡಿಯಾದಲ್ಲಿ ಸಿಕ್ಕಾಪಟ್ಟೆ ವೈರಲ್ ಸಹ ಆಗಿದೆ. ಪೂಜಾರಿ ಕಾರ್ಯಕ್ಕೆ ಅನೇಕರು ಹ್ಯಾಟ್ಸಾಫ್ ಹೇಳಿದ್ದಾರೆ.

ಪೊಲೀಸರೆಂದರೆ ಕಾನೂನು, ಸುವ್ಯವಸ್ಥೆ ಕಾಪಾಡುವುದು ಮಾತ್ರವಲ್ಲ, ಜನತಾಂತ್ರಿಕ ಪ್ರಕ್ರಿಯೆಯ ಗೌರವವನ್ನು ಉಳಿಸುವುದು ಕೂಡ ಅತೀ ಮುಖ್ಯವಾಗಿದೆ. ಈ ಕೆಲಸ ಪೂಜಾರಿ ಅವರು ಅತ್ಯಂತ ಸಮರ್ಥ ನಿಭಾಯಿಸಿದ್ದಾರೆ. ಇಂತಹ ಸಮಯಪ್ರಜ್ಞೆಯ ಅಧಿಕಾರಿಗಳಿಂದಲೇ ಆಡಳಿತ ವ್ಯವಸ್ಥೆ ಮೇಲೆ ಸಾರ್ವಜನಿಕರ ವಿಶ್ವಾಸ ಮತ್ತಷ್ಟು ಗಟ್ಟಿಯಾಗುತ್ತದೆ ಎಂಬುದು ಈ ಘಟನೆ ಸ್ಪಷ್ಟ ಸಂದೇಶವಾಗಿದೆ.

# ಜಿಲ್ಲಾ ಭೋವಿ ವಡ್ಡರ ಸಮಾಜ ಸಮಿತಿ ಬದಲಾವಣೆ: ಹಳೆಪ್ಪ ಧೋತ್ರೆ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**



ಯಾದಗಿರಿ ಜಿಲ್ಲಾ ಭೋವಿ ವಡ್ಡರ ಸಮಾಜ ಸಮಿತಿ ಬದಲಾವಣೆ ಮತ್ತು ನೂತನವಾಗಿ ರಚನೆ ಹಾಗೂ ಶ್ರೀ ಶ್ರೀ ಶ್ರೀ ಸಿದ್ದಾರಾಮೇಶ್ವರ ಜಯಂತಿಯ ಪೂರ್ವಬಾವಿ ಮಾಡಲಗುತ್ತದೆ, ಭೋವಿ ಸಮಾಜದ ಪ್ರತಿಯೊಬ್ಬರು ಅಗಮಿಸಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ, ನೊತನ ಪದಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲು ತಮ್ಮ ಸಲಹೆ, ಸಹಕಾರ ನೀಡಬೇಕೆಂದು ಸಮಾಜದ ಮುಖಂಡ ಹಳೆಪ್ಪ ಧೋತ್ರೆ ಹೇಳಿದ್ದರು. ಯಾದಗಿರಿ ಜಿಲ್ಲಾ ಭೋವಿ ವಡ್ಡರ ಸಮಾಜದ ಸಮಿತಿ ಬದಲಾವಣೆ ಮತ್ತು ನೂತನವಾಗಿ ರಚನೆ ಮಾಡುವುದಾಗಿ ಯಾದಗಿರಿ ಜಿಲ್ಲೆಯ ಸಮಸ್ತ ಎಲ್ಲಾ ತಾಲೂಕಿನ ಸಮಾಜದ ಮುಖಂಡರು, ಯುವಕರು, ಸಮಾಜದ ಬಾಂದವರು ಸಭೆಯಲ್ಲಿ ಪಾಲ್ಗೊಂಡು ನೂತನವಾಗಿ ಪದಾಧಿಕಾರಿಗಳನ್ನು ಆಯ್ಕೆ ಮಾಡಲು ಸಮಸ್ತ ಸಮಾಜದ ಪ್ರತಿಯೊಬ್ಬರಿಗೂ ಆಯ್ಕೆ ಮಾಡಲು ಹಕ್ಕು & ಅವಕಾಶ ಇದೆ ಮತ್ತು ಶ್ರೀ ಸಿದ್ದಾರಾಮೇಶ್ವರ ಜಯಂತಿಯ ಪೂರ್ವಭಾವಿ ಸಭೆಯನ್ನು ಹಳೆಯ ಪ್ರವಾಸಿ ಮಂದಿರಲ್ಲಿ ದಿನಾಂಕ: 08-01-2026 ರಂದು ಗುರುವಾರ ಸಮಯ: ಬೆಳಿಗ್ಗೆ 10:00 ಏರ್ಪಡಿಸಲಾಗಿದೆ, ಹೆಚ್ಚಿನ ಮಾಹಿತಿಗಾಗಿ ಮೊ. 9741673632, 9880015743 ಸಂಪರ್ಕಿಸಿ ಎಂದು ತಿಳಿಸಿದ್ದರು. ಈ ವೇಳೆಯಲ್ಲಿ ಮಾರೆಪ್ಪ ತಂದೆ ಗಿರೆಪ್ಪ ವರ್ಕನಳ್ಳಿ ಮತ್ತು ಸಮಾಜದ ಹಿರಿಯ ಮುಖಂಡರು ಇದ್ದರು.

# ಸಿದ್ದರಾಮಯ್ಯ ದಾಖಲೆ: ಬೀದರನಲ್ಲಿ ಸಂಭ್ರಮಾಚರಣೆ



**ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುದೀರ್ಘ ಅವಧಿಗೆ ರಾಜ್ಯದ ಮುಖ್ಯಮಂತ್ರಿಯಾಗಿ ಕಾರ್ಯ ನಿರ್ವಹಿಸಿದ ದಾಖಲೆ ನಿರ್ಮಿಸಿದ ನಿಮಿತ್ತ ಗೊಂಡ ಸಮುದಾಯದ ಮುಖಂಡರು ಬೀದರನಲ್ಲಿ ಸಿಹಿ ವಿತರಿಸಿ ಸಂಭ್ರಮ ಆಚರಿಸಿದರು ಸಿದ್ದರಾಮಯ್ಯ ದಾಖಲೆ: ಬೀದರನಲ್ಲಿ ಸಂಭ್ರಮಾಚರಣೆ**

• **ಮಲ್ಲಮ್ಮ ನುಡಿ ವಾರ್ತೆ ಬೀದರ್:**

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುದೀರ್ಘ ಅವಧಿಗೆ ರಾಜ್ಯದ ಮುಖ್ಯಮಂತ್ರಿಯಾಗಿ ಕಾರ್ಯ ನಿರ್ವಹಿಸಿದ ದಾಖಲೆ ನಿರ್ಮಿಸಿದ ಪ್ರಯುಕ್ತ ಗೊಂಡ ಸಮುದಾಯದ ಮುಖಂಡರು ನಗರದಲ್ಲಿ ಮಂಗಳವಾರ ಸಂಭ್ರಮ ಆಚರಿಸಿದರು.ಕುಂಬಾರವಾಡದ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಸಿದ್ದರಾಮಯ್ಯ ಅವರ ಆಯುಷ್ಯ, ಆರೋಗ್ಯ ಹಾಗೂ ಹಾಲಿ ಅವಧಿ ಸುಸೂತ್ರವಾಗಿ ಪೂರ್ಣಗೊಳಿಸಲು ಪ್ರಾರ್ಥನೆ ಸಲ್ಲಿಸಿದರು. ಬಳಿಕ ಸಿಹಿ ವಿತರಣೆ ಮಾಡಿದರು.ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಪಂಡಿತರಾವ್ ಚಿದ್ರಿ, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಅಮೃತರಾವ್ ಚಿಮಕೋಡೆ, ದೇವಸ್ಥಾನದ ಅಧ್ಯಕ್ಷ ಪಾಡುರಂಗ ಇಟಕಂಪಳ್ಳಿ, ಮುಖಂಡರಾದ ರಘುನಾಥರಾವ್ ಭುರೆ, ವಿಜಯಕುಮಾರ ಡುಮ್ಮೆ ಮತ್ತಿತರರು ಇದ್ದರು.

# ಶಾಸಕ ಪ್ರಭು ಬಿ.ಚವ್ಹಾಣ ಅವರಿಂದ ಗ್ರಾಮ ಸಂಚಾರ

• **ಮಲ್ಲಮ್ಮ ನುಡಿ ವಾರ್ತೆ,ಕಮಲನಗರ:**



ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಬುಧವಾರ ವಡಗಾಂವ ಹೋಬಳಿ ವ್ಯಾಪ್ತಿಯಲ್ಲಿನ ವಿವಿಧ ಹಳ್ಳಿಗಳಲ್ಲಿ ಗ್ರಾಮ ಸಂಚಾರ ನಡೆಸಿದರು.

ಕೌಡಗಾಂವ, ಬಲ್ಲೂರ(ಜೆ) ಕೌಠಾ(ಕೆ), ಕೌಠಾ(ಬಿ), ಪಾಶಾಪೂರ, ಗಡಿಕುಶನೂರ, ಬೇಲೂರ(ಎನ್), ಆಲೂರ(ಬಿ), ಆಲೂರ(ಕೆ) ಗ್ರಾಮಗಳಲ್ಲಿ ಸಾರ್ವಜನಿಕರ ಅಹವಾಲುಗಳನ್ನು ಆಲಿಸಿ, ಕೆಲವು ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಕಲ್ಪಿಸಿದರು. ಕೌಡಗಾಂವ, ಬಲ್ಲೂರ(ಜೆ), ಕೌಠಾ(ಕೆ), ಕೌಠಾ(ಬಿ) ಗ್ರಾಮಗಳಲ್ಲಿ ಜನತೆ ಹಿಂದೆ ಸುರಿದ ವಿಪರೀತ ಮಳೆಯಿಂದಾಗಿ ವಿದ್ಯುತ್ ಕಂಬಗಳು ಉರುಳಿ ಬಿದ್ದಿವೆ. ತಂತಿಗಳು ಹಾಳಾದ ಕಾರಣ ವಿದ್ಯುತ್ ಪೂರೈಕೆ ಸಮರ್ಪಕವಾಗಿ ಆಗುತ್ತಿಲ್ಲ. ಈ ಬಾರಿ ಬಹಳಷ್ಟು ರೈತರು ಕಬ್ಬು ಬಿತ್ತನೆ ಮಾಡಿದ್ದು ವಿದ್ಯುತ್ ಸಮಸ್ಯೆಯ ಕಾರಣ ಪಂಪ್ ಸೆಟ್‌ಗಳು ನಡೆಯದೇ ಬೆಳೆಗಳು ಒಣಗುತ್ತಿದ್ದು, ರೈತರು ತೀವ್ರ ಆತಂಕದಲ್ಲಿದ್ದಾರೆ. ಇಲಾಖೆಯ ಅಧಿಕಾರಿಗಳು ಸ್ಪಂದಿಸುತ್ತಿಲ್ಲವೆಂದು ರೈತರು ಗೋಳು ತೋಡಿಕೊಂಡರು.

ಈ ವೇಳೆ ಶಾಸಕರು ಮಾತನಾಡಿ, ಹಿಂದೆ ಸುರಿದ ಭಾರೀ ಮಳೆಯಿಂದಾಗಿ ಸಾಕಷ್ಟು ಕೃಷಿ ಭೂಮಿಗಳು ಮುಳುಗಡೆಯಾಗಿ ಸಾವಿರಾರು ರೈತರು ಬೆಳೆ ಕಳೆದುಕೊಂಡು ತೀವ್ರ ಸಂಕಷ್ಟದಲ್ಲಿದ್ದಾರೆ. ನದಿ ತೀರದ ಗ್ರಾಮಗಳಲ್ಲಿನ ಕೃಷಿ ಭೂಮಿಗಳಲ್ಲಿನ ವಿದ್ಯುತ್ ಕಂಬಗಳು ಸಂಪೂರ್ಣ ಹಾಳಾಗಿವೆ. ವಿದ್ಯುತ್ ಪರಿವರ್ತಕಗಳು ನಿರುಪಯುಕ್ತವಾಗಿದ್ದು, ವಿದ್ಯುತ್ ತಂತಿಗಳು ಕಡಿದುಬಿದ್ದಿವೆ. ರೈತರು ಸಮಸ್ಯೆ ಎದುರಿಸುತ್ತಿದ್ದರೂ ಏಕೆ ನಿಷ್ಕಾಳಜಿ ವಹಿಸುತ್ತಿದ್ದೀರಿ ಎಂದು ಜೆಸ್ಕಾಂ ಅಧಿಕಾರಿಗಳಿಗೆ ತೀವ್ರ ತರಾಟೆಗೆ ತೆಗೆದುಕೊಂಡರು.

ಮಳೆ ಹಾಗೂ ಮತ್ತಿತರೆ ಕಾರಣಗಳಿಂದ ಶಿಥಿಲಗೊಂಡ ಎಲ್ಲ ವಿದ್ಯುತ್ ಕಂಬಗಳನ್ನು ಬದಲಾಯಿಸಬೇಕು. ಬಹಳಷ್ಟು ಗ್ರಾಮಗಳಲ್ಲಿ ತಂತಿಗಳು ತುಂಡಾಗಿ ಜೋತು ಬಿದ್ದಿರುವುದು ಗಮನಕ್ಕೆ ಬಂದಿದೆ. ಇವು ಅಪಾಯಕಾರಿಯಾಗಿದ್ದು, ಇಂತಹ ವಿದ್ಯುತ್ ತಂತಿಗಳನ್ನು ಬದಲಾಯಿಸಬೇಕೆಂದು ಶಾಸಕರು ನಿರ್ದೇಶನ ನೀಡಿದರು.

ವಿದ್ಯುತ್ ಪರಿವರ್ತಕಗಳು ಕೆಟ್ಟು ಹೋದರೆ ತಕ್ಷಣ ಸರಿಪಡಿಸಬೇಕು. ವಿದ್ಯುತಿಗೆ ಸಂಬಂಧಿಸಿದಂತೆ ಸಾರ್ವಜನಿಕರು ಮತ್ತು ರೈತ-ರಿಂದ ಬರುವ ದೂರವಾಣಿ ಕರೆಗಳಿಗೆ ಸ್ಪಂದಿಸಬೇಕು. ಲೈನ್ ಮ್ಯಾನ್ ಗಳು ಸರಿಯಾಗಿ ಕೆಲಸ ಮಾಡುವಂತೆ ನೋಡಿಕೊಳ್ಳಬೇಕು ಎಂದು ಶಾಸಕರು ಸೂಚಿಸಿದರು.

• **ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ ಹಾಕಿ:**

ಗ್ರಾಮ ಸಂಚಾರದ ವೇಳೆ ಕೌಠಾ(ಬಿ) ಹಾಗೂ ಬಲ್ಲೂರ(ಜೆ) ಗ್ರಾಮಗಳಲ್ಲಿ ಮಹಿಳೆಯರು ಶಾಸಕರನ್ನು ಭೇಟಿಯಾಗಿ ಗ್ರಾಮಗಳಲ್ಲಿ ಮದ್ಯ ಮಾರಾಟ ವಿಪರೀತವಾಗಿ ನಡೆಯುತ್ತಿದ್ದು, ಗ್ರಾಮದ ಬಹಳಷ್ಟು ಜನರು ವಿಪರೀತ ಮದ್ಯಪಾನ ಮಾಡುತ್ತಿದ್ದಾರೆ. ಬಹಳಷ್ಟು ಕುಟುಂಬಗಳು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಹೇಗಾದರೂ ಮಾಡಿ ನಮ್ಮ ಗ್ರಾಮದಲ್ಲಿ ಮದ್ಯ ಮಾರಾಟ ನಿಲ್ಲಿಸಬೇಕೆಂದು ಮನವಿ ಸಲ್ಲಿಸಿದರು.

ಅಕ್ರಮ ಮದ್ಯ ಮಾರಾಟಕ್ಕೆ ತುರ್ತಾಗಿ ಕಡಿವಾಣ ಹಾಕಿ ಬಡ ಕುಟುಂಬಗಳಿಗೆ ಅನುಕೂಲ ಮಾಡಿಕೊಡಬೇಕು ಎಂದು ಶಾಸಕರು ಪೊಲೀಸ್ ಅಧಿಕಾರಿಗೆ ನಿರ್ದೇಶನ ನೀಡಿದರು.

ಸಂಪೂರ್ಣ ಮದ್ಯಪಾನ ನಿಷೇಧ ಮಾಡಬೇಕೆಂಬುದು ನನ್ನ ಆಶಯವಾಗಿದ್ದು, ಈ ದಿಶೆಯಲ್ಲಿ ಪ್ರಯತ್ನ ಮುಂದುವರೆಸುತ್ತೇನೆ. ಕುಡಿತದ ವ್ಯಸನ ಬಹಳಷ್ಟು ಅಪಾಯಕಾರಿಯಾಗಿದ್ದು ಆರೋಗ್ಯ ಕೆಡುವುದಲ್ಲದೇ ಸಂಪೂರ್ಣ ಕುಟುಂಬ ಬೀದಿಗೆ ಬರುತ್ತದೆ. ಅದ್ದರಿಂದ ಕಡಿಯುವ ಅಭ್ಯಾಸ ಹೊಂದಿದವರು ಸ್ವಯಂ ಪ್ರೇರಣೆಯಿಂದ ಕುಡಿತವನ್ನು ಬಿಡಲು ಯತ್ನಿಸಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ತಹಸೀಲ್ದಾರರಾದ ಮಹೇಶ ಪಾಟೀಲ, ತಾಲ್ಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಕಿರಣ ಪಾಟೀಲ, ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಗಾಯತ್ರಿ, ಪಂಚಾಯತ ರಾಜ್ ಎಂಜಿನಿಯರಿಗ್ ಇಲಾಖೆ ಎಇಇ ಸುನೀಲ ಚಿಲ್ಲರ್ಗೆ, ಸಹಾಯಕ ಕೃಷಿ ನಿರ್ದೇಶಕ ಧೂಳಪ್ಪ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಇಮಲಪ್ಪ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಎಇಇ ಮಾರುತಿ ರಾಠೋಡ, ಪಿಎಂಜಿಎಸ್‌ವೈ ಎಇಇ ಸುಭಾಷ ವಾಗಮಾರೆ, ಎಡಿಎಲ್‌ಆರ್ ರಾಜಶ್ರೀ, ಮುಖಂಡರಾದ ಧೊಂಡಿಬಾ ನರೋಟೆ, ಶಿವಾಜಿರಾವ ಪಾಟೀಲ ಮುಂಗನಾಳ, ಖಂಡೋಬಾ ಕಂಗಟೆ, ಪ್ರಕಾಶ ಮೇತ್ರೆ, ಮಂಜು ಸ್ವಾಮಿ, ಪ್ರಕಾಶ ಜೀರ್ಗೆ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# 11 ರಂದು ಪ್ರತಿಭಾನ್ವೇಷಣೆ ವಿದ್ಯಾರ್ಥಿ ವೇತನ ಪರೀಕ್ಷೆ

• **ಮಲ್ಲಮ್ಮ ನುಡಿ ವಾರ್ತೆ ಬೀದರ್:**

ನಗರದ ಕುಂಬಾರವಾಡ ಕಮಾನ್ ಸಮೀಪದ ಸಾಯಿ ಸ್ಫೂರ್ತಿ ಪದವಿಪೂರ್ವ ಕಾಲೇಜಿನಲ್ಲಿ ಜ. 11 ರಂದು 2026-27ನೇ ಸಾಲಿನ ಸಾಯಿ ಸ್ಫೂರ್ತಿ ಪ್ರತಿಭಾನ್ವೇಷಣೆ ವಿದ್ಯಾರ್ಥಿ ವೇತನ ಪರೀಕ್ಷೆ ಸಂಘಟಿಸಲಾಗಿದೆ.ವಿಜ್ಞಾನ ಹಾಗೂ ವಾಣಿಜ್ಯ ವಿಭಾಗದ ಪ್ರವೇಶಕ್ಕೆ ಬೆಳಿಗ್ಗೆ 10 ರಿಂದ 11, ಮಧ್ಯಾಹ್ನ 12 ರಿಂದ 1 ಹಾಗೂ ಮಧ್ಯಾಹ್ನ 3 ರಿಂದ ಸಂಜೆ 4 ರ ವರೆಗೆ ಮೂರು ಹಂತದಲ್ಲಿ ಪ್ರತ್ಯೇಕ ಪರೀಕ್ಷೆ ನಡೆಯಲಿದೆ ಎಂದು ಕಾಲೇಜು ಅಧ್ಯಕ್ಷ ಚಂದ್ರಶೇಖರ ಬಿರಾದಾರ ತಿಳಿಸಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಪಡೆಯುವ ವಿದ್ಯಾರ್ಥಿಗೆ ಬಹುಮಾನ ರೂಪದಲ್ಲಿ ಲ್ಯಾಪ್‌ಟಾಪ್, ದ್ವಿತೀಯ ಸ್ಥಾನ ಗಳಿಸುವ ಇಬ್ಬರಿಗೆ ತಲಾ ಒಂದು ಟ್ಯಾಬ್, ತೃತೀಯ ಸ್ಥಾನ ಪಡೆಯುವ ಐವರಿಗೆ ತಲಾ ಒಂದು ಸ್ಮಾರ್ಟ್ ವಾರ್ಚ್ ಕೊಡಲಾಗುವುದು. ವಾಣಿಜ್ಯ ವಿಭಾಗದಲ್ಲಿ ಪ್ರಥಮ ಸ್ಥಾನ ಗಳಿಸುವ ವಿದ್ಯಾರ್ಥಿಗೆ ಟ್ಯಾಬ್, ದ್ವಿತೀಯ ಸ್ಥಾನ ಪಡೆಯುವ ಇಬ್ಬರಿಗೆ ತಲಾ ಒಂದು ಸ್ಮಾರ್ಟ್ ವಾರ್ಚ್ ಹಾಗೂ ತೃತೀಯ ಸ್ಥಾನ ಗಳಿಸುವ ಐವರಿಗೆ ಕ್ಯಾಲ್ಕುಲೇಟರ್ ನೀಡಲಾವುದು ಎಂದು ಹೇಳಿದ್ದಾರೆ.ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆಯುವ ಮೊದಲ 20 ವಿದ್ಯಾರ್ಥಿಗಳಿಗೆ ಕಾಲೇಜಿನಲ್ಲಿ ಪಿ.ಯು.ಸಿ. ಪ್ರಥಮ ಮತ್ತು ದ್ವಿತೀಯ ವರ್ಷ ಉಚಿತ ಶಿಕ್ಷಣ, ನಂತರದ 30 ವಿದ್ಯಾರ್ಥಿಗಳಿಗೆ ಶುಲ್ಕದಲ್ಲಿ ಶೇ 50 ರಷ್ಟು ರಿಯಾಯಿತಿ ಹಾಗೂ ಅನಂತರದ 50 ವಿದ್ಯಾರ್ಥಿಗಳಿಗೆ ಶುಲ್ಕದಲ್ಲಿ ಶೇ 25 ರಷ್ಟು ರಿಯಾಯಿತಿ ಕೊಡಲಾಗುವುದು ಎಂದು ತಿಳಿಸಿದ್ದಾರೆ.

# ಕ್ರಿಕೆಟ್: ರೇಸ್ ಚಾಲೆಂಜರ್ ತಂಡದ ಮಡಿಲಿಗೆ ಟ್ರೋಫಿ

**ಮಲ್ಲಮ್ಮ ನುಡಿ ವಾರ್ತೆ ಬೀದರ್:**

ತಾಲ್ಲೂಕಿನ ಯಾಕತಪುರ ಗ್ರಾಮದಲ್ಲಿ ನರಸಪ್ಪ ಜಾನಕನೋರ ಅಭಿಮಾನಿ ಬಳಗದ ವತಿಯಿಂದ ಆಯೋಜಿಸಿದ್ದ ಶ್ರೀ ಗುರು ಬಸವ ಕ್ರಿಕೆಟ್ ಟೂರ್ನಿಯ ಟ್ರೋಫಿಯನ್ನು ಗ್ರಾಮದ ರೇಸ್ ಚಾಲೆಂಜರ್ ತಂಡ ತನ್ನ ಮಡಿಲಿಗೆ ಹಾಕಿಕೊಂಡಿತು.ಸೋಮವಾರ ನಡೆದ ಅಂತಿಮ ಪಂದ್ಯದಲ್ಲಿ ಗ್ರಾಮದ ಟೀಮ್ ಸರಪಂಚ ತಂಡವನ್ನು ಸೋಲಿಸಿ ಚಾಂಪಿಯನ್ ಆಗಿ ಹೊರ ಹೊಮ್ಮಿತು. ಟೀಮ್ ಸರಪಂಚ ತಂಡ ರನ್ನರ್ ಅಪ್‌ಗೆ ತೃಪ್ತಿ ಪಟ್ಟುಕೊಂಡಿತು.ಮೊದಲು ಬ್ಯಾಟ್ ಮಾಡಿದ ರೇಸ್ ಚಾಲೆಂಜರ್ ತಂಡ ನಿಗದಿತ 8 ಓವರ್‌ಗಳಲ್ಲಿ ಐದು ವಿಕೆಟ್ ನಷ್ಟಕ್ಕೆ 75 ರನ್ ಪೇರಿಸಿತು. ನಂತರ ಬೃಹತ್ ಮೊತ್ತವನ್ನು ಬೆನ್ನಟ್ಟಿದ ಟೀಮ್ ಸರಪಂಚ ತಂಡ 3 ವಿಕೆಟ್ ಕಳೆದುಕೊಂಡು 54 ರನ್ ಮಾತ್ರ ಗಳಿಸಿತು.ನಾಗೋರಾ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ನರಸಪ್ಪ ಜಾನಕನೋರ ಅವರು ವಿಜೇತ ಹಾಗೂ ರನ್ನರ್ ಅಪ್ ತಂಡಗಳಿಗೆ ಟ್ರೋಫಿ ಮತ್ತು ನಗದು ಬಹುಮಾನ ವಿತರಿಸಿದರು.ಪ್ರೊ. ಆರ್.ವಿ. ಗಂಗಶೆಟ್ಟಿ, ಸಮಾಜ ಸೇವಕ ರಾಹುಲ್ ಮಿಶ್ರಾ ಇದ್ದರು.



# ಗ್ರಾಮಗಳಲ್ಲಿ ಅಕ್ರಮ ಮದ್ಯ ಮಾರಾಟಕ್ಕೆ ಮುಂದಾದರೆ ಕಠಿಣ ಕ್ರಮ
## ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಶರಣಪ್ಪ ಸಲಾದಪುರ



• ಮಲ್ಲಮ್ಮ ನುಡಿ ವಾರ್ತೆ
ಶಹಾಪುರ:

ರಾಜ್ಯದಲ್ಲಿಯೇ ಮೊಟ್ಟಮೊದಲು ಯಾದಗಿರಿ ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲೆಯಾದ್ಯಂತ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಅಧಿಕೃತವಾಗಿ ಆದೇಶ ಮಾಡುವ ಮೂಲಕ ಮದ್ಯಪಾನ ಮತ್ತು ವ್ಯಸನ ಮುಕ್ತ ಗ್ರಾಮ ಅಭಿಯಾನಕ್ಕೆ ಮುನ್ನುಡಿ ಬರೆದಿದ್ದಾರೆ. ಈ ಹಿನ್ನೆಲೆಯಲ್ಲಿ ಶಹಾಪುರ ತಾಲೂಕಿನ ಉಕ್ಕಿನಾಳ ಗ್ರಾಮ ಪಂಚಾಯಿತಿನಲ್ಲಿ ಮದ್ಯಪಾನ ಮತ್ತು ವ್ಯಸನ ಮುಕ್ತ ಗ್ರಾಮ ಅಭಿಯಾನಕ್ಕೆ ಅಧಿಕೃತವಾಗಿ ಚಾಲನೆ ನೀಡಲಾಗಿದೆ ಎಂದು ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಶರಣಪ್ಪ ಸಲಾದಪುರ ತಿಳಿಸಿದರು.

ಶಹಾಪುರ ತಾಲೂಕಿನ ಉಕ್ಕಿನಾಳ ಗ್ರಾಮದಲ್ಲಿ ಆಯೋಜಿಸಿದ್ದ ಮದ್ಯಪಾನ ಮತ್ತು ವ್ಯಸನ ಮುಕ್ತ ಗ್ರಾಮ ಅಭಿಯಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಪ್ರತಿ ಗ್ರಾಮಗಳ ಕಿರಾಣಿ, ಪಾನ್‌ಶಾಪ್‌ಗಳಲ್ಲಿ ಅಕ್ರಮ ಮದ್ಯ ಮಾರಾಟ ಅತೀ ಹೆಚ್ಚಾಗಿ ನಡೆದಿದೆ. ಸರಳವಾಗಿ ಮದ್ಯ ಕೈಗೆ ಸಿಗುವುದರಿಂದ ಸಮಾಜದಲ್ಲಿ ಕುಡುಕರ ಸಂಖ್ಯೆ ಹೆಚ್ಚಳವಾಗುತ್ತಿದೆ. ಇದರಿಂದ ಕುಟುಂಬಗಳಲ್ಲಿ ಮನಶಾಂತಿ, ನೆಮ್ಮದಿ ಹಾಳಾಗಿ ಹೋಗಿದೆ. ಹಳ್ಳಿಗಳಲ್ಲಿ ಸಿಗುವ ಮದ್ಯ ಅಸಲಿಯೂ ಅಥವಾ ನಕಲಿಯೂ ಗೊತ್ತಿಲ್ಲ. ಇದರಿಂದ ಕುಡಿಯುವ ವ್ಯಕ್ತಿ ಮತ್ತು ಆತನ ಕುಟುಂಬ ಸಂಕಷ್ಟ ಸಿಲುಕಿ ಪರದಾಡುವಂತಾಗುತ್ತದೆ. ಹೀಗಾಗಿ ಗ್ರಾಮಗಳಲ್ಲಿ ಜನರು ಸ್ವ-ಯಂ ಪ್ರೇರಿತರಾಗಿ ಅಕ್ರಮ ಮದ್ಯ ಮಾರಾಟವನ್ನು ಸಂಪೂರ್ಣವಾಗಿ ತಡೆಯಬೇಕಿದೆ. ಇದಕ್ಕೆ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಸದಾ ಸಹಕಾರ ನೀಡಲಿದೆ ಎಂದು ಭರವಸೆ ನೀಡಿದರು.

ಗ್ರಾಮಗಳಲ್ಲಿ ಸಿಗುವ ಮದ್ಯಪಾನ ಸೇವಿಸುವ ಅನೇಕ ಯುವಕರು ಚಿಕ್ಕ ವಯಸ್ಸಿನಲ್ಲಿ ಮರಣ ಹೊಂದುತ್ತಿದ್ದಾರೆ. ಇದಕ್ಕೆ ಯಾರು ಹೊಣೆ?. ಪರವಾನಗಿ ಇರುವ ಕಡೆಗಳಲ್ಲಿ ಮಾತ್ರ ಮಾರಾಟ ಮಾಡಬೇಕು. ಗ್ರಾಮಗಳಲ್ಲಿ ಮಾರಾಟ ಮಾಡಲು ಯಾವುದೇ ಹಕ್ಕು ಬಾರ್ ಮಾಲೀಕರಿಗೆ ಇಲ್ಲ. ಇದನ್ನು ಅರ್ಥ ಮಾಡಿಕೊಳ್ಳಬೇಕಿದೆ. ಹಳ್ಳಿಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟಕ್ಕೆ ಮುಂದಾದರೆ ಅಂತಹ ಬಾರ್ ಮಾಲೀಕರ ವಿರುದ್ಧ ಅಬಕಾರಿ ಇಲಾಖೆ ಮೇಲಾಧಿಕಾರಿಗಳಿಗೆ ಪತ್ರ ಬರೆಯುವ ಮೂಲಕ ಕಠಿಣ ಕ್ರಮಕ್ಕೆ ಸೂಚಿಸಲಾಗುವುದು ಎಂದು ಎಚ್ಚರಿಸಿದರು.

ಮದ್ಯಪಾನ ಮುಕ್ತ ಗ್ರಾಮ ಅಭಿಯಾನಕ್ಕೆ ಸಹಕಾರ ನೀಡಿದ ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವರಾದ ಶರಣಬಸಪ್ಪಗೌಡ ದರ್ಶನಾಪುರ, ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಲವೀಶ್ ಒರಡಿಯಾ, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಬಸವರಾಜ ಶರಬೈ ಹಾಗೂ ಗ್ರಾಪಂ ಮುಖಂಡರ ಕಾರ್ಯ ಅತ್ಯಂತ ಶ್ಲಾಘನೀಯವಾಗಿದೆ ಎಂದರು.

ಪ್ರತಿಯೊಬ್ಬನಿಗೆ ಆರೋಗ್ಯ ಅತ್ಯಂತ ಮುಖ್ಯವಾಗಿದೆ. ಒಮ್ಮೆ ಚಟಗಳಿಗೆ ಬಲಿಯಾದರೆ ಅದರಿಂದ ಹೊರಬರಲು ಅಸಾಧ್ಯ. ಆದ್ದರಿಂದ ದುಶ್ಚಟಗಳಿಗೆ ಯುವಕರು ಹಾಗೂ ಸಾರ್ವಜನಿಕರು ಬಲಿಯಾಗಬಾರದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಸಲಹೆ ನೀಡಿದರು.

ಜನರಿಗೆ ಮದ್ಯಪಾನದಿಂದ ಆಗುವ ದುಷ್ಪರಿಣಾಮದ ಕುರಿತು ಜಿಲ್ಲೆಯಲ್ಲಿ ಜಾಗೃತಿ ಮೂಡಿಸುವ ಕಾರ್ಯ ಮಾಡಲಾಗುತ್ತಿದೆ. ಇದರ ಜತೆಗೆ ಪ್ರಜ್ಞಾವಂತರು ಹಾಗೂ ಮಹಿಳೆಯರು ಮದ್ಯಪಾನ ಮುಕ್ತ ಗ್ರಾಮಕ್ಕೆ ಮುಂದಾಗಬೇಕು ಎಂದು ಹೇಳಿದರು.

ಜಿಲ್ಲಾ ಕೇಂದ್ರದಲ್ಲಿ ಮದ್ಯವ್ಯಸನಿಗಳಿಗೆ ಪುನರ್ವಸತಿ ಕೇಂದ್ರ ಸ್ಥಾಪಿಸಲು ಕೆಕೆಆರ್‌ಡಿಬಿ ಅನುದಾನದಲ್ಲಿ ಒಂದು ಕೋಟಿ ನೀಡುವುದಾಗಿ ಸಚಿವರು ತಿಳಿಸಿದರು.

ಇದೇ ವೇಳೆ, 2024–25ನೇ ಸಾಲಿನ ಮುಖ್ಯಮಂತ್ರಿ ವಿಶೇಷ ಅನುದಾನ ಉಕ್ಕಿನಾಳ ಗ್ರಾಮದಿಂದ ಯಲ್ಲಮ್ಮ ಗುಡಿಗೆ ಹೋಗುವ ರಸ್ತೆ ಯಡ್ರಾಮಿ ಗಡಿಭಾಗ, 2025–26 ನೇ ಸಾಲಿನ ಕೆಕೆಆರ್‌ಡಿಬಿ ಮೈಕ್ರೋ ಯೋಜನೆಯಡಿ ಉಕ್ಕಿನಾಳ ಗ್ರಾಮದಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣಕ್ಕೆ ಸಚಿವರು ಶಂಕುಸ್ಥಾಪನೆ ನೆರವೇರಿಸಿದರು.

ಯಾದಗಿರಿ ಜಿಲ್ಲೆಯ, ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಲವೀಶ್ ಒರಡಿಯಾ ಅವರು ಮಾತನಾಡಿ ಯಾದಗಿರಿ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಮದ್ಯಪಾನ ಮತ್ತು ವ್ಯಸನ ಮುಕ್ತ ಗ್ರಾಮ ಅಭಿಯಾನಕ್ಕೆ ಕ್ರಮ ಕೈಗೊಳ್ಳಲಾಗುವುದು. ಆ ಮೂಲಕ ಮದ್ಯಪಾನದಿಂದ ಆಗುವ ದುಷ್ಪರಿಣಾಮದ ಕುರಿತು ಜನರಿಗೆ ಜಾಗೃತಿ ಮೂಡಿಸಲಾಗುತ್ತದೆ. ಮದ್ಯಪಾನ ಸೇವಿಸುವ ವ್ಯಕ್ತಿಗಳಿಗೆ ಕುಟುಂಬಸ್ಥರು, ಗ್ರಾಮಸ್ಥರು ಸಹ ತಿಳಿವಳಿಕೆ ಹೇಳಬೇಕು. ಹಳ್ಳಿಗಳಲ್ಲಿ ಅಕ್ರಮ ಮದ್ಯ ಮಾರಾಟಕ್ಕೆ ಜನರು ಸ್ವಯಂ ಪ್ರೇರಿತರಾಗಿ ತಡೆಯಬೇಕಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಪಿಡಿಒ ಮಡಿವಾಳಪ್ಪ ಮುದ್ನೂರು, ಗ್ರಾಮ ಪಂಚಾಯಿತಿ ಅಧ್ಯಕ್ಷ ಗೇನುಸಿಂಗ್ ರಾಠೋಡ್ ಸೇರಿದಂತೆ ಗ್ರಾಮದ ಮುಖಂಡರು ಇದ್ದರು.

# ಮೈಸೂರು ವಿಶ್ವವಿದ್ಯಾನಿಲಯಕ್ಕೆ ಪ್ರಥಮ, 24 ಚಿನ್ನದ ಪದಕ

• ಮಲ್ಲಮ್ಮ ನುಡಿ ವಾರ್ತೆ
ಅಂಕೋಲಾ:

ತಾಲೂಕಿನ ವಂದಿಗೆಯ ಅದಿತಿ ನಾಯಕ ಎಂ.ಎಸ್ಸಿ ರಸಾಯನ ಶಾಸ್ತ್ರ ವಿಭಾಗದಲ್ಲಿ 24 ಚಿನ್ನದ ಪದಕ ಹಾಗೂ 8 ನಗದು ಬಹುಮಾನವನ್ನು ಪಡೆಯುವ ಮೂಲಕ ಮೈಸೂರಿನ ಮಾನಸಗಂಗೋತ್ರಿ ವಿಶ್ವವಿದ್ಯಾನಿಲಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾಳೆ.

ಸೋಮವಾರ ಮೈಸೂರಿನ ಕ್ರಾಫರ್ಡ್ ಭವನದಲ್ಲಿ ನಡೆದ ವಿಶ್ವ ವಿದ್ಯಾನಿಲಯದ 106 ನೇ ಘಟಿಕೋತ್ಸವ ಸಮಾರಂಭದಲ್ಲಿ ರಾಜ್ಯಪಾಲರಾದ ಥಾವರ್ ಚಂದ ಗೆಹ್ಲೋಟ್, ಇಸ್ರೋ ಮಾಜಿ ಅಧ್ಯಕ್ಷ ಡಾ ಎಸ್.ಸೋಮನಾಥ, ಉನ್ನತ ಶಿಕ್ಷಣ ಸಚಿವರಾದ (ಉಪಕುಲಪತಿ) ಡಾ.ಎಮ್.ಸಿ.ಸುಧಾಕರ್‌ರವರ ಉಪಸ್ಥಿತಿಯಲ್ಲಿ ಪ್ರಶಸ್ತಿ ಪ್ರಧಾನ ಮಾಡಿ ಗೌರವಿಸಲಾಯಿತು.



ವಿದ್ಯಾರ್ಥಿನಿ ಅದಿತಿ ನಾಯಕ ಈ ಹಿಂದೆ ಮಂಗಳೂರಿನಲ್ಲಿ ಬಿ.ಎಸ್.ಇ ವ್ಯಾಸಂಗ ಮಾಡುತ್ತಿರುವ ಸಂದರ್ಭದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೂ ಪ್ರಥಮ ಸ್ಥಾನ ಪಡೆದಿದ್ದರು. ನಿರಂಜನ ನಾಯಕ, ಹಾಗೂ ಶುಭಲಕ್ಷ್ಮೀ ದಂಪತಿಯ ಪುತ್ರಿಯಾಗಿರುವ ಈಕೆಯ ಸಾಧನೆಗೆ ಹಲವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

# ಕಲ್ಲೇಶ್ವರದ ಪರಿಶಿಷ್ಟ ಪಂಗಡಗಳ ಮನೆಗಳಿಗೆ ಭೇಟಿ ನೀಡಿದ ಜಿಲ್ಲಾಧಿಕಾರಿ

• ಮಲ್ಲಮ್ಮ ನುಡಿ ವಾರ್ತೆ
ಅಂಕೋಲಾ:

ತಾಲೂಕಿನಲ್ಲಿಯೂ ಕೂಡ ಸಾವಿರಾರು ಕುಟುಂಬಗಳು ಜೀವನ ನಡೆಸುತ್ತಿದ್ದಾರೆ. ಸರಕಾರ ಅರ್ಜಿ ಕರೆದಾಗಲೆಲ್ಲ ಅವರು ತುಂಬುತ್ತಲೇ ಬರುತ್ತಿದ್ದಾರೆ. ಆದರೆ ಪದೇ ಪದೇ ತಿರಸ್ಕಾರಗೊಂಡಿದ್ದರಿಂದಾಗಿ ಹೋರಾಟ ನಡೆಸುತ್ತಲೇ ಬರುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯ ಅವರು ಕಲ್ಲೇಶ್ವರಕ್ಕೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು.



ಈ ಹಿಂದೆ ಅನೇಕ ಬಾರಿ ಅರಣ್ಯವಾಸಿಗಳು ಸರಕಾರದ ನಿಯಮಾವಳಿಯಂತೆ ಅರ್ಜಿ ಸಲ್ಲಿಸಿದ್ದರು. ನಂತರ ಅರ್ಜಿ ತಿರಸ್ಕಾರಗೊಂಡ ನಂತರವೂ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದರು. ಆದರೂ ಕೂಡ ಅರಣ್ಯವಾಸಿಗಳಿಗೆ ಹಕ್ಕು ಮಾತ್ರ ಇದುವರೆಗೂ ಸಿಕ್ಕಿಲ್ಲ. ಈ ಹಿನ್ನೆಲೆಯಲ್ಲಿ ಕೆಲವು ಅರಣ್ಯಾಧಿಕಾರಿಗಳು ಬೆಳೆದುನಿಂತ ಅಡಕೆಗಿಡ, ಬಾಳೆಗಿಡ ಕಡೆಯುತ್ತಿರುವುದು ಆಗಾಗ ಕಂಡುಬರುತ್ತದೆ.

ಅರಣ್ಯದಿಂದಲೇ ಆವೃತಗೊಂಡಿರುವ ಡೊಂಗ್ರಿ ಗ್ರಾಮ ಪಂಚಾಯತ ವ್ಯಾಪ್ತಿಯ ಕಲ್ಲೇಶ್ವರ ಗ್ರಾಮಕ್ಕೆ ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯ ಹಾಗೂ ಜಿಲ್ಲಾ ಮತ್ತು ತಾಲೂಕು ಮಟ್ಟದ ಕಂದಾಯ ಹಾಗೂ ಅರಣ್ಯ ಇಲಾಖೆಯವರು ಪರಿಶಿಷ್ಟ ಪಂಗಡದ ಮೂರ್ನಾಲ್ಕು ಮನೆಗಳಿಗೆ ಭೇಟಿ ನೀಡಿ ಅಲ್ಲಿಯ ಪರಿಸ್ಥಿತಿಯನ್ನು ತಿಳಿದುಕೊಂಡರು. ಸ್ಥಳೀಯರು ತಮ್ಮ ಸಮಸ್ಯೆಗಳನ್ನು ಜಿಲ್ಲಾಧಿಕಾರಿಗಳ ಬಳಿ ಹೇಳಿಕೊಂಡರು.

ಈ ಹಿಂದೆ ಅರ್ಜಿ ಸಲ್ಲಿಸಿದ ಕೆಲವು ಪರಿಶಿಷ್ಟ ಪಂಗಡದ ಅರ್ಜಿಗಳು ತಿರಸ್ಕಾರಗೊಂಡಿದ್ದವು. ಈ ಹಿನ್ನೆಲೆಯಲ್ಲಿ ಮರುಪರಿಶೀಲನೆಗಾಗಿ ಕೆಲವು ಪರಿಶಿಷ್ಟ ಮನೆಗಳಿಗೆ ಭೇಟಿ ನೀಡಿ ಮಾಹಿತಿ ಪಡೆದುಕೊಳ್ಳಲಾಗಿದೆ ಎಂದು ಕೇಳಿಬಂದಿದೆ.

ಈ ಸಂದರ್ಭದಲ್ಲಿ ಕಾರವಾರದ ಅರಣ್ಯ ಸಂರಕ್ಷಣಾಧಿಕಾರಿ ರವಿಶಂಕರ, ಉಪ ಅರಣ್ಯ ಸಂರಕ್ಷಣಾಧಿಕಾರಿ ಜಯೇಶ, ತಹಸೀಲ್ದಾರ ಡಾ. ಚಿಕ್ಕಪ್ಪ ನಾಯಕ, ಕಂದಾಯ ನಿರೀಕ್ಷಕ ಭಾರ್ಗವ ನಾಯಕ ಸೇರಿದಂತೆ ಸ್ಥಳೀಯ ಅರಣ್ಯ ಅಧಿಕಾರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.




ಬಸವಕಲ್ಯಾಣ:– ತಾಲೂಕಿನ ಸುಕ್ಷೇತ್ರ ಹಾರಕೂಡ ಸಂಸ್ಥಾನ ಹಿರೇಮಠದಲ್ಲಿ ಪೀಠಾಧಿಪತಿಗಳಾದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ಕಮಲಾಪೂರ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತದ 2026ನೇ ಸಾಲಿನ ದಿನದರ್ಶಿಕೆ ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ

ಬೀದರ ಜಿಲ್ಲಾ ಪಂಚಾಯತ ನಿವೃತ್ತ ಉಪ ಕಾರ್ಯದರ್ಶಿಗಳಾದ ಬಿ.ಕೆ. ಹಿರೇಮಠ, ಶಿವಶರಣಪ್ಪ ಶೆಟ್ಟಿ, ಕ್ಷೇಮಲಿಂಗ ಶಟಗಾರ, ವೀರಣ್ಣ ಶಿರಗೊಂಡ ಡಾ. ರಾಜಶೇಖರ ಮದರಿ, ನಾಗೇಶ ಮಹಾಜನ ಮುಂತಾದವರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ).

ಬಸವಕಲ್ಯಾಣ:– ತಾಲೂಕಿನ ಸುಕ್ಷೇತ್ರ ಹಾರಕೂಡ ಸಂಸ್ಥಾನ ಹಿರೇಮಠದಲ್ಲಿ ಪೀಠಾಧಿಪತಿಗಳಾದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ಕಮಲಾಪೂರ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತದ 2026ನೇ ಸಾಲಿನ ದಿನದರ್ಶಿಕೆ ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ

ಬೀದರ ಜಿಲ್ಲಾ ಪಂಚಾಯತ ನಿವೃತ್ತ ಉಪ ಕಾರ್ಯದರ್ಶಿಗಳಾದ ಬಿ.ಕೆ. ಹಿರೇಮಠ, ಶಿವಶರಣಪ್ಪ ಶೆಟ್ಟಿ, ಕ್ಷೇಮಲಿಂಗ ಶಟಗಾರ, ವೀರಣ್ಣ ಶಿರಗೊಂಡ ಡಾ. ರಾಜಶೇಖರ ಮದರಿ, ನಾಗೇಶ ಮಹಾಜನ ಮುಂತಾದವರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ).



# ಕೋಳಿ ಫಾರಂ ಬಂದ್ ಮಾಡಿ: ಅಶೋಕ

ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ
ವಡಗೇರಾ ತಾಲೂಕಿನ ಐಕೂರು ಗ್ರಾಮದ ಸರ್ವೆ ನಂ. 327/1.2.5 ಅನಧಿಕೃತವಾಗಿ ಕೋಳಿ ಫಾರ್ಮ ಮಾಡುತ್ತಿದ್ದು ಕೂಡಲೇ ಸದರಿ ಕೋಳಿ ಫಾರಂ ಬಂದ್ ಮಾಡುವಂತೆ ಒತ್ತಾಯಿಸಿ ವರ್ತೂರ ಪ್ರಕಾಶ ಯುವ ಗರ್ಜನೆ ಜಿಲ್ಲಾಧ್ಯಕ್ಷ ಐಕೂರ್ ಅಶೋಕ ಅವರು ಅಪರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ಕ್ರಮಕ್ಕೆ ಒತ್ತಾಯಿಸಿದ್ದಾರೆ. ವಡಗೇರಾ ತಾಲೂಕಿನ ಐಕೂರು ಗ್ರಾಮದ ಸರ್ವೆ ನಂ. 327/1.2.5 ಅನಧಿಕೃತವಾಗಿ ಯಾವುದೇ ಎನ್.ಎ. ಮಾಡದೇ, ಕೃಷಿ ಭೂಮಿಯಲ್ಲಿ ಹಾಗೂ ಸಂಬಂಧಪಟ್ಟ ಇಲಾಖೆಗಳಿಂದ ಅನುಮತಿ ಹಾಗೂ ಎನ್.ಪಿ.ಎಸ್. ಪಡೆಯದೇ, ಆಂಧ್ರ ಮೂಲದ ವ್ಯಕ್ತಿ ಮೆ. ಇಂಡಸ್ರೋ ರಿಸರ್ಜ ಮತ್ತು ಕ್ರೀಡಿಂಗ್ಸ್ ಫಾರ್ಮನ ಪ್ರೈ. ಲಿ. ಮೂಲಕ ಕೋಳಿ ಫಾರಂ ನಡೆಸುತ್ತಿದ್ದು, ಇದರಿಂದ ಗ್ರಾಮದಲ್ಲಿ ಮತ್ತು ರೈತರಿಗೆ ಚಿಕನ್ ಗುನ್ಯಾ, ಹಕ್ಕಿ ಜ್ವರ, ಇತರ ಕಾಯಿಲೆಗಳ ಭೀತಿ ಎದುರಾಗಿದೆ. ಪಕ್ಕದಲ್ಲಿ ಕೃಷಿ ಜಮೀನು ಇದ್ದು, ಕೆಟ್ಟ ವಾಸನೆಯಿಂದ ಕೂಲಿ ಕಾರ್ಮಿಕರು, ರೈತರ ಮೇಲೆ ದುಷ್ಪರಿಣಾಮ ಬೀರಿ, ಕೃಷಿ ಚಟುವಟಿಕೆಗೆ ತೊಂದರೆ ಉಂಟಾಗುತ್ತದೆ ಕೂಡಲೇ ಇದರ ಕುರಿತು ಸೂಕ್ತ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ. ರೈತರ, ಕಾರ್ಮಿಕರ ಅನುಕೂಲಕ್ಕಾಗಿ ಐಕೂರು ಗ್ರಾಮದ ಸರ್ವೆ ನಂ. 327/1.2.5 ರಲ್ಲಿ ಮೇ ಇಂಡಬೋ ರಿಸರ್ಜ & ಬ್ರೇಡಿಂಗ್ಸ್ ಫಾರ್ಮಸ ಪ್ರೈ. ಲಿ. ಇವರು ಸರ್ಕಾರದ ನಿಯಮ ಮೀರಿ, ಅನುಮತಿ ಪಡೆಯದೇ, ಕೋಳಿ ಫಾರಂ ನಡೆಸಲು ಮುಂದಾಗಿದ್ದು, ಇವರಿಗೆ ಯಾವುದೇ ಅನುಮತಿ ನೀಡಬಾರದೆಂದು ಒತ್ತಾಯಿದ್ದಾರೆ.




# ಅಲ್ ಹುಸ್ಸೇನಿ ಭಾರತೀಯ ಪ್ರಭಾವ ಶಾಲಿ ಮುಸ್ಲಿಂ

ಮಲ್ಲಮ್ಮ ನುಡಿ ವಾರ್ತೆ
• ಕಲಬುರಗಿ :

ಖಾಜಾ ಬಂದನಾವಾಜ್ ಯೂನಿವರ್ಸಿಟಿಯ ಕುಲಾಧಿಪತಿ ಸಯ್ಯದ್ ಮುಹಮ್ಮದ ಅಲಿ ಅಲ್ ಹುಸ್ಸೇನಿ ಅವರನ್ನು 2025ರ ಭಾರತೀಯ ಪ್ರಭಾವ ಶಾಲಿ ಮುಸ್ಲಿಂ ವ್ಯಕ್ತಿಯಾಗಿ ಘೋಷಿಸಿದೆ.

ಮುಸ್ಲಿಂ ಮಿರರ್ ಎಂಬ ಟಿಜಿಟಿ ಪೋರ್ಟಲ 2025 ನೇ ಸಾಲಿನ ಅತ್ಯಂತ ಪ್ರಭಾವಶಾಲಿ ಮುಸ್ಲಿಂ ವ್ಯಕ್ತಿಗಳ ಪಟ್ಟಿಯನ್ನು ಮುಸ್ಲಿಂ ಮಿರರ್ 100 ರಲ್ಲಿ ಬಿಡುಗಡೆ ಮಾಡಿದೆ. ಶಿಕ್ಷಣ, ವ್ಯವಹಾರ, ಸಮುದಾಯ ನಾಯಕ, ಇಸ್ಲಾಮಿಕ ಪಂಡಿತ್ಯ, ಮಾಧ್ಯಮ, ರಾಜಕೀಯ,



ವೃತ್ತಿ ಪರ, ಧಾರ್ಮಿಕ ನಾಯಕ, ಕ್ರೀಡಾ ಮುಂತಾದ ಕ್ಷೇತ್ರ ಗಳಲ್ಲಿ 100 ಜನರನ್ನು ಆಯ್ಕೆ ಮಾಡಿದ್ದು, ಧಾರ್ಮಿಕ ನಾಯಕರ ವಿಭಾಗದಿಂದ ಕರ್ನಾಟಕ ರಾಜ್ಯ ವಿಕ್ಫ್ ಮಂಡಳಿ ಅಧ್ಯಕ್ಷ ಡಾ ಸಯ್ಯದ್ ಮುಹಮ್ಮದ ಅಲಿ ಅಲ್ ಹುಸೇನಿಯವರನ್ನು ಆಯ್ಕೆ ಮಾಡಲಾಗಿದೆ. ಅವರ ಮಾರ್ಗದರ್ಶನದಲ್ಲಿ, ಕೆಬಿಎನ ವಿವಿ ಶೈಕ್ಷಣಿಕ ಶ್ರೇಷ್ಠತೆ, ಮೂಲಸೌಕರ್ಯ ಅಭಿವೃದ್ಧಿ ಮತ್ತು ಸಹಕಾರಾತ್ಮಕ ಯೋಜನೆಗಳಲ್ಲಿ ಪ್ರಮುಖ ಸಾಧನೆಗಳನ್ನು ಗಳಿಸಿ, ನವೀನತೆ, ಸಂಶೋಧನೆ ಮತ್ತು ಅಧ್ಯಯನದ ಕೇಂದ್ರವಾಗಿ ಪರಿಣಮಿಸಿದೆ. ಅಲ್ಲದೇ ಗುಣಮಟ್ಟದ ಶಿಕ್ಷಣ, ಸಂಶೋಧನೆ ಮತ್ತು ಸಮುದಾಯ ಸೇವೆಯಲ್ಲಿ ಪ್ರಗತಿಶೀಲ ಕೇಂದ್ರವಾಗಿ ಬೆಳೆಯಿತು.

ಅವರು ಶ್ರೇಷ್ಠತೆ, ನಾಯಕತ್ವ ಮತ್ತು ಸಮಾಜದ ಮೇಲೆ ಪರಿವರ್ತನಾ ಪರಿಣಾಮವನ್ನು ತೋರಿಸಿದ್ದಾರೆ. ಹುಸೇನಿಯವರ ಆಯ್ಕೆಯು ಉನ್ನತ ಶಿಕ್ಷಣದಲ್ಲಿ ನವೀನ ನಾಯಕತ್ವ, ಶೈಕ್ಷಣಿಕ ಶ್ರೇಷ್ಠತೆಯನ್ನು ಉತ್ತೇಜಿಸುವ ಅಪಾರ ಪ್ರಯತ್ನಗಳು ಮತ್ತು ಭವಿಷ್ಯದಂತೆ ಸಿದ್ಧವಾಗಿರುವ ಸಂಸ್ಥೆಗಳನ್ನು ಬೆಳೆಸುವ ನಿಶ್ಚಲ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ.

ಕರ್ನಾಟಕ ಸರ್ಕಾರ

## ಪುರಸಭೆ ಕಾರ್ಯಾಲಯ, ಹುಮನಾಬಾದ ಜಿ॥ ಬೀದರ

## TOWN MUNICIPAL COUNCIL HUMNABAD DIST: BIDAR

ವೆಬ್ ಸೈಟ : WWW.humnabadtown.mrc.gov.in ಇ–ಮೇಲ್ : ka.humnabad.tmc@gmail.com
ಕಛೇರಿ ದೂರವಾಣಿ ಸಂಖ್ಯೆ : 08483-271722 ಥೇರಮೈದಾನ ಹುಮನಾಬಾದ : 585330

ಸಂಖ್ಯೆ:ಪುಸಹು/ಪು.ನೀ/ /2025–26 ದಿನಾಂಕ: 06–01–2026

ಮಾನ್ಯರೆ,

ವಿಷಯ : ಬೀದರ ಜಿಲ್ಲೆಯ ಹುಮನಾಬಾದ ಪುರಸಭೆ ವ್ಯಾಪ್ತಿಯಲ್ಲಿನ ಪುರಸಭೆ ನಿಧಿ ಯೋಜನೆಯಡಿಯಲ್ಲಿ ವರ್ಷ 2025–26ನೇ ಸಾಲಿನ ಕಾಮಗಾರಿಯ ವಿವರ ಪತ್ರಿಕೆಯಲ್ಲಿ ಪ್ರಕಟಿಸುವ ಕುರಿತು.

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ: 05–01–2026 ಪುರಸಭೆ ಜಾತ್ರಾ ವಿಶೇಷ ಸಭೆಯಲ್ಲಿ ಹುಮನಾಬಾದ ಪುರಸಭೆ ವ್ಯಾಪ್ತಿಯಲ್ಲಿನ ಪುರಸಭೆ ನಿಧಿ ಯೋಜನೆಯಡಿಯಲ್ಲಿ ವರ್ಷ 2025–26ನೇ ಸಾಲಿಗಾಗಿ ಕೈಪಿಡಿ (Manual) ಕಾಮಗಾರಿ ಕೈಗೊಳ್ಳಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಪ್ರಯುಕ್ತ ಈ ಕೆಳಕಂಡ ಕಾಮಗಾರಿಗಳ ದರಪಟ್ಟಿ ಸಲ್ಲಿಸಲು ಕೊನೆಯ ದಿನ್ನಾಂಕ: 09–01–2026 ರಂದು 4.30 ಗಂಟೆಯ ಒಳಗಾಗಿ ಸಲ್ಲಿಸಬೇಕೆಂದು ತಮ್ಮ ಕನ್ನಡ ಭಾಷೆಯ ದಿನ ಪತ್ರಿಕೆಗಳಲ್ಲಿ ಸರ್ಕಾರದ ಸುತ್ತೋಲೆಯಂತೆ ಪ್ರಕಟಿಸಲು ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

| ಕ್ರಸಂ | ಕಾಮಗಾರಿಯ ಹೆಸರು | Qty | ಷರಾ |
|---|---|---|---|
| 1 | Supply of 90 watt LED Street Light with Clamp (Bajaj/Surya/Philips/Havells) | 250 | Including GST |
| 2 | Spreading of Murum at Aggi to Old Tahsil Office and Providing Tractor Dozer, Hydrolic Roller, Water Tanker, 100 Watts Led Light, Fixing Bamboo to Veerabhadreshwar Jatra In Humnabad Town Dist Bidar | 3.80 | Including GST |

ತಮ್ಮ ವಿಶ್ವಾಸಿ
(ಸಹಿ) 6/01/26
ಮುಖ್ಯಾಧಿಕಾರಿಗಳು
ಪುರಸಭೆ ಹುಮನಾಬಾದ

# ಪುರಸಭೆ ಕಾರ್ಯಾಲಯ ಹುಮನಾಬಾದ

ಸಂಖ್ಯೆ:ಪುಸಹು/ಆರೋಗ್ಯ/ಸಿಆರ್– /2026–27 ದಿನಾಂಕ: 07–01–2026

## ಕೋಟೆಷನ್ ಟೆಂಡರ್ ಪ್ರಕಟಣೆ

ಹುಮನಾಬಾದ ಪುರಸಭೆಯಲ್ಲಿ ಮಾಹೆ ಜನೆವರಿ 2026ರಲ್ಲಿ ಜರುಗುವ ಶ್ರೀ ವೀರಭದ್ರೇಶ್ವರ ಜಾತ್ರೆಯ ಪ್ರಯುಕ್ತ ಪಟ್ಟಣದಲ್ಲಿ ವಿಶೇಷ ಸ್ವಚತೆ ಹಾಗೂ ನೈರ್ಮಲ್ಯ ಕೆಲಸಕ್ಕಾಗಿ ನೈರ್ಮಲಿಕರಣ ಸಲಕರಣೆಗಳು ಹಾಗೂ ಸುರಕ್ಷ ಧರಿಸುಗಳು ದಾಸ್ತಾನು ಮಾಡಿಕೊಳ್ಳಲು ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆಯಡಿ ನೊಂದಾಯಿತ ಮತ್ತು ಅರ್ಹ ಏಜನ್ಸಿ/ಸರಬರಾಜುದಾರರಿಂದ ಐಟಮ್‌ವಾರು ಕೊಟೇಷನ ದರ ಆಹ್ವಾನಿಸಲಾಗಿದೆ. ಅರ್ಹ ಮತ್ತು ಆಸಕ್ತ ಏಜನ್ಸಿಯವರು ನಿಗದಿ ಪಡಿಸಿದಿ ದಿನಾಂಕದೊಳಗೆ ಸೀಲ್ ಮಾಡಿದ ಲಕೋಟಿಯಲ್ಲಿ ಸಲ್ಲಿಬಹುದಾಗಿದೆ.

ಟೆಂಡರ್ ವೇಳಾಪಟ್ಟಿ

1) ಖಾಲಿ ಟೆಂಡರ್ ಫಾರಂಗಾಗಿ ಅರ್ಜಿಸಲ್ಲಿಸಲು ಕೊನೆ ದಿನ ದಿನಾಂಕ: 12–01–2025. 17.30 ಗಂಟೆ.
2) ಭರ್ತಿ ಮಾಡಿದ ಟೆಂಡರ್ ಅರ್ಜಿ ಸಲ್ಲಿಸೆಲು ಕೊನೆ ದಿನ ದಿನಾಂಕ: 13–01–2025 ಸಮಯ 16.00 ಗಂಟೆ.

| ಕ್ರ ಸಂ. | ಕಾಮಗಾರಿ ಹೆಸರು | ಪರಿಮಾಣ | ಅಂದಾಜು ಮೊತ್ತ | ಇ.ಎಂ.ಡಿ. ಮೊತ್ತ | ಅವಧಿ |
|---|---|---|---|---|---|
| 1 | ನೈರ್ಮಲಿಕರಣ ಸಲಕರಣೆಗಳು | – | 1.25 ಲಕ್ಷ | 3125/– | 3 ದಿವಸ |
| 2 | ಸುರಕ್ಷಾ ಧರಿಸುಗಳು | | 1.54. ಲಕ್ಷ | 3865/– | 3 ದಿವಸ |
| 3 | ಪೌರಕಾರ್ಮಿಕರಿಗೆ ಸಮವಸ್ತ್ರ | | 1.70 ಲಕ್ಷ | 4250/– | 3 ದಿವಸ |
| 4 | ನೈರ್ಮಲಿಕರಣ ಕೇಮಿಕಲ್ | | 1.15 ಲಕ್ಷ | 2888/– | 3 ದಿವಸ |

ಷರತ್ತುಗಳು:
1) ಖಾಲಿ ಟೆಂಡರ್ ಫಾರಂಗಾಗಿ ಅರ್ಜಿಯೊಂದಿಗೆ ಇ.ಎಂ.ಡಿ. ಮೊತ್ತಕ್ಕೆ ಮುಖ್ಯಾಧಿಕಾರಿಗಳು ಪುರಸಭೆ ಹುಮನಾಬಾದ ಹೆಸರಲ್ಲಿ ಡಿ.ಡಿ. ಲಗತ್ತಿಸಿ ಸಲ್ಲಿಸುವುದು.
2) ಟೆಂಡರ್ ಕಡಿಮೆ ದರ ನಮೂದಿಸಿದಲ್ಲಿ ವ್ಯತ್ಯಾಸ ಮೊತ್ತಕ್ಕೆ ಡಿ.ಡಿ. ಯನ್ನು ಟೆಂಡರ್ ಫಾರಂದೊಂದಿಗೆ ಲಗತ್ತಿಸುವುದು.
3) ನಿಗದಿ ಪಡಿಸಿದ ದಿನಾಂಕ ಮತ್ತು ಸಮಯ ಮೀರಿ ಬಂದ ಅರ್ಜಿಗಳನ್ನು ತಿಸ್ಕರಿಸಲಾಗುವುದು.
4) ಯಾವುದೇ ಅಥವಾ ಎಲ್ಲಾ ಟೆಂಡರ್ ಅರ್ಜಿಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕು ಪುರಸಭೆ ಕಾಯ್ದಿರಿಸಲಾಗಿದೆ.

(ಸಹಿ)
ಮುಖ್ಯಾಧಿಕಾರಿಗಳು
ಪುರಸಭೆ ಹುಮನಾಬಾದ

# ಮುಂದಿನ ಚುನಾವಣೆ ಗಳಲ್ಲಿ ಅತ್ಯುತ್ತಮ ಸ್ವೀಪ್ ಚಟುವಟಿಕೆಗಳ ಯೋಜನೆ ರೂಪಿಸಿ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಮುಂಬರುವ ಚುನಾವಣೆಗೆ ಮುಂಚಿತವಾಗಿ ಸ್ವೀಪ್ ಚಟುವಟಿಕೆಗಳನ್ನುಅತ್ಯುತ್ತಮವಾಗಿ ನಿರ್ವಹಿಸಲು ಅಧಿಕಾರಿಗಳು ಕ್ರಮ ಕೈಗೊಳ್ಳುವಂತೆರಾಜ್ಯಸ್ವೀಪ್ ನೋಡಲ್ ಅಧಿಕಾರಿಗಳಾದ ಶ್ರೀ ಪಿ.ಎಸ್.ವಸ್ತ್ರದ ಅವರು ಸೂಚಿಸಿದರು. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಇಂದು ಮತದಾರರ ಪಟ್ಟಿಯ ಸಂಕ್ಷಿಪ್ತ ಪರಿಷ್ಕರಣೆ –2026 ಸಂಬಂಧ ಸ್ವೀಪ್ ಕಾರ್ಯಕ್ರಮ ಹಾಗೂ ರಾಷ್ಟ್ರೀಯ ಮತದಾರರ ದಿನಾಚರಣೆ ಕುರಿತಂತೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು. ವ್ಯವಸ್ಥಿತ ಮತದಾರರ ಶಿಕ್ಷಣ ಹಾಗೂ ಚುನಾವಣಾ ಭಾಗವಹಿಸುವಿಕೆ ಚಟುವಟಿಕೆ ಅಂಗವಾಗಿ ಮೂರು ಹಂತಗಳನ್ನುನೆನಪಿನಲ್ಲಿಟ್ಟುಕೊಳ್ಳಬೇಕು.

ಮತದಾರರಿಗೆಜಾಗೃತಿಕಾರ್ಯಕ್ರಮ ಅಚ್ಚುಕಟ್ಟಾಗಿಕೈಗೊಳ್ಳಬೇಕು.ಮತದಾರರ ಪಟ್ಟಿಯಲ್ಲಿ ಹೆಸರು ಇರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವಂತಾಗಬೇಕು. ಚುನಾವಣಾ ಸಾಕ್ಷರತಾ ಹಾಗೂ ಜಾಗೃತಿ ಸಂಘಗಳನ್ನುಸದೃಢಗೊಳಿಸಿ ಸೂಕ್ತಅರಿವುಮೂಡಿಸುವಂತಾಗಬೇಕು ಎಂದು ಅವರು ಸಲಹೆ ನೀಡಿದರು. ಈಗ ಯೋಜನೆ ರೂಪಿಸುವ ಕಾಲ. ಮುಂದೆ ಅಭಿಯಾನಗಳನ್ನು ಕೈಗೊಳ್ಳುವಂತಾಗಬೇಕು. ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸುವಂತೆ ಅವರು ಸೂಚಿಸಿದರು.

ರಾಷ್ಟ್ರೀಯ ಮತದಾರರ ದಿನಾಚರಣೆ: ಬರುವ ಜನೇವರಿ 25ರಂದು ರಾಷ್ಟ್ರೀಯ ಮತದಾರರ ದಿನಾಚರಣೆ ಯಶಸ್ವಿಯಾಗಿ ಹಮ್ಮಿಕೊಳ್ಳಬೇಕು. ಹದಿನೆಂಟು ವರ್ಷ ಆದ ಯುವ ಮತದಾರರು, ವಿಶೇಷಚೇತನ ಮತದಾರರು,ಹಿಂದುಳಿದ ಜನಾಂಗಗಳ ಹಾಗೂ ಇತರೆ ಅರ್ಹರಿಗೆ ಎಪಿಕ್ ಕಾರ್ಡ್ ವಿತರಣೆ, ಪ್ರತಿಜ್ಞಾ ವಿಧಿ ಬೋಧನೆ, ಅತ್ಯುತ್ತಮ ಚುನಾವಣಾ ಕೆಲಸಗಾರರಿಗೆ ಸನ್ಮಾನ,ನಿಬಂಧ ಸ್ಪರ್ಧೆ, ಮತದಾನಕ್ಕಾಗಿ ಇರುವ ಮಾನದಂಡಗಳು,ಮಾರ್ಗಸೂಚಿಗ ’ಳ ಬಗ್ಗೆ ತಿಳಿಹೇಳಬೇಕು ಎಂದು ಸಲಹೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಹಣಾಧಿಕಾರಿ ಲವೀಶ್ ಒರಡಿಯಾ,ಅಪರ್ ಜಿಲ್ಲಾಧಿಕಾರಿ ರಮೇಶ ಕೋಲಾರ್,ಸಹಾಯಕ ಆಯುಕ್ತ ಶ್ರೀಧರ್ ಗೋಟುರ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಕಲಬುರಗಿ-ಚಿತ್ರದುರ್ಗ ನಾನ್ ಎ/ಸಿ ಸ್ಲೀಪರ್ ಸಾರಿಗೆ ಕಾರ್ಯಾಚರಣೆ ಆರಂಭ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ :**

ಕಲಬುರಗಿ–ಮೈಸೂರ ನಾನ್ ಎ/ಸಿ ಸ್ಲೀಪರ್ (ಅಮೋಘವರ್ಷ) ಸಾರಿಗೆ ಮತ್ತು ಕಲಬುರಗಿ–ಚಿತ್ರದುರ್ಗ ನಾನ್ ಎ/ಸಿ ಸ್ಲೀಪರ್ ಸಾರಿಗೆಯನ್ನು ಕಾರ್ಯಾಚರಣೆ ಆರಂಭಿಸಲಾಗಿದೆ ಎಂದು ಕಲಬುರಗಿ ವಿಭಾಗ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ವಿಭಾಗೀಯ ನಿಯಂತ್ರಣಾಧಿಕಾರಿ ಅವರು ತಿಳಿಸಿದ್ದಾರೆ.ಸಾರ್ವಜನಿಕ ಪ್ರಯಾಣಿಕರ ಬೇಡಿಕೆಯಂತೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಕಲಬುರಗಿ ವಿಭಾಗ–1ರ, ಕಲಬುರಗಿ ಘಟಕ–1 ರಿಂದ ಕಲಬುರಗಿ–ಮೈಸೂರು ವ್ಹಾಯಾ ಜೇವರ್ಗಿ, ಶಹಾಪೂರ, ಲಿಂಗಸೂರ, ಸಿಂಧನೂರ, ಬಳ್ಳಾರಿ, ಚಳ್ಳಿಕೇರಿ, ಹಿರಿಯೂರ, ನಾಗಮಂಗಲ ಮತ್ತು ಪಾಂಡವಪುರ ಮಾರ್ಗವಾಗಿ ನಾನ್ ಎ/ಸಿ ಸ್ಲೀಪರ್ (ಅಮೋಘವರ್ಷ) ಸಾರಿಗೆಯನ್ನು ಹಾಗೂ ಕಲಬುರಗಿ–ಚಿತ್ರದುರ್ಗ ವ್ಹಾಯಾ ಜೇವರ್ಗಿ, ಶಹಾಪೂರ, ಲಿಂಗಸೂರ, ಸಿಂಧನೂರ, ಗಂಗಾವತಿ ಮತ್ತು ಹೊಸಪೇಟ ಮಾರ್ಗವಾಗಿ ನಾನ್ ಎ/ಸಿ ಸ್ಲೀಪರ್ ಸಾರಿಗೆಗಳನ್ನು 2025ರ ಡಿಸೆಂಬರ್ 29 ರಿಂದ ಪ್ರಾರಂಭಿಸಲಾಗಿರುತ್ತದೆ.

• **ಸಾರಿಗೆ ವೇಳಾ ಪಟ್ಟಿ ವಿವರ :**

ಕಲಬುರಗಿ–ಮೈಸೂರ–ಕಲಬುರಗಿ ವ್ಹಾಯಾ ಬಳ್ಳಾರಿ, ಚಳ್ಳಿಕೇರಿ, ಹಿರಿಯೂರ, ಅನುಸೂಚಿ ಸಂಖ್ಯೆ 6,7 ಇದ್ದು, ಸಂಜೆ 5 ಗಂಟೆಗೆ ಕಲಬುರಗಿ ಬಸ್ ನಿಲ್ದಾಣದಿಂದ ನಿರ್ಗಮಿಸುವದು, ಮರು ದಿನ ಬೆಳಿಗ್ಗೆ 7 ಗಂಟೆಗೆ ಮೈಸೂರ ತಲುಪುವದು. ಸಂಜೆ 5.30 ಗಂಟೆಗೆ ಮೈಸೂರು ಬಸ್ ನಿಲ್ದಾಣದಿಂದ ನಿರ್ಗಮಿಸಲಿದೆ. ಬೆಳಿಗ್ಗೆ 7.30 ಗಂಟೆಗೆ ಕಲಬುರಗಿ ತಲುಪಲಿದೆ.

• **ಸಾರಿಗೆ ವೇಳಾ ಪಟ್ಟಿ ವಿವರ :**

ಕಲಬುರಗಿ–ಚಿತ್ರದುರ್ಗ–ಕಲಬುರಗಿ ವ್ಹಾಯಾ ಸಿಂಧನೂರ, ಗಂಗಾವತಿ, ಹೊಸಪೇಟ, ಅನುಸೂಚಿ ಸಂಖ್ಯೆ 136, 137 ಇದ್ದು, ರಾತ್ರಿ 10.45 ಗಂಟೆಗೆ ಕಲಬುರಗಿ ಬಸ್ ನಿಲ್ದಾಣದಿಂದ ನಿರ್ಗಮಿಸುವದು, ಬೆಳಿಗ್ಗೆ 8 ಗಂಟೆಗೆ ಚಿತ್ರದುರ್ಗ ತಲುಪಲಿದೆ. ಸಂಜೆ 7.40 ಗಂಟೆಗೆ ಚಿತ್ರದುರ್ಗ ಬಸ್ ನಿಲ್ದಾಣದಿಂದ ನಿರ್ಗಮಿಸುವದು, ಬೆಳಿಗ್ಗೆ 5.20 ಗಂಟೆಗೆ ಕಲಬುರಗಿ ತಲುಪಲಿದೆ. ಸಾರ್ವಜನಿಕ ಪ್ರಯಾಣಿಕರು ಈ ಸಾರಿಗೆಗಳ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರೈತರಿಗೆ ಪಾದಪೂಜೆ ಸಮಾರಂಭ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ರೈತರ ಹಿತ ಕಾಯಲು ಸರಕಾರ ಬದ್ದವಾಗಿದ್ದು, ಜಿಲ್ಲೆಯ ಸಮಸ್ಯೆಗಳನ್ನು ಸರಕಾರದ ಮುಂದೆ ಇರಿಸಿ ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಶಾಸಕ ಚೆನ್ನಾರೆಡ್ಡಿ ಪಾಟೀಲ ತುನ್ನೂರು ಹೇಳಿದರು.ನಗರದ ಸರಕಾರಿ ಪದವಿ ಮಹಾವಿದ್ಯಾಲಯದ ಸಭಾಂಗಣದಲ್ಲಿ ರೈತ ದಿನಾಚರಣೆ ನಿಮಿತ್ತ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆಯಿಂದ ಆಯೋಜಿಸಿದ್ದ ಪ್ರಗತಿಪರ ರೈತರಿಗೆ ಪಾದಪೂಜೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.ರೈತರ ಕಷ್ಟಕ್ಕೆನೆರವಾಗಲು ಬೆಳೆ ಪರಿಹಾರದ ಜತೆಗೆ ಹೆಚ್ಚುವರಿ ಪರಿಹಾರ ನೀಡಲಾಗಿದೆ. ಯಾರಿಗಾದರೂ ಪರಿಹಾರಧನ ದೊರೆಯದಿದ್ದರೆ ಅಧಿಕಾರಿಗಳ ಗಮನಕ್ಕೆ ತಂದು ಪರಿಹಾರ ಪಡೆಯಬೇಕು ಎಂದರು.ಜಿಲ್ಲಾ ಅಧ್ಯಕ್ಷ ಮಾಹವೀರ ಲಿಂಗೇರಿ ಮಾತನಾಡಿ ಜಿಲ್ಲೆಯಲ್ಲಿ ಇರುವ ರೈತರ ಕಷ್ಟ ಸುಖದಲ್ಲಿ ನೇರವಾಗಿ ಭಾಗಿಯಾಗಿ ಅವರಿಗೆ ಸ್ಪಂದಿಸಿದ್ದೇವೆ ಜೊತೆಗೆ ಅನ್ಯಾಯದವರು ವಿರುದ್ಧ ಹೋರಾಟವನ್ನುಮಾಡುತ್ತಾ ಜಿಲ್ಲೆಯಲ್ಲಿ ಉತ್ತಮ ರೈತ ಸೇನೆ, ರೈತರು ನಮ್ಮ ಸಂಘಟನೆಯನ್ನು ಕೇಳಿಕೊಂಡು ಬಂದು ಸೇರಿ ದೊಡ್ಡ ಗಾತ್ರ ಪಡಿಸುತ್ತಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.ಕಾರ್ಯಕ್ರಮದಲ್ಲಿ ನೇಗಿಲಿಗೆ ಪೂಜೆ ಸಲ್ಲಿಸಿ, ಮಾಜಿ ಪ್ರಧಾನಿ ಚೌದರಿ ಚರಣ್‌ಸಿಂಗ್ ಹಾಗೂ ಪ್ರೊ.ನಂಜುಡಸ್ವಾಮಿ ಅವರ ಪ್ರಗತಿಪರ ರೈತರ ಪಾದಪೂಜೆ ಕಾರ್ಯಕ್ರಮ ಭಾವಚಿತ್ರಗಳಿಗೆ ಗೌರವ ಸಮರ್ಪಿಸಲಾಯಿತು. ಪ್ರಗತಿಪರ ರೈತರ ಪಾದ ಪೂಜೆಯನ್ನು ರೈತ ಸಂಘದ ಮುಖಂಡರು ನೆರವೇರಿಸಿದರು. ಈ ಸಂದರ್ಭದಲ್ಲಿ ಗುಂಡಗುರ್ತಿಯ ನಿಜಲಿಂಗಪ್ಪ ತಾತ ಹಾಗೂ ಮಹಲರೋಜಾದ ಮಲ್ಲಿಕಾರ್ಜುನ ಮುತ್ಯಾ ಸಾನ್ನಿಧ್ಯ ವಹಿಸಿದ್ದರು. ಕಾರ್ಯಕ್ರಮದಲ್ಲಿ ಶಾಂತಬಾಯಿ ಅಮ್ಮ, ಬಿಜೆಪಿ ಮುಖಂಡ ಮಹೇಶ ರೆಡ್ಡಿ ಮುದ್ನಾಳ, ಕಾಲೇಜಿನ ಪ್ರಾಂಶುಪಾಲ ಸುಭಾಶ್ಚಂದ್ರ ಕೌಲಗಿ, ಸಂಘದ ರಾಜ್ಯ ಉಪಾಧ್ಯಕ್ಷ ಲಕ್ಷ್ಮಿಕಾಂತ ಪಾಟೀಲ, ಮುಖಂಡರಾದ ಶ್ರೀಧರ ಸಾಹುಕಾರ, ವೀರೇಶ ಜಾಕಾ, ಡಾ. ವೈಜನಾಥ, ಮಲ್ಲಣ್ಣ ಎಂ., ಮಲ್ಲಿಕಾರ್ಜುನ ಈಟಿ, ಶೇಖಪ್ಪ ದೇಸಾಯಿ, ಜಿಲ್ಲಾ ಉಪಾಧ್ಯಕ್ಷ ಸುಭಾಷ್ ನಡುವಿನಕೆರೆ, ಯುವ ಘಟಕದ ಅಧ್ಯಕ್ಷ ತಾಯಪ್ಪ ನಾಯಕ, ಪ್ರಧಾನ ಕಾರ್ಯದರ್ಶಿ ಶ್ರೀಕಾಂತ ಕುಂಬಾರ್, ಹೊಲದ ಅಧ್ಯಕ್ಷ ಮಲ್ಲಿಕಾರ್ಜುನ್ ಹೊನಿಗೇರ ಇದ್ದರು.

# ಜಿಸ್ಕಾಂ ಯಾದಗಿರಿ ವಿಭಾಗಕ್ಕೆ ಗೌರವದ ಕಿರೀಟ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ




**ಕಾರ್ಯನಿರ್ವಾಹಕ ಇಂಜಿನಿಯರ್ ರಾಘವೇಂದ್ರ ಡಿ. ಕೊವ್ವಿಗೆ ವಿಜಯ ಕರ್ನಾಟಕ ಶ್ರೇಷ್ಠತೆ ಮತ್ತು ಗೌರವ ಪ್ರಶಸ್ತಿ.**

ಯಾದಗಿರಿ ಜಿಸ್ಕಾಂ ಯಾದಗಿರಿ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ರಾಘವೇಂದ್ರ ಡಿ. ಕೊವ್ವಿ ಅವರು ತಮ್ಮ ನಿಷ್ಠಾವಂತ ಹಾಗೂ ಜನಪರ ಸರ್ಕಾರಿ ಸೇವೆಗಳಿಗೆ ಭಾನುವಾರ ಬೆಂಗಳೂರಿನಲ್ಲಿ ಪ್ರತಿಷ್ಠಿತ ವಿಜಯ ಕರ್ನಾಟಕ (ವಿ.ಕೆ.) ಶ್ರೇಷ್ಠತೆ ಮತ್ತು ಗೌರವ ಪ್ರಶಸ್ತಿ ಸ್ವೀಕರಿಸುವ ಮೂಲಕ ಯಾದಗಿರಿ ಜಿಲ್ಲೆಗೆ ಹೆಮ್ಮೆ ತಂದಿದ್ದಾರೆ. ಕರ್ನಾಟಕದಲ್ಲಿ ಅತಿ ಹೆಚ್ಚು ಓದಲ್ಪಡುವ ಕನ್ನಡ ದಿನಪತ್ರಿಕೆ ವಿಜಯ ಕರ್ನಾಟಕ ವತಿಯಿಂದ ಜನವರಿ 4ರಂದು ಭಾನುವಾರ ಬೆಳಿಗ್ಗೆ 11 ಗಂಟೆಗೆ ಬೆಂಗಳೂರಿನ ರೆಸಿಡೆನ್ಸಿ ರಸ್ತೆಯ ಚಾನ್ಸರಿ ಪೆವಿಲಿಯನ್‌ನಲ್ಲಿ ನಡೆದ ರಾಜ್ಯಮಟ್ಟದ ಗೌರವ ಸಮಾರಂಭದಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕರ್ನಾಟಕ ಸರ್ಕಾರದ ಪೌರಾಡಳಿತ ಹಾಗೂ ಹಜ್ ಸಚಿವರಾದ ರಹೀಮ್ ಖಾನ್ ಅವರು ಪ್ರಶಸ್ತಿಯನ್ನು ಅಧಿಕೃತವಾಗಿ ಪ್ರದಾನ ಮಾಡಿದರು. ಸಮಾರಂಭದಲ್ಲಿ ಮಾಜಿ ಮುಖ್ಯಮಂತ್ರಿ ಹಾಗೂ ಸಂಸತ್ ಸದಸ್ಯ ಬಸವರಾಜ್ ಬೊಮ್ಮಾಯಿ, ಚಲನಚಿತ್ರ ನಟಿ ಸಂಗೀತಾ ಶೃಂಗೇರಿ, ವಿಜಯ ಕರ್ನಾಟಕ ಸಂಪಾದಕ ಸುದರ್ಶನ್ ಚಂಕೆಳ್ಳಿ ಹಿಲ್ಲಿ, ಸಿಇಒ ದೀಪಕ್ ಸುಲೂಜಾ,

ವಿಜಯ ಕರ್ನಾಟಕ ಹಾಗೂ ಬೆಂಗಳೂರು ಮಿರರ್‌ನ ಗಣ್ಯ ಪ್ರತಿನಿಧಿಗಳು ವಿಶೇಷ ಅತಿಥಿಗಳಾಗಿ ಉಪಸ್ಥಿತರಿದ್ದರು.

ಕರ್ನಾಟಕದ ಅಭಿವೃದ್ಧಿಗೆ ವಿವಿಧ ಕ್ಷೇತ್ರಗಳಲ್ಲಿ ಅಸಾಧಾರಣ ಕೊಡುಗೆ ನೀಡಿದ ವ್ಯಕ್ತಿಗಳು ಹಾಗೂ ಸಂಸ್ಥೆಗಳನ್ನು ಗುರುತಿಸುವ ಉದ್ದೇಶದಿಂದ ವಿಜಯ ಕರ್ನಾಟಕ ಸಂಸ್ಥೆ ಪ್ರತಿವರ್ಷ ಈ ಶ್ರೇಷ್ಠತೆ ಮತ್ತು ಗೌರವ ಪ್ರಶಸ್ತಿಯನ್ನು ನೀಡುತ್ತಿದೆ. ಜಿಸ್ಕಾಂ ಯಾದಗಿರಿ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಇಂಜಿನಿಯರ್ ರಾಘವೇಂದ್ರ ಡಿ. ಕೊವ್ವಿ ಅವರು ತಮ್ಮ ಕಾರ್ಯಕ್ಷಮತೆ, ಶಿಸ್ತು ಹಾಗೂ ಜನಸ್ನೇಹಿ ಆಡಳಿತದಿಂದ ಗೌರವಾನ್ವಿತ ಹೆಸರನ್ನು ಗಳಿಸಿದ್ದಾರೆ. ಈ ಗೌರವ ಲಭಿಸಿರುವುದಕ್ಕೆ ಜಿಸ್ಕಾಂ ಯಾದಗಿರಿ ವಿಭಾಗದ ವಿಭಾಗಾಧಿಕಾರಿ ಮೊಹ್ಸಿನ್ ಜಾಫರ್ ಅಹ್ಮದ್, ಇತರ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಹರ್ಷ ವ್ಯಕ್ತಪಡಿಸಿ, ಅಭಿನಂದನೆ ಸಲ್ಲಿಸಿದ್ದಾರೆ.

# ಎಂಎಲ್ಸಿ ತಂದಿರುವ ಸಬ್ಸಿಡಿ ಯೋಜನೆಗಳು. ದುಪ್ಪಟ್ಟು ಯೋಜನೆ ತರುವ ಕೆಲಸ ಮಾಡಲಿ ಶಾಸಕರು



• **ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು;**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮತ್ತು ಅಲ್ಪಸಂಖ್ಯಾತರಿಗೆ ವಿವಿಧ ಯೋಜನೆಗಳನ್ನು ವಿಧಾನ ಪರಿಷತ್ ಸದಸ್ಯ ಬಸನಗೌಡ ತಮ್ಮ ನೇತೃತ್ವದಲ್ಲಿ ವಿವಿಧ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಅ ಯೋಜನೆಗಳನ್ನು ರದ್ದುಪಡಿಸಿ. ಎಂದು ಶಾಸಕ ಹಂಪನಗೌಡ ಬಾದರ್ಲಿ ತಮ್ಮ ಲೇಟರ್ ನ್ನು ಇಲಾಖೆಗೆ ಕೊಡುತ್ತಾರೆ ಎಂದರೆ ಇವರು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ಅನ್ಯಾಯ ಮಾಡಿದ್ದಾರೆ ಎಂದು ಇದು ಎಷ್ಟರ ಮಟ್ಟಿಗೆ ಸರಿ ಎಂದು ಕಾಂಗ್ರೆಸ್ ಪಕ್ಷದ ಎಸ್ ಟಿ. ಕೆಪಿಸಿಸಿ ರಾಜ್ಯ ಸದಸ್ಯ ವೆಂಕಟೇಶ್ ರಾಗಲಪರ್ವಿ ಪ್ರಶ್ನೆ ಮಾಡಿದರುನಗರದ ಪತ್ರಿಕಾಭವನದಲ್ಲಿ ಅವರು ಮಾತನಾಡಿದರು. ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ಅವರು ಯಾವತ್ತಿಗೂ ಜನರು ವಿರುದ್ಧವಾಗಿ ಕೆಲಸ ಮಾಡುವ ವ್ಯಕ್ತಿಯಲ್ಲ. ಕಾಂಗ್ರೆಸ್ ಪಕ್ಷದ ಹೈಕಮಾಂಡ್ ಅವರು ಮೇಲೆ ನಂಬಿಕೆ ಇಟ್ಟು ಅವರಿಗೆ ವಿಧಾನ ಪರಿಷತ್ ಸದಸ್ಯ ಸ್ಥಾನವನ್ನು ನೀಡಿದ್ದಾರೆ. ಹಾಗಾಗಿ ಬಸವನಗೌಡ ಬಾದರ್ಲಿ ಅವರು ಜನಪರವಾದ ಕಾಳಜಿ ಉಳ್ಳವರು ಅವರು 123 ಬೋರ್ ವೆಲ್ ಗಳು, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಗಳ ಕೊಳವೆಬಾವಿ, ಸಮುದಾಯದವರಿಗೆ ಸಬ್ಸಿಡಿಯಲ್ಲಿ ಕೊಡಿಸುವ ಕೆಲಸ ಮಾಡಿದ್ದಾರೆ. ಸಾರಥಿ ಯೋಜನೆ ಅಡಿಯಲ್ಲಿ ಬಡವರಿಗೆ ಸವಲಂಬನೆ ಬದುಕು ಕಟ್ಟಿಕೊಳ್ಳಲಿ ಎಂಬ ಉದ್ದೇಶದಿಂದ ಹಲವರಿಗೆ ಕಾರುಗಳನ್ನು ಸಬ್ಸಿಡಿ ದರದಲ್ಲಿ ಕೊಡಿಸಿದ್ದಾರೆ. ಇದನ್ನು ರದ್ದುಪಡಿಸುವಂತೆ ಶಾಸಕ ಹಂಪನಗೌಡ ಬಾದರ್ಲಿ ಅವರು ಸರಕಾರದ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದಾರೆ. ಇದು ಎಷ್ಟು ಸರಿ ಶಾಸಕರು ಬಡವರಿಗಾಗಿ ಹೆಚ್ಚು ಹೆಚ್ಚು ಯೋಜನೆಗಳನ್ನು ಜಾರಿಗೆ ತಂದಿದ್ದು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಹಿಂದುಳಿದ ವರ್ಗಗಳ ಕಲ್ಪಿಸುವ ನಿಟ್ಟಿನಲ್ಲಿ ಕೆಲಸ ಮಾಡಲಿ ಎಂದು ಹೇಳಿದರು

# ಕಲಿಕಾ ಹಬ್ಬ ಶಿಕ್ಷಣ ಇಲಾಖೆಯ ಮಹತ್ವದ ಕಾರ್ಯಕ್ರಮ

• **ಮಲ್ಲಮ್ಮ ನುಡಿ ವಾರ್ತೆ ತಾಳಿಕೋಟಿ:**




ಕಲಿಕಾ ಹಬ್ಬವು ಮಕ್ಕಳ ಕಲಿಕೆಯನ್ನು ಸಂತೋಷದಾಯಕ ಮತ್ತು ಆಕರ್ಷಕ ರೀತಿಯಲ್ಲಿ ಸುಧಾರಿಸಲು ಶಾಲಾ ಶಿಕ್ಷಣ ಇಲಾಖೆಯ ಮಹತ್ವದ ಕಾರ್ಯಕ್ರಮವಾಗಿದೆ ಎಂದು ಮುದ್ದೇಬಿಹಾಳ ಪ್ರಭಾರಿ ಕ್ಷೇತ್ರ ಶಿಕ್ಷಣಾಧಿಕಾರಿ ಆರ್ ಬಿ ದಮ್ಮೂರಮಠ ಹೇಳಿದರು. ತಾಲೂಕಿನ ಬಳಗಾನೂರ ಗ್ರಾಮದಲ್ಲಿ ಸರ್ಕಾರಿ ಮಾದರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡ ಮಿಣಜಗಿ ಕ್ಲಸ್ಟರ್ ಮಟ್ಟದ 2025–26 ನೇ ಸಾಲಿನ ಕಲಿಕಾ ಹಬ್ಬ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮಕ್ಕಳಲ್ಲಿ ಮೂಲಭೂತ ಸಾಕ್ಷರತೆ ಮತ್ತು ಸಂಖ್ಯೆಗಳ ಜ್ಞಾನವನ್ನು ಬೆಳೆಸುವುದು, ಕಲಿಕಾ ಹಬ್ಬದಿಂದ ಮಕ್ಕಳಲ್ಲಿ ಶಾಲಾ ಭಾಷೆ ಮತ್ತು ಮಾತೃಭಾಷೆಗಳಲ್ಲಿ ಕಲಿಯುವ ಆಸಕ್ತಿ ಮೂಡಿಸುವ ಉದ್ದೇಶವಾಗಿದೆ ಶಿಕ್ಷಕರು ಇದರ ಯಶಸ್ವಿಗೆ ಹೆಚ್ಚಿನ ಆಸಕ್ತಿ ವಹಿಸಬೇಕು. ಇದು ಮಕ್ಕಳಲ್ಲಿ ಅಡಗಿರುವ ಸೂಕ್ತ ಪ್ರತಿಭೆಗಳನ್ನು ಅಭಿವ್ಯಕ್ತಗೊಳಿಸುವ ಕಾರ್ಯಕ್ರಮವಾಗಿದೆ ನಿರ್ಣಾಯಕರು ಪ್ರಾಮಾಣಿಕವಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕು ಎಂದರು. ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕ ಅಧ್ಯಕ್ಷ ಬಿ.ಟಿ.ವಜ್ಜಲ್ ಮಾತನಾಡಿ ಇದು ಸ್ಪರ್ಧಾತ್ಮಕ ಯುಗವಾಗಿದೆ ಇಲ್ಲಿ ಕೇವಲ ಓದು

ಬರಹ ಕಲಿತರೆ ಸಾಲದು ಮಕ್ಕಳು ಪ್ರತಿಭೆಗಳನ್ನು ಬೆಳೆಸಿಕೊಳ್ಳುವುದು ಅಗತ್ಯವಾಗಿದೆ, ಉಜ್ವಲ ಭವಿಷ್ಯವನ್ನು ನಿರ್ಮಾಣ ಮಾಡಲು ಕಠಿಣ ಪರಿಶ್ರಮಿಗಳಾಗಬೇಕು ಹೆತ್ತವರ ನಿರೀಕ್ಷೆಗಳನ್ನು ಹುಸಿಗೊಳಿಸಬಾರದು ಎಂದರು. ಇದೇ ಸಂದರ್ಭದಲ್ಲಿ ಕ್ಷೇತ್ರದ ಸಮನ್ವಯಾಧಿಕಾರಿ ಆರ್.ಬಿ. ದಮ್ಮೂರಮಠ ಹಾಗೂ ತಾಲೂಕ ದೈಹಿಕ ಶಿಕ್ಷಣಾಧಿಕಾರಿ ಎ.ವೈ.ದಖನಿ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು. ಮುಖ್ಯಗುರುಗಳಾದ ಆರ್.ಎಂ.ಮುರಾಳ ಅಧ್ಯಕ್ಷತೆ ವಹಿಸಿದ್ದರು. ಇಸಿಓ ಸುರೇಶ ಹಿರೇಮಠ ಕಲಿಕಾ ಹಬ್ಬ ಸೆಲ್ಫಿ ಸ್ಟ್ಯಾಂಡ್ ಅನಾವರಣಗೊಳಿಸಿದರು. ರಾಜ್ಯ ಉತ್ತಮ ಶಿಕ್ಷಕಿ ಪ್ರಶಸ್ತಿ ಪುರಸ್ಕೃತ ಮಡಿವಾಳಮ್ಮ ನಾಡಗೌಡ ಕಾರ್ಯಕ್ರಮ ನಿರ್ವಹಿಸಿದರು. ಸಿಆರ್ಪಿ ಬಾಲಾಜಿಸಿಂಗ್ ಬಿಜಾಪುರ ಪ್ರಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಗಣ್ಯರಾದ ಮಲ್ಲಣ್ಣ ದೋರನಹಳ್ಳಿ, ಚೆನ್ನಣ್ಣ ಅಲದಿ, ಲೋಕಣ್ಣ ಸಜ್ಜನ, ನಿವೃತ್ತ ಶಿಕ್ಷಕ ಶಿವಣ್ಣ ಕಡಕೋಳ ಸಂಗನಗೌಡ ಬಿರಾದಾರ, ಬಸನಗೌಡ ದೋರನಹಳ್ಳಿ, ಮುತ್ತು ಮನಹಳ್ಳಿ, ಭೀಮನಗೌಡ ಬಿರಾದಾರ, ಪ್ರಭು ಪತ್ತೆಪೂರ, ಪ್ರಭು ವಾಲಿ, ಇಸಿಓ ಡಿ.ವೈ.ಗುರಿಕಾರ, ಬಿ.ಆರ್ಪಿ ಕೆ.ಎಸ್. ಸಜ್ಜನ, ಸಿಆರ್ಪಿ ಎಸ್.ಎಂ.ಪಾಲ್ಕಿ, ಶಿಕ್ಷಕ ಬಿ.ಐ.ಸಜ್ಜನ, ಸುರೇಶ ವಾಲೀಕಾರ, ಎಸ್.ಬಿ.ಬೀರಗೊಂಡ, ಆರ್.ಎಸ್.ಹಿಪ್ಪರಗಿ, ಮು.ಗು. ಸಿ.ಎಸ್.ಸಿದ್ದರೆಡ್ಡಿ ಕೆ.ಡಿ.ಬಿರಾದಾರ, ಬಿ.ಸಿ.ಮಸರಕಲ್, ಸಂಜು ಹಜೇರಿ, ರಾಘು ಬಾಟಲಿ, ಮಿಣಜಗಿ ಕ್ಲಸ್ಟರ್ ಶಾಲೆ ಶಿಕ್ಷಕರು, ನಿರ್ಣಾಯಕರು ಹಾಗೂ ಮಕ್ಕಳು ಇದ್ದರು. ಕುಮಾರಿ ಅನುಜಾ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ಶಿಕ್ಷಕ ಎಸ್ ಎಮ್ ಬೈಚಬಾಳ ಸ್ವಾಗತಿಸಿದರು. ಶಿಕ್ಷಕ ಬಿ ಐ ಸಜ್ಜನ ವಂದಿಸಿದರು.

# ಹವಾ ಮಲ್ಲಿನಾಥ ಮಹಾರಾಜರ ದರ್ಶನ ಪಡೆಯುವುದೇ ಮಹಾ ಭಾಗ್ಯ




• **ಮಲ್ಲಮ್ಮ ನುಡಿ ವಾರ್ತೆ,ಭಾಲ್ಕಿ:**

ಎಲ್ಲಿ ಭಕ್ತಿ ಇರುತ್ತದೆಯೋ ಅಲ್ಲಿ ಶಕ್ತಿ ನೆಲೆಸಿರುತ್ತದೆ .ಭಕ್ತಿ–ಶಕ್ತಿ ಕೂಡಿದಲ್ಲಿ ಮನದ ಸಂಕಲ್ಪ ಈಡೇರುತ್ತವೆ ಎನ್ನುವುದು ಸಕಲ ಭಕ್ತರ ಭಾವನೆಯಾಗಿದೆ.ನಿರಗುಡಿ ಹವಾ ಮಲ್ಲಿನಾಥ ಮಹಾರಾಜರು ಪ್ರತಿನಿತ್ಯ ರಾಜ್ಯದ ಬೇರೆ ಬೇರೆ ಸ್ಥಳದಲ್ಲಿ ನೆಲೆಸಿದ ಸದ್ಭಕ್ತರಿಗೆ ವಿವಿಧ ನಮೂನೆಯ ಹಣ್ಣುಗಳನ್ನು ಪ್ರಸಾದ ಎಂದು ವಿತರಿಸುತ್ತಾರೆ.ಮಕ್ಕಳು,ಮಹಿಳೆಯರು, ವಯೋವೃದ್ಧರು ಶ್ರುದ್ಧೆ,ಭಕ್ತಿ,ನಿಷ್ಠೆಯಿಂದ ಸಾಲಿನಲ್ಲಿ ನಿಂತು ಪ್ರಸಾದ ಸ್ವೀಕರಿಸುತ್ತಾರೆ.ಬೀದರ–ಭಾಲ್ಕಿ ಮುಖ್ಯರಸ್ತೆಯ ನೌಬಾದ್ ಕ್ರಾಸ್‌ನಲ್ಲಿ ಹವಾ ಮಲ್ಲಿನಾಥ ಮಹಾರಾಜರು ಮಂಗಳವಾರ ಸಾಯಂಕಾಲ ಸಾವಿರಾರು ಭಕ್ತರಿಗೆ ಕಬ್ಬಿನ ರಸ್‌ದ ಜ್ಯೂಸ್ ಮಹಾಪ್ರಸಾದ ಎಂದು ವಿತರಿಸಿದನ್ನು ಸರ್ವ ಸಮುದಾಯದ ಭಕ್ತಗಣ ಭಕ್ತಿಯಿಂದ ಸ್ವೀಕರಿಸಿದ್ದಾರೆ.ಅಲ್ಲಿ ನೆರೆದ ಭಕ್ತರು ಹವಾ ಮಲ್ಲಿನಾಥ ಮಹಾರಾಜರದರ್ಶನ ಪಡೆಯುವುದೇ ಮಹಾ ಭಾಗ್ಯ ಎಂದು ತಮ್ಮತಮ್ಮಲ್ಲಿಯೇ ಮಾತಾಡಿಕೊಳ್ಳುತ್ತಿದ್ದಾರೆ.ಹವಾ ಮಲ್ಲಿನಾಥ ಮಹಾರಾಜರ ಆಶೀರ್ವಾದದಿಂದ ನಮ್ಮ ಜೀವನದ ಎಲ್ಲ ಸಂಕಷ್ಟಗಳು ದೂರಾಗಿವೆ.ಅಲ್ಲದೆ ನಮ್ಮ ಎಲ್ಲ ಹರಕೆಗಳು ಈಡೇರಿವೆ ಎಂದು ಭಕ್ತರು ಪ್ರತಿಕ್ರಿಯೆಸುತ್ತಾರೆ.ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ನಿಸ್ವಾರ್ಥ ಭಾವನೆಯಿಂದ ಭಕ್ತರ ಸೇವೆ ಮಾಡುವುದೇ ನನ್ನ ಜೀವನದ ಪರಮ ಧ್ಯೇಯಯಾಗಿದೆ ಎಂದು ಪೂಜ್ಯರು ತಿಳಿಸುತ್ತಾರೆ.ಈ ಸಂದರ್ಭದಲ್ಲಿ ಶ್ರೇಷ್ಠ ಭಕ್ತರಾದ

# ಸಂಗೀತ ಕ್ಷೇತ್ರಕ್ಕೆ ಪುಟ್ಟರಾಜ ಗವಾಯಿಗಳ ಸೇವೆ ಅಮೋಘ




ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ: ಪಂಡಿತ ಪುಟ್ಟರಾಜ ಗವಾಯಿಗಳು ಅಂಧರಿಗಾಗಿ ಅಮೋಘ ಸೇವೆ ಸಲ್ಲಿಸಿದ್ದಾರೆ ಎಂದು ಸದಲಾಪುರ ಹಿರೇಮಠದ ಸಿದ್ದಲಿಂಗ ಶಿವಾಚಾರ್ಯರು ತಾಲೂಕಿನ ಮೊಳಕೇರಾ ಗ್ರಾಮದ ಬ್ಲೆಸ್ ಗ್ರಾಮೀಣ ಹಾಗೂ ನಗರಾಭಿವೃದ್ಧಿ ಸಂಸ್ಥೆ ಹಮ್ಮಿಕೊಂಡಿದ್ದ ಪುಟ್ಟರಾಜ ಗವಾಯಿಗಳ ನೂತನ ಪಲ್ಲಕ್ಕಿ ಉತ್ಸವ ಹಾಗೂ ಸಂಗೀತ ಕಾರ್ಯಕ್ರಮ ದಿವ್ಯ ಸಾನಿಧ್ಯ ವಹಿಸಿ ಮಾತನಾಡುತ್ತ ತಿಳಿಸಿದರು. ಪಂಡಿತ ಪುಟ್ಟರಾಜ ಗವಾಯಿಗಳು ವಿಕಲಚೇತನರಿಗಾಗಿ ಸಂಗೀತ ಕಲೆ ಕಲಿಸಿ, ವಿಕಲಚೇತನರು ಸ್ವಾವಲಂಭಿಗಳಾಗಿ ಬದುಕಲು ಹಗಲಿರಳು ಶ್ರಮಿಸಿದ್ದಾರೆ ಎಂದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಾಡಿನ ಸಂಗೀತ ಕಲೆ ಉಳಿಸಿ ಸಂರಕ್ಷಿಸಲು ಇಲಾಖೆಯಿಂದ ಹಲವಾರು ಕಾರ್ಯಕ್ರಮಗಳು ಜಾರಿಗೆಗೊಳಿಸಿದೆ, ಕಲಾವಿದರು ಇದರ ಸದುಪಯೋಗ ಪಡೆದುಕೊಳ್ಳಲು ಕರೆ ನೀಡಿದರು. ಈ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ, ಹವಾ ಮಲ್ಲಿನಾಥ ಮಹಾರಾಜರು, ಬ್ಲೆಸ್ ಸಂಸ್ಥೆಯ ಅಧ್ಯಕ್ಷರಾದ ಡಾ. ವೈಜಿನಾಥ ಬಂಡೆನೋರ್ ಅವರು ಸಂಸ್ಥೆ ಮುಖಾಂತರ ವೃದ್ಧರ, ಅಂಗವಿಕಲರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿರುವ ಕಾರ್ಯ ಶ್ಲಾಘನೀಯ ಎಂದರು. ಬ್ಲೆಸ್ ಸಂಸ್ಥೆಯ ಅಧ್ಯಕ್ಷ ಡಾ. ವೈಜಿನಾಥ ಬಂಡೆನೋರ್ ಮಾತನಾಡಿ, ಪುಟ್ಟರಾಜ ಗವಾಯಿಗಳ ದಿವ್ಯ ಶಕ್ತಿಯಿಂದಲೇ ವಿಕಲಚೇತನರ ಸೇವೆ ಸಲ್ಲಿಸಲು ಸಹಾಯವಾಗಿದೆ ಎಂದರು. ಪ್ರತಿಯೊಬ್ಬರು ತಂದೆ ತಾಯಿಗಳ ಹಾಗೂ ಗುರುಗಳ ಸೇವೆ ಮಾಡುವುದು ನಿಜವಾದ ದೇವರ ಸೇವೆ ಎಂದರು.

ನಿವೃತ ಸೈನಿಕರಾದ ಶಿವರುದ್ರಯ್ಯಾ ಬಂಡೆನೋರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಬಸವರಾಜ ಬತಲಿ ಮಾತನಾಡಿದರು. ಈ ಸಂದರ್ಭದಲ್ಲಿ ಬಿಜೆಪಿ ಯುವ ಮುಖಂಡರಾದ ಸಂತೋಷ ಪಾಟೀಲ್, ಶಿವಕುಮಾರ್ ಪಾಟೀಲ್, ಪವನ ನಾಯಕ, ಬುದ್ಧ, ಬಸವ, ಅಂಬೇಡ್ಕರ್ ಸಂಸ್ಥೆಯ ಪದಾಧಿಕಾರಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.




**ಬಸವಕಲ್ಯಾಣ :- ಇಲ್ಲಿನ ಗವಿಮಠದಲ್ಲಿ ಪೂಜ್ಯಶ್ರೀ ಡಾ. ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರ ಸಾನಿಧ್ಯದಲ್ಲಿ 2026ರ ಗವಿಮಠದ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಶರಣಪ್ಪಾ ಬಿರಾದಾರ, ಬಸವಂತಪ್ಪಾ ಲವಾರೆ, ಎ.ಜಿ ಪಾಟೀಲ್, ಈಶ್ವರ್ ಸಿಂಗ್ ಠಾಕೂರ, ಪ್ರೋ.ರುದ್ರೇಶ್ವರ ಗೋರ್ಟಾ, ಬಾಬುರಾವ್ ಚಳಕಾಪುರೆ, ರಮೇಶ ಸ್ವಾಮಿ,ಬಸವರಾಜ ಸೋನ್ನಿ, ಸರಸ್ವತಿ ಬೆಂಬಳಗೆ, ಸುರೇಖಾ ಸಜ್ಜನಶೆಟ್ಟಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)**

# ಗ್ರಾಮ ಪಂ. ಅಧ್ಯಕ್ಷರಿಗೆ ಅಗೌರವ. ಅಧ್ಯಕ್ಷೆ ಮೂಕಾಂಬಿಕಾ ಆರೋಪ.




- **ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು:**

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮೂಕಾಂಬಿಕಾ ನಾಯಕ ಗಂಡ ಭೀಮಣ್ಣ ನಾಯಕ ಗ್ರಾಮ ಪಂಚಾಯಿತಿ ಅಧ್ಯಕ್ಷರು ಅವರು ತಾಲೂಕು ಆಡಳಿತ ಮತ್ತು ತಾಲೂಕು ಪಂಚಾಯಿತಿ ಸಿಎಂ ಕಾರ್ಯಕ್ರಮದಲ್ಲಿ ಸುಮಾರು 400, ಕೋಟಿ ರೂಪಾಯಿ ವೆಚ್ಚದಲ್ಲಿ ಕಾಮಗಾರಿಗಳು ಶಂಕುಸ್ಥಾಪನೆ ಕಾರ್ಯಕ್ರಮಕ್ಕೆನನ್ನನ್ನು ಆಹ್ವಾನಿಸಿದ್ದರು. ಖುದ್ದು ಯಾಗಿ ನೀರಾವರಿ ಇಲಾಖೆಯ ಎಇಇ ಅವರು ಆಹ್ವಾನ ಪತ್ರಿಕೆ ನೀಡಿದ್ದಾರೆ. ಅದರಲ್ಲಿ ಸಹ ನಮ್ಮ ಅತಿಥಿಗಳು ಎಂದೂ ಹೆಸರು ಹಾಕಿದ್ದರು. ನಮ್ಮನು ವೇದಿಕೆ ಮೇಲೆ ಕರೆಯದೆ ಮತ್ತು ನಮ್ಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಗ್ರಾಮಗಳ ಕಾಮಗಾರಿ ಮಾಡಲಾಯಿತು. ಅಲ್ಲಿ ಸಹ ನಮಗೆ ತಾರತಮ್ಯ ನೀತಿ ಅನುಸರಿಸುತ್ತಿರುವ ಮತ್ತು ನಮಗೆ ಅಗೌರವ ತೋರುತ್ತಿರುವುದು ಖಂಡನೆ.

ನಾವು ಎಸಿ ಎಸ್ಟಿ ಅನ್ನುವ ಕಾರಣಕ್ಕೆ ನಮಗೆ ಈಗ ಮಾಡಿದ್ದಾರೆ ಎಂದರೆ ತಾಲೂಕು ತಹಶೀಲ್ದಾರ್ ಅರುಣ್ ಕುಮಾರ್ ಎಚ ದೇಸಾಯಿ ಮತ್ತು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಚಂದ್ರಶೇಖರ ಅವರೇ ನೇರ ಕಾರಣ ಎಂದು ಹೇಳಿದರು.

ಈ ಸುದ್ದಿಗೋಷ್ಠಿಯಲ್ಲಿ. ಬಿಜೆಪಿ ತಾಲೂಕು ಅಧ್ಯಕ್ಷರು ಸಿದ್ಧರಾಮೇಶ ಮನ್ನಾಪುರ. ಯಂಕೋಬ ನಾಯಕ. ಗ್ರಾಮೀಣ ಮಂಡಳಿ ಅಧ್ಯಕ್ಷ ಭೀಮಣ್ಣ ನಾಯಕ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ದಿ 18 ರಂದು ರಾಯಚೂರಿನಲ್ಲಿ ಪುಸ್ತಕ ಸಂತೆ



ರಾಯಚೂರು,ಜ.7-ಕಲಾಸಂಕುಲ ಸಂಸ್ಥೆವತಿಯಿಂದ ಕಲ್ಯಾಣಕರ್ನಾಟಕದಲ್ಲಿ ಮೊಟ್ಟ ಮೊದಲಬಾರಿಗೆ ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದ ಅವರಣದಲ್ಲಿ ದಿ.18 ರಂದು ಒಂದು ದಿನ ಪುಸ್ತಕ ಸಂತೆ, ಆಯೋಜಿಸಲಾಗಿದೆ ಎಂದು ಕಲಾ ಸಂಕುಲ ಸಂಸ್ಥೆ ಕಾರ್ಯದರ್ಶಿ ಮಾರುತಿ ಬಡಿಗೇರ ಹೇಳಿದರು. ಅವರಿಂದುನಗರದಸುದ್ದಿಗಾರರೊಂದಿಗೆ ಮಾತನಾಡುತ್ತಾ,,ಪುಸ್ತಕಗಳ ಮಾರಾಟ ಮತ್ತು ಪ್ರದರ್ಶನ ಹಾಗೂ ಪುಸ್ತಕಗಳ ಉಳುವಿಗಾಗಿ ಇದೊಂದು ಅಭಿಯಾನವಾಗಿದೆ ಎಂದರು.ರಾಜ್ಯದ ಬೆಂಗಳೂರು ಸೇರಿದಂತೆ,ಬೇರೆ ಬೇರೆ ಜಿಲ್ಲೆಗಳಿಂದ ಪ್ರಕಾಶಕರು, ಲೇಖಕರು ಈ ಪುಸ್ತಕ ಸಂತೆಯಲ್ಲಿ ಭಾಗವಹಿಸಲಿದ್ದಾರೆ. ರವಿವಾರ ಬೆಳಗ್ಗೆ 9: ರಿಂದ ಸಂಜೆ 6 ರ ವರೆಗೆ ನಡೆ ಯಲಿದೆ.ಶ್ರೀ ಮಹಾರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ ಕುಲಪತಿಗಳಾದ ಪ್ರೋ. ಶಿವಾನಂದ ಕೆಳಗಿನಮನಿ ಈ ಪುಸ್ತಕ ಸಂತೆಯನ್ನು ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಜಿಲ್ಲೆಯ ಸಾಹಿತಿಗಳಾದ ವೀರಹನುಮಾನ, ಬಾಬು ಬಂಡಾರಿಗಲ್, ಚಿದಾನಂದ ಸಾಲಿ, ಈರಣ್ಣಬೆಂಗಾಲಿ, ಅಯ್ಯಪ್ಪಯ್ಯ ಹುಡಾ, ಜಾನ್‌ವೆಸ್ಲಿ, ವೆಂಕಟೇಶ ಬೇವಿನಬೆಂಚಿ, ಭಾಗವಹಿಸುವರು. ಕಲಾ ಸಂಕುಲ ಸಂಸ್ಥೆ ಅಧ್ಯಕ್ಷರಾದ ರೇಖಾ ಬಡಿಗೇರ್ ಉಪಸ್ಥಿತಿಯಲ್ಲಿ ಈ ಕಾರ್ಯಕ್ರಮ ನಡೆಯಲಿದೆ.ಪುಸ್ತಕ ಸಂತೆಯಲ್ಲಿಪುಸ್ತಕಮಾರಾಟಮಾಡಲು ಮಳಿಗೆಯನ್ನುತೆರೆಯಲಿಚ್ಚಿಸುವವರು ಶುಲ್ಕರು:299-ಇರುತ್ತದೆ.ಈಶುಲ್ಕದಲ್ಲಿ ಮಧ್ಯಾಹ್ನದ ಊಟದ ವ್ಯವಸ್ಥೆ ಮತ್ತು ಪ್ರಮಾಣ ಪತ್ರ ಹಾಗೂ ನೆನಪಿನ ಕಾಣಿಕೆ ನೀಡಲಾಗುವುದು. ಅಸಕ್ತರು ತಮ್ಮ ಹೆಸರನ್ನುನೊಂದಾಯಿಸಲು ಇದೇ 15 ರಂದು ಕೊನೆಯ ದಿನ

ಹೆಚ್ಚಿನ ಮಾಹಿತಿಗಾಗಿ ಮಾರುತಿ ಬಡಿಗೇರ 9448777383 ಇವ ರನ್ನು ಸಂಪರ್ಕಿಸಿಬೇಕೆಂದು ಕೋರಲಾಗಿದೆ.ಈ ಸಂದರ್ಭದಲ್ಲಿ ಅಮರಗೌಡ ಕಲಾವಿಧರುಮೌನೇಶ ವಡವಾಟಿ ನಿರ್ದೇಶಕರು,ಸಂತೋಷಿ ನಿರ್ದೇಶಕರು ಉಪಸ್ಥಿತರಿದ್ದರು.

# ಜಿಲ್ಲಾ ಭೋವಿ ವಡ್ಡರ ಸಮಾಜ ಸಮಿತಿ ಬದಲಾವಣೆ: ಹಳೆಪ್ಪ ಧೋತ್ರೆ

- **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**



ಯಾದಗಿರಿ ಜಿಲ್ಲಾ ಭೋವಿ ವಡ್ಡರ ಸಮಾಜ ಸಮಿತಿ ಬದಲಾವಣೆ ಮತ್ತು ನೂತನವಾಗಿ ರಚನೆ ಹಾಗೂ ಶ್ರೀ ಶ್ರೀ ಶ್ರೀ ಸಿದ್ಧಾರಾಮೇಶ್ವರ ಜಯಂತಿಯ ಪೂರ್ವಬಾವಿ ಮಾಡಲಗುತ್ತದೆ, ಭೋವಿ ಸಮಾಜದ ಪ್ರತಿಯೊಬ್ಬರು ಅಗಮಿಸಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ, ನೊತನ ಪದಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲು ತಮ್ಮ ಸಲಹೆ, ಸಹಕಾರ ನೀಡಬೇಕೆಂದು ಸಮಾಜದ ಮುಖಂಡ ಹಳೆಪ್ಪ ಧೋತ್ರೆ ಹೇಳಿದ್ದರು. ಯಾದಗಿರಿ ಜಿಲ್ಲಾ ಭೋವಿ ವಡ್ಡರ ಸಮಾಜದ ಸಮಿತಿ ಬದಲಾವಣೆ ಮತ್ತು ನೂತನವಾಗಿ ರಚನೆ ಮಾಡುವುದಾಗಿ ಯಾದಗಿರಿ ಜಿಲ್ಲೆಯ ಸಮಸ್ತ ಎಲ್ಲಾ ತಾಲೂಕಿನ ಸಮಾಜದ ಮುಖಂಡರು, ಯುವಕರು, ಸಮಾಜದ ಬಾಂದವರು ಸಭೆಯಲ್ಲಿ ಪಾಲ್ಗೊಂಡು ನೂತನವಾಗಿ ಪದಾಧಿಕಾರಿಗಳನ್ನು ಆಯ್ಕೆ ಮಾಡಲು ಸಮಸ್ತ ಸಮಾಜದ ಪ್ರತಿಯೊಬ್ಬರಿಗೂ ಆಯ್ಕೆ ಮಾಡಲು ಹಕ್ಕು & ಅವಕಾಶ ಇದೆ ಮತ್ತು ಶ್ರೀ ಸಿದ್ಧಾರಾಮೇಶ್ವರ ಜಯಂತಿಯ ಪೂರ್ವಭಾವಿ ಸಭೆಯನ್ನು ಹಳೆಯ ಪ್ರವಾಸಿ ಮಂದಿರಲ್ಲಿ ದಿನಾಂಕ: 08-01-2026 ರಂದು ಗುರುವಾರ ಸಮಯ: ಬೆಳಿಗ್ಗೆ 10:00 ಏರ್ಪಡಿಸಲಾಗಿದೆ, ಹೆಚ್ಚಿನ ಮಾಹಿತಿಗಾಗಿ ಮೊ. 9741673632, 9880015743 ಸಂಪರ್ಕಿಸಿ ಎಂದು ತಿಳಿಸಿದ್ದರು. ಈ ವೇಳೆಯಲ್ಲಿ ಮಾರೆಪ್ಪ ತಂದೆ ಗಿರೆಪ್ಪ ವರ್ಕನಳ್ಳಿ ಮತ್ತು ಸಮಾಜದ ಹಿರಿಯ ಮುಖಂಡರು ಇದ್ದರು.

# ಜ.12 ರಂದು ಗ್ಯಾರಂಟಿ ಉತ್ಸವ ಕಾರ್ಯಕ್ರಮ

- **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

ಜಿಲ್ಲೆಯ ಜಿಲ್ಲಾ ಮಟ್ಟದ ಗ್ಯಾರಂಟಿ ಕಾರ್ಯಾಗಾರ ಮತ್ತು ಗ್ಯಾರಂಟಿ ಉತ್ಸವ 2026ರ ಜನವರಿ 12 ರಂದು ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಯಾದಗಿರಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಲವೀಶ್ ಒರಡಿಯಾ ಅವರು ತಿಳಿಸಿದ್ದಾರೆ.

ಯಾದಗಿರಿ ಜಿಲ್ಲೆಯ ಜಿಲ್ಲಾ ಮಟ್ಟದ ಗ್ಯಾರಂಟಿ ಉತ್ಸವ ಕಾರ್ಯಕ್ರಮವನ್ನು ನಡೆಸಲು ಉದ್ದೇಶಿಸಲಾಗಿದ್ದು, ಈ ಕಾರ್ಯಕ್ರಮವನ್ನು ಆಯೋಜಿಸುವ ಸಂಬಂಧ ಪೂರ್ವಭಾವಿ ಸಭೆ ನಡೆಸುವ ಮೂಲಕ ಅಗತ್ಯ ಎಲ್ಲಾ ಕ್ರಮಗಳನ್ನು ಕೈಗೊಳ್ಳುವಂತೆ ಹಾಗೂ ಈ ಕಾರ್ಯಕ್ರಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು ಭಾಗವಹಿಸಲು ಸಮ್ಮತಿ ಸೂಚಿಸಿದೆ.

ಜಿಲ್ಲೆಯ ಸಂಸದರು, ಶಾಸಕರು (ವಿಧಾನಸಭೆ ಮತ್ತು ವಿಧಾನಪರಿಷತ್), ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರು ಹಾಗೂ ರಾಜ್ಯ ಉಪಾಧ್ಯಕ್ಷರುಗಳನ್ನು ಹಾಗೂ ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳು ಸೇರಿದಂತೆ ಜಿಲ್ಲಾ ಹಾಗೂ ಎಲ್ಲಾ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳನ್ನು ಅಧಿಕೃತವಾಗಿ ಆಹ್ವಾನಿಸಲಾಗಿದು, ಹಾಗೂ ಈ ಕಾರ್ಯಕ್ರಮಗಳನ್ನು ಆಯೋಜಿಸುವ ಸಂಬಂಧ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಬೇಕು, ಈ ಕೆಳಕಂಡ ಅಧಿಕಾರಿಗಳನ್ನು ನೇಮಿಸಿ ಆದೇಶಿಸಿದೆ.

ಕಾರ್ಯಕ್ರಮ ನಿರ್ವಹಿಸಬೇಕಾದ ಅಧಿಕಾರಿಯ ವಿವರ : ಯಾದಗಿರಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಿರಿಯ ಸಹಾಯಕ ನಿರ್ದೇಶಕರು ಸುಲ್ಯೆಮಾನ ಡಿ.ನದಾಫ್ ಅವರು ಜಿಲ್ಲೆ ಮತ್ತು ತಾಲ್ಲೂಕುವಾರು, ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಪ್ರಸ್ತುತದವರೆಗೂ ಸಾಧಿಸಿರುವ ಪ್ರಗತಿಯ ವಿವರಗಳನ್ನು ವಿಡಿಯೋ ಸಾಕ್ಷ್ಯಾ ಚಿತ್ರಗಳ ಮೂಲಕ ಕಾರ್ಯಾಗಾರದ ಸಭೆಯಲ್ಲಿ ಪ್ರದರ್ಶಿಸಬೇಕು.ಯಾದಗಿರಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪ ನಿರ್ದೇಶಕರು ತಿಪ್ಪಣ್ಣ ಸಿರಸಗಿ ಅವರು ಹಾಗೂ ಯಾದಗಿರಿ ವಿಭಾಗ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ವಿಭಾಗೀಯ ನಿಯಂತ್ರಣಾಧಿಕಾರಿ ಜಿ.ಬಿ ಮಂಜುನಾಥ ಅವರು ಜಿಲ್ಲೆಯ ಮಾದರಿ ಗ್ಯಾರಂಟಿ ಫಲಾನುಭವಿಗಳನ್ನು ಗುರುತಿಸಿ, ಗ್ಯಾರಂಟಿ ಕಾರ್ಯಾಗಾರ ಸಭೆಯಲ್ಲಿ ಸನ್ಮಾನಿಸುವುದು, ಹಾಗೂ ಪ್ರತಿ ತಾಲೂಕಿನಿಂದ ಕನಿಷ್ಠ 25 ಮಾದರಿ ಮಹಿಳಾ ಫಲಾನುಭವಿಗಳನ್ನು ಗುರುತಿಸಿ ಪ್ರಶಸ್ತಿಯನ್ನು ನೀಡಿ ಸನ್ಮಾನಿಸುವುದು.

ಯಾದಗಿರಿ (MGNREGA) ಜಿಲ್ಲಾ ಪಂಚಾಯತ ಆಖಇಅ ಸಂಯೋಜಕರು, ಹಾಗೂ ಶಹಾಪೂರ (MGNREGA)ತಾಲ್ಲೂಕ ಪಂಚಾಯತ ಖಇಅ ಸಂಯೋಜಕರು ಅವರು ಜಿಲ್ಲೆಯ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಯಶೋಗಾಥೆಗಳನ್ನು ಸಾಕ್ಷ ಚಿತ್ರಗಳ ಮೂಲಕ ಮತ್ತು ಫಲಾನುಭವಿಗಳ ಅಭಿಪ್ರಾಯಗಳನ್ನು ವಿಡಿಯೋ ಚಿತ್ರಣದ ಮೂಲಕ ಕಾರ್ಯಗಾರ ಸಭೆಯಲ್ಲಿ ಪ್ರದರ್ಶಿಸಬೇಕು.

ಯಾದಗಿರಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಉತ್ತರಾದೇವಿ ಮಠಪತಿ ಅವರು ಗ್ಯಾರಂಟಿ ಯೋಜನೆಗಳ ಕುರಿತು ನಾಟಕ ಪ್ರದರ್ಶನ ಸೇರಿದಂತೆ ಇತರೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು.

(DRDA) ಯೋಜನಾ ನಿರ್ದೇಶಕರು ಹಾಗೂ ಯಾದಗಿರಿ ಜಿಲ್ಲಾ ಪಂಚಾಯತ ಎನ್.ಆರ್.ಎಲ್. ಎಮ್ ತಂಡದವರು ಜಿಲ್ಲೆಯ ಸ್ವಸಹಾಯ ಗುಂಪುಗಳು ಉತ್ಪಾದಿಸುವ ಉತ್ಪನ್ನಗಳು ಸೇರಿದಂತೆ, ಸ್ಥಳೀಯ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮಳಿಗೆಗಳನ್ನು ಸ್ಥಾಪಿಸುವುದು ಹಾಗೂ ಇತರೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಆಯೋಜಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಲಿಕಾ ಹಬ್ಬ ಶಿಕ್ಷಣ ಇಲಾಖೆಯ ಮಹತ್ವದ ಕಾರ್ಯಕ್ರಮ



- **ಮಲ್ಲಮ್ಮ ನುಡಿ ವಾರ್ತೆ ,ತಾಳಿಕೋಟಿ:**

ಕಲಿಕಾ ಹಬ್ಬವು ಮಕ್ಕಳ ಕಲಿಕೆಯನ್ನು ಸಂತೋಷದಾಯಕ ಮತ್ತು ಆಕರ್ಷಕ ರೀತಿಯಲ್ಲಿ ಸುಧಾರಿಸಲು ಶಾಲಾ ಶಿಕ್ಷಣ ಇಲಾಖೆಯ ಮಹತ್ವದ ಕಾರ್ಯಕ್ರಮವಾಗಿದೆ ಎಂದು ಮುದ್ದೇಬಿಹಾಳ ಪ್ರಭಾರಿ ಕ್ಷೇತ್ರ ಶಿಕ್ಷಣಾಧಿಕಾರಿ ಆರ್ ಬಿ ದಮ್ಮೂರಮಠ ಹೇಳಿದರು. ತಾಲೂಕಿನ ಬಳಗಾನೂರ ಗ್ರಾಮದಲ್ಲಿ ಸರ್ಕಾರಿ ಮಾದರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡ ಮಿಣಜಗಿ ಕ್ಲಸ್ಟರ್ ಮಟ್ಟದ 2025-26 ನೇ ಸಾಲಿನ ಕಲಿಕಾ ಹಬ್ಬ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮಕ್ಕಳಲ್ಲಿ ಮೂಲಭೂತ ಸಾಕ್ಷರತೆ ಮತ್ತು ಸಂಖ್ಯೆಗಳ ಜ್ಞಾನವನ್ನು ಬೆಳೆಸುವುದು, ಕಲಿಕಾ ಹಬ್ಬದಿಂದ ಮಕ್ಕಳಲ್ಲಿ ಶಾಲಾ ಭಾಷೆ ಮತ್ತು ಮಾತೃಭಾಷೆಗಳಲ್ಲಿ ಕಲಿಯುವ ಆಸಕ್ತಿ ಮೂಡಿಸುವ ಉದ್ದೇಶವಾಗಿದೆ ಶಿಕ್ಷಕರು ಇದರ ಯಶಸ್ವಿಗೆ ಹೆಚ್ಚಿನ ಆಸಕ್ತಿ ವಹಿಸಬೇಕು. ಇದು ಮಕ್ಕಳಲ್ಲಿ ಅಡಗಿರುವ ಸೂಕ್ತ ಪ್ರತಿಭೆಗಳನ್ನು ಅಭಿವ್ಯಕ್ತಗೊಳಿಸುವ ಕಾರ್ಯಕ್ರಮವಾಗಿದೆ ನಿರ್ಣಾಯಕರು ಪ್ರಾಮಾಣಿಕವಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕು ಎಂದರು. ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕ ಅಧ್ಯಕ್ಷ ಬಿ.ಟಿ.ವಜ್ಜಲ್ ಮಾತನಾಡಿ ಇದು ಸ್ಪರ್ಧಾತ್ಮಕ ಯುಗವಾಗಿದೆ ಇಲ್ಲಿ ಕೇವಲ ಓದು ಬರಹ ಕಲಿತರೆ ಸಾಲದು ಮಕ್ಕಳು ಪ್ರತಿಭೆಗಳನ್ನು ಬೆಳೆಸಿಕೊಳ್ಳುವುದು ಅಗತ್ಯವಾಗಿದೆ, ಉಜ್ವಲ ಭವಿಷ್ಯವನ್ನು ನಿರ್ಮಾಣ ಮಾಡಲು ಕಠಿಣ ಪರಿಶ್ರಮಿಗಳಾಗಬೇಕು ಹೆತ್ತವರ ನಿರೀಕ್ಷೆಗಳನ್ನು ಹುಸಿಗೊಳಿಸಬಾರದು ಎಂದರು. ಇದೇ ಸಂದರ್ಭದಲ್ಲಿ ಕ್ಷೇತ್ರದ ಸಮನ್ವಯಾಧಿಕಾರಿ ಆರ್.ಬಿ. ದಮ್ಮೂರಮಠ ಹಾಗೂ ತಾಲೂಕ ದೈಹಿಕ ಶಿಕ್ಷಣಾಧಿಕಾರಿ ಎ.ವೈ.ದಖನಿ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು. ಮುಖ್ಯ ಗುರುಗಳಾದ ಆರ್.ಎಂ.ಮುರಾಳ ಅಧ್ಯಕ್ಷತೆ ವಹಿಸಿದ್ದರು.ಇಸಿಓ ಸುರೇಶ ಹಿರೇಮಠ ಕಲಿಕಾ ಹಬ್ಬ ಸೆಲ್ಫಿ ಸ್ಟ್ಯಾಂಡ್ ಅನಾವರಣಗೊಳಿಸಿದರು. ರಾಜ್ಯ ಉತ್ತಮ ಶಿಕ್ಷಕಿ ಪ್ರಶಸ್ತಿ ಪುರಸ್ಕೃತ ಮಡಿವಾಳಮ್ಮ ನಾಡಗೌಡ ಕಾರ್ಯಕ್ರಮ ನಿರ್ವಹಿಸಿದರು.ಸಿಆರ್‌ಪಿ ಬಾಲಾಜಿಸಿಂಗ್ ಬಿಜಾಪುರ ಪ್ರಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಗಣ್ಯರಾದ ಮಲ್ಲಣ್ಣ ದೋರನಹಳ್ಳಿ, ಚೆನ್ನಣ್ಣ ಅಲದಿ, ಲೋಕಣ್ಣ ಸಜ್ಜನ, ನಿವೃತ್ತ ಶಿಕ್ಷಕ ಶಿವಣ್ಣ ಕಡಕೋಳ ಸಂಗನಗೌಡ ಬಿರಾದಾರ,ಬಸನಗೌಡ ದೋರನಹಳ್ಳಿ, ಮುತ್ತು ಮನಹಳ್ಳಿ, ಭೀಮನಗೌಡ ಬಿರಾದಾರ, ಪ್ರಭು ಪತ್ತೆಪೂರ, ಪ್ರಭು ವಾಲಿ,ಇಸಿಓ ಡಿ.ವೈ.ಗುರಿಕಾರ,ಬಿ.ಆರ್‌ಪಿ ಕೆ.ಎಸ್. ಸಜ್ಜನ,ಸಿಆರ್‌ಪಿ ಎಸ್.ಎಂ.ಪಾಲ್ಕಿ,ಶಿಕ್ಷಕ ಬಿ.ಐ.ಸಜ್ಜನ, ಸುರೇಶ ವಾಲೀಕಾರ,ಎಸ್.ಬಿ.ಬೀರಗೊಂಡ, ಆರ್.ಎಸ್.ಹಿಪ್ಪರಗಿ,ಮು.ಗು. ಸಿ.ಎಸ್.ಸಿದ್ದರೆಡ್ಡಿ ಕೆ.ಡಿ.ಬಿರಾದಾರ, ಬಿ.ಸಿ.ಮಸರಕಲ್,ಸಂಜು ಹಜೇರಿ,ರಾಘು ಬಾಟಲಿ, ಮಿಣಜಗಿ ಕ್ಲಸ್ಟರ್ ಶಾಲೆ ಶಿಕ್ಷಕರು, ನಿರ್ಣಾಯಕರು ಹಾಗೂ ಮಕ್ಕಳು ಇದ್ದರು.ಕುಮಾರಿ ಅನುಜಾ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ಶಿಕ್ಷಕ ಎಸ್ ಎಮ್ ಬೈಚಬಾಳ ಸ್ವಾಗತಿಸಿದರು. ಶಿಕ್ಷಕ ಬಿ ಐ ಸಜ್ಜನ ವಂದಿಸಿದರು.

# ಸುಳ್ಳು ಸುದ್ದಿ ಪ್ರಚಾರ ಅಂಗನವಾಡಿ ಕಾರ್ಯಕರ್ತೆ ಮೇಲೆ ಕ್ರಮಕೈಗೊಳ್ಳದಂತೆ ಮನವಿ



- **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಇತ್ತೀಚೆಗೆ ಖಾಸಗಿ ನ್ಯೂಸ್ ಚಾನಲ್ ನಲ್ಲಿ ಪ್ರಸಾರವಾದ ಅಂಗನವಾಡಿ ಪೌಷ್ಟಿಕ ಆಹಾರ ಗೋಲ್ ಮಾಲ್ ಎಂಬ ಸುಳ್ಳು ಸುದ್ದಿ ಆಧಾರಿಸಿ ಕಾರ್ಯಕರ್ತೆ ಮೇಲೆ ಯಾವುದೇ ಕ್ರಮಕೈಗೊಳ್ಳಬಾರದು ಎಂದು ಕರ್ನಾಟಕ ರಾಜ್ಯ ಅಂಗನವಾಡಿ ನೌಕರ ಸಂಘದ ಮುಖಂಡರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದೆ.ಇತ್ತೀಚೆಗೆ ಒಂದು ಖಾಸಗಿ ನ್ಯೂಸ್ ಚಾನಲ್ ನಲ್ಲಿ ರಾಯಚೂರಿನಲ್ಲಿ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ಪೌಷ್ಟಿಕ ಆಹಾರ ವಿತರಣೆ ಮಾಡದೇ ಗೋಲ್ ಮಾಲ್ ಮಾಡಲಾಗುತ್ತಿದೆ. ಎಂದು ಮತ್ತು ಈ ಗೋಲ್ ಮಾಲ್ ಕೆಲಸದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮೇಲ್ವಿಚಾರಕಿಯರು ಮತ್ತು ಸಿಡಿಪಿಓಗಳು ಕೈಜೋಡಿಸಲಾಗಿದೆ. ಎಂದು ಸುಳ್ಳು ಸುದ್ದಿ ಪ್ರಸಾರವಾಗಿದೆ. ಅದನ್ನು ಆಧಾರಿಸಿ ಅಂಗನವಾಡಿ ನೌಕರರ ಮೇಲೆ ಯಾವುದೇ ರೀತಿಯ ಕ್ರಮವಹಿಸಬೇಕು ಒತ್ತಾಯಿಸಿದೆ. ಈಗಾಗಲೇ ಅಂಗನವಾಡಿ ಕೇಂದ್ರಗಳಿಗೆ ಕಳೆದ ಎರಡು ವರ್ಷಗಳಿಂದ ಮಕ್ಕಳಿಗೆ ಚುಕ್ಕಿ ನೀಡುವುದು ಬಂದ್ ಅಗಿದೆ ಮತ್ತು ಹಾಲು-ಮೊಟ್ಟೆಗಳು ನಿಯಮಿತವಾಗಿ ನೀಡಲಾಗುತ್ತದ್ದು .ಮೊಟ್ಟೆಗಳು ಅಂಗನವಾಡಿ ವೇಳಾಪಟ್ಟಿ ಪ್ರಕಾರ ಅಂಗನವಾಡಿ ಕೇಂದ್ರದ ಮಕ್ಕಳಿಗೆ ವಾರದಲ್ಲಿ ಎರಡು ದಿನ ನೀಡಬೇಕೆಂದು ಆದೇಶ ಇದ್ದು ಅದರಂತೆ ನೀಡಲಾಗುತ್ತಿದೆ. ಆದರೆ ಖಾಸಗಿ ನ್ಯೂಸ್ ಚಾನಲ್ ವರದಿಗಾರರು ಸುದ್ದಿ ಮಾಡಲು ಹೋದ ದಿನ ಅ ಕೇಂದ್ರದ ಕಾರ್ಯಕರ್ತೆ ಅಂದು ತಿಂಗಳ ವೃತ್ತ ಸಭೆ ಇರುವದ್ದರಿಂದ ಅವರು ಅ ಸಭೆಗೆ ಹೋಗಿ ಇರುತ್ತಾರೆ ಮತ್ತು ಅಂಗನವಾಡಿ ಕೇಂದ್ರದ ವೇಳಾಪಟ್ಟಿಯಂತೆ ಅವತ್ತು ಮೊಟ್ಟೆ ನೀಡುವುದು ಇರಲ್ಲಿಲ ಎಂದು ದೂರಿದರು.

ಈಸಂದರ್ಭದಲ್ಲಿಹೆಚ್.ಪದ್ಮಾ,ಗೋಕಾರಮ್ಮ ಸೇರಿದಂತೆ ಉಪಸ್ಥಿತರಿದ್ದರು.

# ದೂರುಗಳ ಪ್ರಮಾಣ ಹೆಚ್ಚುತ್ತಿರುವುದು ದುರದೃಷ್ಟಕರ: ಶ್ರೀನಾಥ ಕೆ ಕಳವಳ



ರಾಯಚೂರು: ಕರ್ನಾಟಕ ಲೋಕಾಯುಕ್ತದಲ್ಲಿ 2022ರಲ್ಲಿ ಇದ್ದ 8000 ಕೇಸಗಳ ಪ್ರಮಾಣವು ಈಗ 2025ರ ಹೊತ್ತಿಗೆ 45,000ಕ್ಕೆ ಏರಿದ್ದು ದುರದೃಷ್ಟಕರ ಎಂದು ಗೌರವಾನ್ವಿತ ಕರ್ನಾಟಕ ಲೋಕಾಯುಕ್ತರ ಕಾರ್ಯದರ್ಶಿಗಳಾದ ಶ್ರೀನಾಥ ಕೆ ಅವರು ಕಳವಳ ವ್ಯಕ್ತಪಡಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜನವರಿ 7ರಂದು ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರಿಂದ ನಡೆದ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆಯ ಬಳಿಕ ಕರ್ನಾಟಕ ಲೋಕಾಯುಕ್ತದ ಅಪರ ನಿಬಂಧಕರಾದ ಎ.ವಿ.ಪಾಟೀಲ ಅವರೊಂದಿಗೆ ಪತ್ರಿಕಾಗೋಷ್ಠಿ ನಡೆಸಿ ಅವರು ಮಾತನಾಡಿದರು.

ಸರ್ಕಾರದ ಕೆಲಸ ದೇವರ ಕೆಲಸ ಎಂದು ಅರ್ಥೈಸಲಾಗಿದೆ. ಸರ್ಕಾರಿ ನೌಕರಿ ಪಡೆಯುವ ಅಧಿಕಾರಿಗಳು ಮತ್ತು ಸಿಬ್ಬಂದಿ ಅದೃಷ್ಟವಂತರು. ಅವರ ಬಗ್ಗೆ ಸಮಾಜದಲ್ಲಿ ವಿಶೇಷ ಗೌರವ ಇರುತ್ತದೆ. ಆದರೆ, ಇದನ್ನು ಕೆಲವು ಅಧಿಕಾರಿಗಳು ಮತ್ತು ಸಿಬ್ಬಂದಿ ಅರಿಯದೇ ಹಣದ ಆಸೆಗಾಗಿ ಲೋಪ ಎಸಗುತ್ತಿರುವುದು ಕಂಡು ಬರುತ್ತಿದೆ. ಅಧಿಕಾರಿಗಳು ಮತ್ತು ಸಿಬ್ಬಂದಿ ಲೋಪವೆಸಗಿ ವಾರಂಟ್ ಸ್ವೀಕರಿಸುವ ಹಂತಕ್ಕೆ ತಲುಪಿದ್ದು ನೋವಿನ ಸಂಗತಿ ಎಂದು ಅವರು ತಿಳಿಸಿದರು.ಕೆರೆಗಳ ಸುರಕ್ಷತೆಗೆ ಒತ್ತು: ಕೆರೆ ಒತ್ತುವರಿ ಹಿನ್ನೆಲೆಯಲ್ಲಿ 2018ರಲ್ಲೇ ಲೋಕಾಯುಕ್ತದಿಂದ ರಾಜ್ಯದ ಎಲ್ಲ ಕಡೆಗೆ ಕೇಸ್ ದಾಖಲಿಸಲಾಗಿದೆ. ರಾಯಚೂರು ಜಿಲ್ಲೆಯಲ್ಲಿ ಒಟ್ಟು 587 ಕೆರೆಗಳಿದ್ದು, ಜನರ ಜೀವನಾಡಿಯಾದ ಈ ಕೆರೆಗಳ ಸುರಕ್ಷತೆಗೆ ಒತ್ತು ಕೊಡಬೇಕು. ಜಿಲ್ಲೆಯಲ್ಲಿ 46 ಕೆರೆಗಳ ಒತ್ತುವರಿ ತಡೆದಿದ್ದೇವೆ ಎಂದು ಅಧಿಕಾರಿಗಳು ವರದಿ ನೀಡಿದ್ದಾರೆ. 319 ಕೆರೆಗಳ ಸರ್ವೆ ನಡೆಸಿದ ಬಗ್ಗೆ ನಕ್ಷೆ ನೀಡಬೇಕು ಎಂದು ಎಡಿಎಲ್‌ಆರ್ ಅವರಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.155 ಘಟಕ ನಿಷ್ಕ್ರಿಯ; ಅಸಮಾಧಾನ: ಅರಕೇರಾದಲ್ಲಿ 72, ದೇವದುರ್ಗದಲ್ಲಿ 72, ಲಿಂಗಸಗೂರುದಲ್ಲಿ 114, ಮಸ್ಕಿಯಲ್ಲಿ 66, ರಾಯಚೂರುದಲ್ಲಿ 107, ಸಿಂಧನೂರನಲ್ಲಿ 116 ಮತ್ತು ಸಿರವಾರದಲ್ಲಿ 57 ಸೇರಿ ಜಿಲ್ಲೆಯಲ್ಲಿ ಒಟ್ಟು 716 ಶುದ್ಧ ಕುಡಿವ ನೀರಿನ ಘಟಕಗಳ ಪೈಕಿ 561 ಘಟಕಗಳು ಮಾತ್ರ ಸುಸ್ಥಿತಿಯಲ್ಲಿವೆ. 155 ಘಟಕಗಳು ನಿಷ್ಕ್ರಿಯವಾಗಿದ್ದು, ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ವರದಿ ನೀಡಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದರು.

**ನಾಯಿಗಳ ಹಾವಳಿ ತಡೆಗೆ ಕ್ರಮವಹಿಸಿ:**

ಸಾರ್ವಜನಿಕಸ್ಥಳಗಳಲ್ಲಿ ಬೀದಿನಾಯಿಗಳ ಹಾವಳಿ ನಿಯಂತ್ರಿಸಲೇಬೇಕು ಎಂದು ಸುಪ್ರೀಂ ಕೋರ್ಟ್ ಕಟ್ಟುನಿಟ್ಟಿನ ಸೂಚನೆ ನೀಡಿದಾಗ್ಯೂ ರಾಯಚೂರು ನಗರ ಸೇರಿದಂತೆ ಸಿಂಧನೂರ, ಮಾನವಿ, ಲಿಂಗಸೂರು, ದೇವದುರ್ಗ, ಮಸ್ಕಿ, ಸಿರವಾರ, ಅರಕೇರಾ ಯಾವುದೆ ಕಡೆಗಳಲ್ಲಿ ಏನೂ ಕ್ರಮಗಳಾಗದೇ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಅಧಿಕಾರಿಗಳು ಸುಮ್ಮನಿದ್ದು, ಈ ಬಗ್ಗೆ ಕೂಡಲೇ ಕ್ರಮ ಜರುಗಿಸಿ ವಿವರವಾದ ವರದಿ ನೀಡವೇಕು ಎಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಬಯಲುಶೌಚಮುಕ್ತಜಿಲ್ಲೆಯಾಗಲಿ: ಈಗಲು ರೋಡ್ ಪಕ್ಕ ಕುಳಿತು ಬಯಲು ಶೌಚ ಮಾಡುವ ಪರಿಸ್ಥಿತಿ ರಾಯಚೂರು ಸೇರಿದಂತೆ ಈ ಭಾಗದ ಜಿಲ್ಲೆಗಳಲ್ಲಿ ಕಾಣುತ್ತಿದೆ. ರಾಯಚೂರು ಜಿಲ್ಲೆಯಲ್ಲಿ ಶೌಚಾಲಯ ಪರಿಸ್ಥಿತಿಯ ಚಿತ್ರಣ ಸಿಕ್ಕಿಲ್ಲ.

ಸಿಇಓ ಅವರಿಂದ ಮಾಹಿತಿ ಪಡೆದು ಪರಿಶೀಲಿಸುತ್ತೇವೆ ಎಂದು ಅವರು ತಿಳಿಸಿದರು.

ಚೆಕ್‌ಪೋಸ್ಟಗಳ ಮೇಲೆ ನಿಗಾ: ಬೀದರ ಜಿಲ್ಲೆಯ ಹುಮನಾಬಾದ್ ಬಳಿಯ ಚೆಕ್‌ಪೋಸ್ಟ್ ಮೂಲಕ ಸಂಚರಿಸುವ ವಾಹನಗಳ ಚಾಲಕರಿಂದ ಕೆಲವು ಆರ್‌ಟಿಓ ಅಧಿಕಾರಿಗಳು ಮತ್ತು ಸಿಬ್ಬಂದಿ ಹಾಡಹಗಲೇ ಅನಧೀಕೃತವಾಗಿ ಹಣ ವಸೂಲಿ ಮಾಡುವ ಕೃತ್ಯವನ್ನು ನಮ್ಮ ಲೋಕಾ ತಂಡವು ಬೇಧಿಸಿದೆ. ಈ ಬಗ್ಗೆ ಎಫ್‌ಐಆರ್ ದಾಖಲಿಸಿದೆ. ಈ ಜಾಲ ಎಲ್ಲಾ ಕಡೆ ಇರಬಹುದು ಎಂದು ಯೋಚಿಸಿ ರಾಯಚೂರು ಚೆಕ್ ಪೋಸ್ಟಗಳ ಮೇಲೆ ನಿಗಾ ಇಡಲಾಗುವುದು ಎಂದು ಶ್ರೀನಾಥ ಕೆ ಅವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಲೋಕಾಯುಕ್ತದ ಅಧೀಕ್ಷಕರಾದ ಸತೀಶ್ ಎಸ್ ಚಿಟಗುಬ್ಬಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಕ್ಷು ಗಿರಿ, ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಹಾಗೂ ಇನ್ನಿತರರು ಇದ್ದರು.

# ಶಾಸಕರಿಂದ ರಸ್ತೆ ಕಾಮಗಾರಿ: ವೀಕ್ಷಣೆ



- **ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ:**

ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಇದು ಒಂದು ಅತ್ಯುತ್ತಮ ಯೋಜನೆಯಾಗಿದೆ ನನ್ನ ಮತ ಕ್ಷೇತ್ರದಲ್ಲಿ ಒಟ್ಟು 3 ರಸ್ತೆಗಳು ಮಂಜೂರು ಆಗಿವೆ, ರಸ್ತೆ ನಿರ್ಮಾಣ ಕಾಮಗಾರಿ ನಡೆಯುತ್ತಿವೆ. ಪಟ್ಟಣದ ಮುಖ್ಯ ರಸ್ತೆಯಿಂದ ಫಾತ್ಮಪುರ್ ವರೆಗೆ ಅಂದಾಜು 1.40 ಲಕ್ಷ ರೂಪಾಯಿ ವೆಚ್ಚದ ರಸ್ತೆ ಕಾಮಗಾರಿ ವೀಕ್ಷಿಸಿ ಸುದ್ದಿಗಾರರೊಂದಿಗೆ ಮಾತನಾಡುತ್ತ ತಿಳಿಸಿದರು. ಈ ರಸ್ತೆ ಕೆಲವು ಕಡೆ ನೀರು ಸಂಗ್ರಹವಾಗುತ್ತಿರುವ ಬಗ್ಗೆ ಕಣ್ಣಾರೆ ನೋಡಿದ್ದೇನೆ. ಇಂತಹ ಸ್ಥಳಗಳಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಲು ತಿಳಿಸಿದರು. ಗುಣಮಟ್ಟದ ರಸ್ತೆ ಮಾಡಲು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಿಗೆ, ಗುತ್ತಿಗೆದಾರರಿಗೆ ತಿಳಿಸಿದರು. ಈ ಗ್ರಾಮದ ದೇವತೆಯಾದ ಮೈಸಮ್ಮಾ ದೇವಿಯ ಜಾತ್ರಾ ಮಹೋತ್ಸವ ಫೆಬ್ರವರಿ 10ರಂದು ನಡೆಯಲಿದೆ. ಈ ಜಾತ್ರೆಯ ಒಳಗಾಗಿ ರಸ್ತೆ ನಿರ್ಮಿಸಲು ಶಾಸಕರು ಸೂಚಿಸಿದರು. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಸುಭಾಷ, ಸಹಾಯಕ ಇಂಜಿನಿಯರ್ ಕಿರಣ, ವಿಶಾಲ ಬಿರಾದಾರ್, ಹುಮನಾಬಾದ ಎಪಿಎಂಸಿ ಮಾಜಿ ಅಧ್ಯಕ್ಷ ಭದ್ರೇಶ್ ಪಾಟೀಲ್, ಪ್ರಮುಖರಾದ ಮಲ್ಲಿಕಾರ್ಜುನ ಪಾಟೀಲ್, ಸುಭಾಷ ಕುಂಬಾರ, ರೇವಣ್ಣಪ್ಪ ಹೂಗಾರ, ಅನೀಲ ಜೋಶಿ, ನರಸಪ್ಪ ನರನಾಳ, ರವಿ ಪವರ್, ಅಮಿತ ತೊಗಲೂರ್, ಪ್ರವೀಣ ರಾಜಾಪುರ್, ರಾಜಗೋಪಾಲ್ ಐನಾಪುರ್, ಸಿರಾಜ್ ಕೋಡಂಬಲ್, ಮಲ್ಲಿಕಾರ್ಜುನ ಮಟ್ಟಿ, ದೇವಿಂದ್ರ ಸೀತಾಳಗೇರಾ, ಮಲ್ಲಪ್ಪ ರಾಂಪುರ, ವಿಜಯಕುಮಾರ್ ಸ್ವಾಮಿ, ಕಿರಣ, ಲಕ್ಷ್ಮಣ ಭೋವಿ, ಚಂದು ನಾರಾಯಣಪೇಟ, ತೈಸಿನ್ ನಾಗುರೆ, ಹುಸೇನ್, ಚಿನ್ನು ಗುತ್ತೆದಾರ್, ಸಚಿನ ಮಠಪತಿ, ಸಾಯಿ ಸಿರ್ಕೆ, ಅಮರರೆಡ್ಡಿ, ರಾಜು ಪೂಜಾರಿ, ಬಸವರಾಜ ಮಠಪತಿ ಸೇರಿದಂತೆ ಇತರರು ಇದ್ದರು.

**ಶಾಲೆಗಳಿಗೆ ಭೇಟಿ**

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ ಶಿಥಿಲಗೊಂಡ ಕೋಣೆಗಳು ವೀಕ್ಷಿಸಿದರು. ಅಪಾಯದಲಿರುವ ಕೋಣೆಗಳನ್ನು ನಿರ್ಮಿಸಲಾಗುವುದು ಎಂದು ತಿಳಿಸಿದರು. ಈ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿಸಲು ವಿಶೇಷ ಗಮನ ಹರಿಸಲು ಮುಖ್ಯಗುರುಗಳಿಗೆ ತಿಳಿಸಿದರು.

ಗ್ರಾಮದ ಹನುಮಾನ ದೇವಸ್ಥಾನಕ್ಕೆ ಭೇಟಿ ನೀಡಿ ದರ್ಶನ ಪಡೆದರು. ದೇವಸ್ಥಾನದ ಪಂಚ ಕಮಿಟಿಯವರು ದೇವಸ್ಥಾನದ ಚಾವಣಿ ಹಾಕಿಸಿಕೊಡಲು ಮನವಿ ಮಾಡಿದರು. ಮುಸ್ಲಿಂ ಸಮುದಾಯದವರು ಪೀರ್ ಸ್ಥಾಪಿಸುವ ಕೋಣೆಗಳ ಚಾವಣಿ ಹಾಕಿಸಿಕೊಡಲು ಮನವಿ ಮಾಡಿದರು.

# ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕೃತಜ್ಞತೆಗಳು



- **ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ:**

ತಾಲ್ಲೂಕಿನ ಮಲ್ಕಾಪೂರವಾಡಿ ಗ್ರಾಮದ ಮಾಣಿಕಪ್ಪ ಅಂಬಣ್ಣಾ ದುಬಲಗುಂಡಿ ಇವರ ಮನೆಯಿಂದ ತುಕರಾಮ ಹಣಮಂತವಾಡೇ ರವರ ಮನೆಯವರೆಗೆ ಸುಮಾರು 4 ವಿದ್ಯುತ್ ಕಂಬಗಳನ್ನು ಮತ್ತು ಬಸಪ್ಪಾ ಅಪ್ಪಣ್ಣಾ ಮನೆಯಿಂದ ರಾಜಪ್ಪಾ ಅರ್ಕಿ ಮನೆಯವರೆಗೆ 3 ವಿದ್ಯುತ್ ಕಂಬಗಳು ಅಳವಡಿಸಿ ವಿದ್ಯುತ್ ಸರಬರಾಜು ಮಾಡಿಕೊಡುವಂತೆ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನರಸಪ್ಪಾ ಬಿ.ಅರ್ಕಿ ರವರು ಮನವಿ ಮಾಡಿಕೊಂಡಾಗ ಅಧಿಕಾರಿಗಳು ಅರ್ಕಿ ರವರ ಮನವಿಗೆ ಸ್ಪಂಧಿಸಿ ವಿದ್ಯುತ್ ಕಂಬಗಳು ಅಳವಡಿಸಲು ಸ್ಥಳದಲ್ಲಿ ಕಂಬಗಳನ್ನು ತಂದು ಇಟ್ಟಿದ್ದಾರೆ. ಅತಿ ಶೀಘ್ರದಲ್ಲಿ ವಿದ್ಯುತ್ ಕಂಬಗಳನ್ನು ಅಳವಡಿಸಲು ತಿಳಿಸಿದರು.

ವಿದ್ಯುತ್ ಕಂಬಗಳನ್ನು ಕಳುಹಿಸಿದಕ್ಕೆ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ನರಸಪ್ಪ ಅರ್ಕಿರವರು ಪತ್ರಿಕಾ ಪ್ರಕಟಣೆಯ ಮೂಲಕ ಕೃತಜ್ಞತೆ ಸಲ್ಲಿಸಿದ್ದಾರೆ.

# ಶವದ ಮೇಲೆ ರಾಜಕೀಯ ಮಾಡಬೇಡಿ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ನಮ್ಮ ಕುಟುಂಬದಲ್ಲಿ ಅವಿವಾಹಿತರು ಮೃತರಾದರೆ ಮೃತದೇಹ ಸುಡುತ್ತಾರೆ, ವಿವಾಹಿತರು ಮೃತರಾದರೆ ಹೂಳುತ್ತಾರೆ, ನಮ್ಮ ಪದ್ಧತಿ ಪ್ರಕಾರ ನಮ್ಮ ಸೋದರನ ಅಂತ್ಯ ಸಂಸ್ಕಾರ ಮಾಡಿದ್ದೇವೆ ಎಂದು ಜ.01ರ ರಾತ್ರಿ ಶೂಟೌಟಿನಲ್ಲಿ ಮೃತನಾದ ರಾಜಶೇಖರ್ ಸೋದರಿ ಉಮಾ ಸ್ಪಷ್ಟನೆ ನೀಡಿದ್ದಾರೆ.

ಬುಧವಾರ ಮಾಧ್ಯಮವೊಂದಕ್ಕೆ ಸಂದರ್ಶನ ನೀಡಿದ ಅವರು ಮಾಜಿ ಸಚಿವ ಬಿ.ಶ್ರೀರಾಮುಲು ಅವರ ಆರೋಪವನ್ನು ತಳ್ಳಿ ಹಾಕಿದರು.

ಅಂತ್ಯಕ್ರಿಯೆ ಬಗ್ಗೆ ಅನುಮಾನಗಳಿವೆ ಎಂದು ಕೇಳಿದ ಮಾಧ್ಯಮದವರಿಗೆ ಉತ್ತರಿಸಿದ ಅವರು, ನಮ್ಮ ಕುಟುಂಬದ ಹಿರಿಯರು ಹೇಳಿದ ಪ್ರಕಾರ ಅಂತ್ಯಕ್ರಿಯೆ ನಡೆಸಿದ್ದೇವೆ, ನಮ್ಮ ಸೋದರನೇ ಹೊರಟು ಹೋಗಿದ್ದಾನೆ, ಅಂತ್ಯಕ್ರಿಯೆ ಬಗ್ಗೆ ಏನು ಮಾತನಾಡುವುದು ಎಂದು ಬೇಸರದಿಂದ ಉತ್ತರಿಸಿದ್ದಾರೆ.

ಹೂಳುವ ಉದ್ದೇಶದಿಂದ ಕುಣಿ ತೆಗೆಸಿದ್ದು ನಿಜ, ಆದರೆ ಹಿರಿಯರು ಹೇಳಿದಂತೆ ನಮ್ಮ ಸೋದರನ ಮೃತದೇಹ ಸುಟ್ಟಿದ್ದೇವೆ ಎಂದು ಉಮಾ ಹೇಳಿದ್ದಾರೆ.

ನಮ್ಮ ಸೋದರ ರಾಜಶೇಖರ ಸತ್ತು ಹೋಗಿದ್ದಾನೆ, ರಾಜಕೀಯಕ್ಕೆ ಬಲಿಯಾಗಿದ್ದಾನೆ, ನಮ್ಮ ನೋವಿನಲ್ಲಿ ನಾವಿರುತ್ತೇವೆ, ಇಂತಹ ಸಂದರ್ಭದಲ್ಲಿ ಶವದ ಮೇಲೆ ರಾಜಕೀಯ ಮಾಡಬಾರದೆಂದು ಮಾಜಿ ಸಚಿವ ಶ್ರೀರಾಮುಲು ಅವರಿಗೆ ಪರೋಕ್ಷವಾಗಿ ತಿರುಗೇಟು ನೀಡಿದರು.

ದಿನ ನಿತ್ಯ ಮಾಧ್ಯಮಗಳಲ್ಲಿ ನಮ್ಮ ಸೋದರನ ಸಾವಿನ ಬಗ್ಗೆ ಸುದ್ದಿ ನೋಡಿ ನಾವು ನೊಂದುಕೊಳ್ಳಬೇಕೆ? ಸುದ್ದಿ ನೋಡಿದಾಗ ನಮಗೆ ಕಿರಿಕಿರಿಯಾಗುತ್ತದೆ, ಇದನ್ನು ಇಲ್ಲಿಗೇ ನಿಲ್ಲಿಸಿ, ದೇವರೆಂಬುವವನು ಇದ್ದರೆ ನಮಗೆ ನ್ಯಾಯ ಕೊಡುತ್ತಾನೆ ಎಂದು ಹೇಳಿದ್ದಾರೆ.

# ಐಜಿಪಿ ಕಟಿಯಾರ್ ಎತ್ತಂಗಡಿ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಪ್ರತ್ಯೇಕ ತನಿಖಾಧಿಕಾರಿ ನೇಮಕ : ವಾಲ್ಮೀಕಿ ಬ್ಯಾನರ್ ಗಲಾಟೆಗೆ ಸಂಬಂಧಿಸಿದಂತೆ ದಾಖಲಾಗಿರುವ ಆರು ಪ್ರಕರಣಗಳಿಗೆ ಪ್ರತ್ಯೇಕವಾಗಿ ಆರು ತನಿಖಾಧಿಕಾರಿಗಳನ್ನು ನೇಮಿಸಿದೆ.

ಮೃತಪಟ್ಟ ರಾಜಶೇಖರ ರೆಡ್ಡಿ ಸಹೋದರ ಬಿ.ಈಶ್ವರ ರೆಡ್ಡಿ ನೀಡಿರುವ ದೂರಿನ ತನಿಖೆಯನ್ನು ಬ್ರೂಸ್ ಪೇಟೆ ಠಾಣೆಯ ಪಿಐ ಮಹಾಂತೇಶ್ ಟಿ, ನಗರ ಶಾಸಕ ನಾರಾ ಭರತ್ ರೆಡ್ಡಿ ಆಪ್ತ ಚಾನಾಳ್ ಶೇಖರ್ ನೀಡಿರುವ ದೂರನ್ನು ಬ್ರೂಸ್ ಪೇಟೆ ಠಾಣೆಯ ಪಿಎಸ್ ಐ ಮಲ್ಲಿಕಾರ್ಜುನ, ಹವಂಬಾವಿ ಟಿ.ಲೋಕೇಶ್ ಮತ್ತು ನಾಗರಾಜ್ ನೀಡಿರುವ ದೂರನ್ನು ಡಿಸಿಆರ್ ಇ ಪೊಲೀಸ್ ಠಾಣೆಯಿಂದ, ಸ್ವಯಂ ಪ್ರೇರಿತವಾಗಿ ನಗರ ಡಿವೈಎಸ್ ಪಿ ಚಂದ್ರಕಾಂತ್ ನಂದಾರೆಡ್ಡಿ ದಾಖಲಿಸಿರುವ ಗಾಂಧಿನಗರ ಠಾಣೆಯ ಪಿಐ ರವಿಚಂದ್ರನ್ ಹಾಗೂ ಗಂಗಾವತಿ ಶಾಸಕ ಗಾಲಿ ಜನಾರ್ದನ ರೆಡ್ಡಿ ನೀಡಿರುವ ದೂರನ್ನು ಸಂಚಾರಿ ಠಾಣೆಯ ಪಿಐ ಅಯ್ಯನಗೌಡ ಪಾಟೀಲ್ ತನಿಖೆ ನಡೆಸಲು ನಿಯೋಜಿಸಲಾಗಿದೆ. ಈವರೆಗೆ ಈ ಘಟನೆ ಸಂಬಂಧಿಸಿ 26 ಜನರನ್ನು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

# ಪದಾಧಿಕಾರಿಗಳ ಆಯ್ಕೆ



• **ಮಲ್ಲಮ್ಮ ನುಡಿ ವಾರ್ತೆ ಬೀದರ್:**

ನಮ್ಮ ಕರ್ನಾಟಕ ಸೇನೆಯ ವಿವಿಧ ಘಟಕಗಳ ಪದಾಧಿಕಾರಿಗಳ ಆಯ್ಕೆ ಇಲ್ಲಿಯ ಸಂಘಟನೆಯ ಜಿಲ್ಲಾ ಘಟಕದ ಕಚೇರಿಯಲ್ಲಿ ಇತ್ತೀಚೆಗೆ ನಡೆಯಿತು.

ಹುಮನಾಬಾದ್ ತಾಲ್ಲೂಕು ಘಟಕದ ಅಧ್ಯಕ್ಷರಾಗಿ ಅಭಿಷೇಕ ರೆಡ್ಡಿ, ಬೀದರ್ ದಕ್ಷಿಣ ಘಟಕದ ಉಪಾಧ್ಯಕ್ಷರಾಗಿ ಮಹಾಂತೇಶ ಕೋಟಿ ಹಾಗೂ ಜನವಾಡ ವಲಯ ಘಟಕದ ಅಧ್ಯಕ್ಷರಾಗಿ ಸಂಗಮೇಶ ಬಿರಾದಾರ ಬಂಪಳ್ಳಿ ಅವರನ್ನು ಆಯ್ಕೆ ಮಾಡಲಾಯಿತು.

ಸೇನೆಯ ಜಿಲ್ಲಾ ಘಟಕದ ಅಧ್ಯಕ್ಷ ಗಣೇಶ ಪಾಟೀಲ ಜ್ಯಾಂತಿ ಅವರು ನೂತನ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ವಿತರಿಸಿದರು.

# ರಸ್ತೆ ಸುರಕ್ಷತಾ: ನಿಮಗಾಗಿ ನಿಮ್ಮವರಿಗಾಗಿ ಪಾಲನೆ ಮಾಡಿ : ಪ್ರಭು ಸ್ವಾಮಿ ಹಿರೇಮಠ

• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ :**




ಜನರು ಎಚ್ಚರಿಕೆಯಿಂದ ವಾಹನ ಚಲಾಯಿಸುವುದರ ಜೊತೆಗೆ ಸರಕಾರದ ನಿಯಮಗಳನ್ನು ಪಾಲನೆ ಮಾಡಬೇಕು. ನಿರ್ಲಕ್ಷ್ಯವಹಿಸಿ ವಾಹನ ಚಲಾಯಿಸುವುದರಿಂದ ಅಪಘಾತಗಳು ಸಂಭವಿಸುತ್ತವೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಕೊಪ್ಪಳ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ ಎಸ್. ದರಗದ ಹೇಳಿದರು.

ಅವರು ಕೊಪ್ಪಳ ನಗರದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪೊಲೀಸ್ ಇಲಾಖೆ, ಪ್ರಾದೇಶಿಕ ಸಾರಿಗೆ ಕಛೇರಿ ಕೊಪ್ಪಳ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ಕೊಪ್ಪಳ ಇವರ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 37ನೇ ರಾಷ್ಟ್ರೀಯ ರಸ್ತೆ ಸುರಕ್ಷಿತಾ ಮಾಸಾಚರಣೆ–2026ರ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದರು. ಕಾನೂನು ಉಲ್ಲಂಘನೆಯಿಂದಲೇ ಬಹಳಷ್ಟು ರಸ್ತೆ ಅಪಘಾತಗಳು ಸಂಭವಿಸುತ್ತವೆ. ಮನೆಯಲ್ಲಿ ಒಬ್ಬರು ಅಥವಾ ಇಬ್ಬರು ದುಡಿಯುವವರು ಇರುತ್ತಾರೆ ಅವರಿಗೆ ಅಪಘಾತಗಳಾದಲ್ಲಿ ಅವರ ಇಡೀ ಕುಟುಂಬ ಸಂಕಷ್ಟಕ್ಕೆ ಸಿಲುಕುತ್ತದೆ. ಕಾನೂನುಗಳು ಇರುವುದು ನಮ್ಮ ಸುರಕ್ಷತೆಗೆ ಹಾಗಾಗಿ ನಾವೆಲ್ಲರೂ ಅವುಗಳನ್ನು ಪಾಲನೆ ಮಾಡಬೇಕು. 18 ವರ್ಷದೊಳಗಿನ ಮಕ್ಕಳಿಗೆ ದ್ವಿ ಚಕ್ರ ಸೇರಿದಂತೆ ಇತರೆ ಯಾವುದೇ ವಾಹನಗಳ ಚಲಾವಣೆಗೆ ಕೊಡಬಾರದು. ಕೆಲವು ಪೋಷಕರು ತಮ್ಮ ಮಕ್ಕಳಿಗೆ ವಾಹನಗಳನ್ನು ಚಲಾಯಿಸಲು ಕೊಟ್ಟು ನಮ್ಮ ಮಗ ಅಥವಾ ಮಗಳು ಚಿಕ್ಕ ವಯಸ್ಸಿನಲ್ಲಿ ವಾಹನ ಚಲಾಯಿಸುತ್ತಾರೆ ಎಂದು ಖುಷಿ ಪಡುತ್ತಾರೆ, ಅದು ಸರಿಯಲ್ಲ ಎಂದು ಹೇಳಿದರು.

# ಡೀನ್ ಆಗಿ ಕನ್ನಡಿಗ ಪ್ರೋ ಲಿಂಗಪ್ಪ ನೇಮಕ



ಹೈದರಾಬಾದ್ : ನೂರು ವರ್ಷಗಳ ಕಾಲ ಇತಿಹಾಸ ಇರುವ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಕನ್ನಡಿಗರಾದ ಕಲಬುರಗಿ ಜಿಲ್ಲೆಯ ಸುರಪುರದ ದೇವರಗೊನಾಳದ ನಿವಾಸಿಯಾಗಿರುವ ಪ್ರೋ ಲಿಂಗಪ್ಪ ಗೊನಾಳ ಅವರ ಸೇವೆಯನ್ನು ಪರಿಗಣಿಸಿದ ಉಪಕುಲಪತಿ ಕನ್ನಡ ವಿಭಾಗದ ಮುಖ್ಯಸ್ಥ ರಾಗಿ ಸೇವೆ ಸಲ್ಲಿಸಿರುವುದನ್ನು ಗುರುತಿಸಿ ಆರ್ಟ್ಸ್ ಕಾಲೇಜನ ಡೀನ್ ಆಗಿ ನೇಮಿಸಿರುವುದು ಕನ್ನಡಿಗರಿಗೆ ಹೆಮ್ಮೆಯ ಸಂಗತಿ. ಇಂದು ವಿಶ್ವವಿದ್ಯಾಲಯದಲ್ಲಿ ಪ್ರೋ ಲಿಂಗಪ್ಪ ಗೊನಾಳ ಅವರಿಗೆ ಹೈದರಾಬಾದ್ ನ ಎಲ್ಲಾ ಕನ್ನಡಿಗರ ಪರವಾಗಿ ಕನ್ನಡಿಗರ ಕಲ್ಯಾಣ ಅಭಿವೃದ್ಧಿ ಸಂಘದ ನಿಯೋಗವನ್ನು ಅವರಿಗೆ ಭೇಟಿಯಾಗಿ ಸನ್ಮಾನಿಸಿ ಗೌರವಿಸಿದರು. ಅಧ್ಯಕ್ಷ ಧರ್ಮೇಂದ್ರ ಪೂಜಾರಿ. ಉಪಾಧ್ಯಕ್ಷ ಬಸವರಾಜ ಹಂಜನಾಳೆ.

ಕೀರ್ತಿ ಕುಮಾರ ಮಾನ್ವಿಕರ. ಪ್ರಭು ಪೂಜಾರಿ. ಅಮರನಾಥ ಹಿರೋಡೆ. ರಾಜಕುಮಾರ ಮನ್ನಳಿ. ಜಗನಾಥ ತೊಂಡಾರೆ. ಮಾರುತಿ ಮೇತ್ರೆ. ಪ್ರೋ ಲಿಂಗಪ್ಪ ಗೋನಾಳ ಅವರಿಗೆ ಕನ್ನಡ ಶ್ಯಾಲು ಹೊದಿಸಿ. ಕನ್ನಡ ಪುಸ್ತಕವನ್ನು ನೀಡಿ ಶುಭ ಹಾರೈಸಿದರು.

# ಹಾವು ಕಡಿತದಿಂದ ಮೃತಪಟ್ಟ ರೈತ ಮಹಿಳೆ ಮನೆಗೆ ಶಾಸಕರು ಭೇಟಿ ವ್ಯಯಕ್ತಿಕ ಧನ ಸಹಾಯ

• **ಮಲ್ಲಮ್ಮ ನುಡಿ ವಾರ್ತೆ ಬೀದರ್:**

ದಕ್ಷಿಣ ಕ್ಷೇತ್ರದ ಬೋರಾಳ ಗ್ರಾಮದ ರೈತ ಮಹಿಳೆ ಶಾರದಾ ಅವರು ತಮ್ಮ ಜಮೀನಿನಲ್ಲಿ ಕೆಲಸ ನಿರ್ವಹಿಸುವ ಸಂದರ್ಭದಲ್ಲಿ ಹಾವು ಕಡಿತದಿಂದ ದುರ್ಘಟನೆಯಲ್ಲಿ ಮೃತಪಟ್ಟ ಮಹಿಳೆ ಮನೆಗೆ ಹಾಗೂ ಬೋರಾಳ ಗ್ರಾಮದ ಸೈಯದ್ ಶಾ ಅವರು ಬಾವಿಯಲ್ಲಿ ಕಾಲು ಜಾರಿ ಬಿದ್ದು ಮೃತಪಟ್ಟಿರುವ ಘಟನೆ ಹಿನ್ನೆಲೆಯಲ್ಲಿ ಇಬ್ಬರು ಮೃತರ ಮನೆಗೆ ಭೇಟಿ ನೀಡಿದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರು ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿ ವ್ಯಯಕ್ತಿಕ ಧನ ಸಹಾಯ ಮಾಡಿ ಸರ್ಕಾರದಿಂದ ಶೀಘ್ರ ಪರಿಹಾರ ಒದಗಿಸುವದಾಗಿ ಭರವಸೆ ನೀಡಿದರು.

ಬಳಿಕ ಮಾತನಾಡಿದ ಶಾಸಕರು

ಮೃತರ ಸುದ್ದಿ ತಿಳಿದು ಅತ್ಯಂತ ದುಃಖಕರವಾಗಿದೆ. ಈ ಹಿನ್ನೆಲೆಯಲ್ಲಿ ಮೃತರ ಮನೆಗೆ ಭೇಟಿ ನೀಡಿ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿ, ವ್ಯಯಕ್ತಿಕ ಧನ ಸಹಾಯವನ್ನು ನೀಡಲಾಯಿತು.

ಈ ವೇಳೆ ಸರ್ಕಾರದಿಂದ ಶೀಘ್ರವಾಗಿ ಪರಿಹಾರ ಮೊತ್ತವನ್ನು ಒದಗಿಸುವುದಾಗಿ ಭರವಸೆ ನೀಡಿದ್ದು,

ಸಂಬಂಧಪಟ್ಟ ಅಧಿಕಾರಿಗಳಿಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದೇನೆ. ಈ ದುಃಖದ ಸಂದರ್ಭದಲ್ಲಿ ಕುಟುಂಬದೊಂದಿಗೆ ನಾವೆಲ್ಲರೂ ಇದ್ದೇವೆ ಎಂದು ಭರವಸೆ ನೀಡಿ ಮೃತ ಶಾರದಾ ಹಾಗೂ ಸೈಯದ್ ಅವರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಕುಟುಂಬದವರಿಗೆ ಈ ದುಃಖವನ್ನು ಭರಿಸುವ ಶಕ್ತಿ ದೊರಕಲಿ ಎಂದು ಪ್ರಾರ್ಥಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ಸಂತೋಷ್ ರೆಡ್ಡಿ, ಸಂತೋಷ್ ಭೂಸನೂರ, ಶನ್ಮುಕಪ್ಪ ಖಾಶೆಂಪುರ, ಮಹೇಶ್ ಸಾಗರ್, ಗಣಪತಿ ಎಲಜೇರಿ, ಮಂಜುನಾಥ ಬಂಮಗೊಂಡ, ದಸರಥ ಬಿರಾದಾರ, ಸಂತೋಷ ಕಾಟೆ, ನಾಗಶೆಟ್ಟಿ ಬಿರಾದಾರ, ಸಾಮಸುಂದರ ರೇಕುಳಗಿ, ಸುಜಾತಾ ಮಂದಾ, ಗಣೇಶ್ ಗಾರಂಪಳ್ಳಿ ಮತ್ತಿತರರು ಹಾಜರಿದ್ದರು.

# ಅರ್ಜಿ ಅವಧಿ ವಿಸ್ತರಣೆ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

2025–26ನೇ ಸಾಲಿನ ಬಿ.ಎಡ್ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹ ಧನ ನೀಡಲು ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಅವಧಿ ವಿಸ್ತರಿಸಿದೆ ಎಂದು ಯಾದಗಿರಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಭಾಗ್ಯಶ್ರೀ ಕುಂಬಾರ ಅವರು ತಿಳಿಸಿದ್ದಾರೆ.

ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹ ಧನ ನೀಡಲು ಷರತ್ತುಗೊಳಪಟ್ಟು, ಅರ್ಹತೆ ವಿದ್ಯಾರ್ಥಿಗಳು ಸೇವಾಸಿಂಧು ಪೋರ್ಟಲ್ sevasindhu.karnataka.gov.in ನಲ್ಲಿ 2026ರ ಜನವರಿ 15ರ ವರೆಗೆ ಅರ್ಜಿ ಅವಧಿ ವಿಸ್ತರಿಸಿದೆ. ವಿಶೇಷ ಪ್ರೋತ್ಸಾಹಧನಕ್ಕಾಗಿ ಅರ್ಜಿಸಲ್ಲಿಸ ಬಯಸುವ ವಿದ್ಯಾರ್ಥಿಗಳು ಅರ್ಹತೆ, ವಿಧಾನ ಹಾಗೂ ಇನ್ನಿತರ ಸೂಚನೆಗಳು ಮಾಹಿತಿಗಾಗಿ ಇಲಾಖೆಯ ವೆಬ್‌ಸೈಟ್ www.dom.karnataka.gov.in ನಿಂದ ಪಡೆದುಕೊಳ್ಳಬೇಕು. ಹೆಚ್ಚಿನ ಮಹಿತಿಗಾಗಿ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕೊಠಡಿ ಸಂಖ್ಯೆ ಸಿ–7, ಸಿ ಬ್ಲಾಕ್ ಮೊದಲನೇ ಮಹಡಿ, ಜಿಲ್ಲಾಡಳಿತ ಭವನ (ಮಿನಿ ವಿಧಾನಸೌಧ), ಯಾದಗಿರಿ 585 202, ದೂ.ಸಂ.08473–253235, ಇಲಾಖೆ ಸಹಾಯವಾಣಿ ಸಂ.8277799990ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಗ್ರ ಗೋಣದಲ್ಲಿ ಅವಲಹಬ್ಬ



ಅಂಕೋಲಾ : ತಾಲೂಕಿನ ಅಗ್ರಗೋಣದ ಶ್ರೀ ಶಾಂತಿಕಾ ಪರಮೇಶ್ವರಿ ದೇವಿಯ ಅವಲಹಬ್ಬವು ಜ.13 ರಂದು ವಿಜೃಂಭಣೆಯಿಂದ ನಡೆಯಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಶ್ರೀದೇವಿಯ ಕೃಪೆಗೆ ಪಾತ್ರರಾಗುವಂತೆ ದೇವಸ್ಥಾನದ ಮೋಕ್ತೆಸರರಾದ ಡಿ.ಎನ್.ನಾಯಕ ತಿಳಿಸಿದ್ದಾರೆ.

# ಶಾಲೆಗೆ ಬಣ್ಣದ ಮೆರಗು ನೀಡಿದ ಕೃತಗ್ಯತಾ ಟ್ರಸ್ಟ ಬೆಂಗಳೂರು




• **ಮಲ್ಮನ ನುಡಿ ವಾರ್ತೆ ಮಸ್ಕಿ :**

ಪಟ್ಟಣದ ಸಮೀಪವಿರುವ ಮೆದಿಕಿನಾಳ ಸಿ ಆರ್ ಸಿ ವ್ಯಾಪ್ತಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಾಗರಬೆಂಚಿ ಶಾಲೆಗೆ ಬೆಂಗಳೂರಿನ ಕೃತಗ್ಯತಾ ಟ್ರಸ್ಟನವರು ಹೊಸದಾಗಿ ಸುಣ್ಣ ಬಣ್ಣ ಮಾಡಿಸಿ ಸರ್ಕಾರಿ ಹಿರಿಯ ಪ್ರಾಥಮಿಕ ನಾಗರಬೆಂಚಿ ಶಾಲೆಗೆ ಹೊಸ ಲುಕ್ ನೀಡಿದ್ದಾರೆ.

ಪ್ರಸ್ತುತ ಶಾಲೆಯಲ್ಲಿ 1 ನೇ ತರಗತಿಯಿಂದ ರಿಂದ 7 ನೇ ತರಗತಿಯವರೆಗೆ 156 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದು ಶಾಲೆಯ 09 ಕೋಣೆಗಳು ಹಾಗೂ ಕಾಂಪೌಂಡ್ ಸಹಿತ ಶಾಲೆ ಸುಣ್ಣ ಬಣ್ಣ ಕಾಣದೆ ಬಹಳ ವರ್ಷಗಳಾಗಿದ್ದವು. ಆದರೆ ಇಂದು ಮಕ್ಕಳ ಬಣ್ಣ ಬಣ್ಣದ ಕನಸುಗಳಿಗೆ ಹೊಚ್ಚ ಹೊಸ ಬಣ್ಣಗಳೊಂದಿಗೆ ಹೊಸ ರೂಪ ಪಡೆದಿದ್ದು ಇದಕ್ಕೆ ಕಾರಣ ಕೃತಗ್ಯತಾ ಟ್ರಸ್ಟ್.

ಶಾಲೆಯು ಸುಣ್ಣ ಬಣ್ಣ ಕಾಣದೇ ಬಹಳ ವರ್ಷಗಳಾಗಿದ್ದವು, ಜನತಾಪುರ ಶಾಲೆಯ ಶಿಕ್ಷಕ ಮೌನೇಶ್ ಎಂ ಇವರ ಸಹೋಯೋಗದೊಂದಿಗೆ ಕೃತಗ್ಯತಾ ಟ್ರಸ್ಟ್ ಬೆಂಗಳೂರು ಇವರಿಗೆ ಮನವಿ ಮಾಡಲಾಗಿ ಶಾಲೆಯು ಹೊಸ ಹೊಸ ಬಣ್ಣಗಳೊಂದಿಗೆ ಶಾಲೆಯು ಅತ್ಯಾಕರ್ಷಕವಾಗಿ ಕಾಣುತ್ತಿದ್ದು ಮಕ್ಕಳು ತುಂಬಾ ಖುಷಿಯಿಂದ ಶಾಲೆಗೆ ಬರುತ್ತಿದ್ದಾರೆ ಎಂದು ಪ್ರಭಾರಿ ಮುಖ್ಯ ಶಿಕ್ಷಕ ಮಲ್ಲಿನಾಥ ಹಿರೇಮಠ್ ತಿಳಿಸಿದರು

ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಮತಿ ಸುಜಾತ ಹುನೂರರವರು ಕೃತಗ್ಯತಾ ಟ್ರಸ್ಟ್ & ಇದರ ಸ್ಥಾಪಕಾರದ ಶ್ರೀಮತಿ ಅರುಣಾ ದಿವಾಕರ್ ಇವರ ಈ ಸಾಮಾಜಿಕ, ಶೈಕ್ಷಣಿಕ ಕಾರ್ಯಕ್ಕೆ ಇಲಾಖೆ ಪರವಾಗಿ ಅಭಿನಂದನೆಗಳನ್ನು ತಿಳಿಸಿದರು.

ಈ ಸಂದರ್ಭದಲ್ಲಿ ಸದರಿ ಶಾಲೆಯ ಶಿಕ್ಷಕಕ ರಾದ ಆನಂದ್, ಅತಿಥಿ ಶಿಕ್ಷಕ – ಶಿಕ್ಷಕಿ ದುರುಗೇಶ್, ಮಹಾಂತೇಶ್, ಶ್ರೀಮತಿ ಭಾಗ್ಯಶ್ರೀ, ಶ್ರೀಮತಿ ವಿಜಯಲಕ್ಷ್ಮಿ ಉಪಸ್ಥಿತರಿದ್ದು ಶಾಲೆಯ ಹೊಸ ಬಣ್ಣ ಪಡೆದಿದ್ದಕ್ಕೆ ಗ್ರಾಮಸ್ಥರು, ಮಕ್ಕಳು ಹಾಗೂ ಎಸ್ ಡಿ ಎಂ ಸಿ ರವರು ಹರ್ಷ ವ್ಯಕ್ತಪಡಿಸಿದರು.

# ವಿಶ್ವಕರ್ಮ ನಿಗಮಕ್ಕೆ 50 ಕೋಟಿ ಅನುದಾನ ಬಿಡುಗಡೆ



• **ಮಲ್ಲಮ್ಮ ನುಡಿ ವಾರ್ತೆ ಹುಣಸೂರು:**

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರಕಾರ ವಿಶ್ವಕರ್ಮ ನಿಗಮಕ್ಕೆ 50 ಕೋಟಿ ಅನುದಾನ ಬಿಡುಗಡೆ ಮಾಡಿದೆ. ಸಮುದಾಯದ ಮಂದಿಯ ಅಬಿವೃದ್ಧಿ, ಮಕ್ಕಳ ಶಿಕ್ಷಣಕ್ಕೆ ಅಗತ್ಯ ನೆರವು ಸಿಗಲಿದೆ. ಮಹಿಳಾ ಸಂಘಗಳಿಗೆ ಐದು ಲಕ್ಷದವರೆಗೆ ಬಡ್ಡಿರಹಿತ ಸಾಲ ಸೌಲಭ್ಯ ಸಿಗಲಿದ್ದು, ಎಂದು ಮಾಜಿ ಶಾಸಕ ಎಚ್ ಪಿ ಮಂಜುನಾಥ್ ತಿಳಿಸಿದ್ದಾರೆ

ನಗರದ ಅಂಬೇಡ್ಕರ್ ಭವನವದಲ್ಲಿ ತಾಲೂಕು ವಿಶ್ವಕರ್ಮ ಸಮಾಜದ ವತಿಯಿಂದ ಆಯೋಜಿಸಿದ್ದ ಅಮರ ಶಿಲ್ಪಿಜ–ಕಣಚಾರಿ ಸಂಸ್ಮರಣೋತ್ಸವ, ತಾಲೂಕು ವಿಶ್ವಕರ್ಮ ಅಭಿವೃದ್ಧಿ ಸಹಕಾರ ಸಂಘ, ಯುವಬ್ರಿಗೇಡ್, ಮಹಿಳಾಘಟಕ ಉದ್ಘಾಟನೆ, ಪ್ರತಿಭಾಪುರಸ್ಕಾರ ಮಾಜಿಶಾಸಕ ಎಚ್ ಪಿ ಮಂಜುನಾಥ್ ಅಭಿನವ ಚಕಣಾಚಾರಿ ಶಿಲ್ಪಿ ಡಾಕ್ಟರ್ ಅರುಣ್ ಯೋಗಿರಾಜ್ ಸಾಧನೆಯನ್ನು ಸಂತೋಷ. ವ್ಯಕ್ತಪಡಿಸಿ ವೈಯಕ್ತಿಕವಾಗಿ ಬಹುಮಾನ ನೀಡಿ ಹೃದಯ ಪೂರ್ವಕ. ಗೌರವಿಸಿ ಅವರಿಗೆ ಸನ್ಮಾನಿಸಲಾಯಿತು. ಉದ್ಘಾಟಿಸಿ ನಂತರ ಕಾರ್ಯಕ್ರಮ ಮಾತನಾಡಿದ ಅವರು ಈಬಗ್ಗೆ ಯುವ ಬ್ರಿಗೇಡ್, ಮಹಿಳಾ ಘಟಕಗಳು ಮುಂಚೂಣಿಯಲ್ಲಿ ನಿಂತು ಸಮುದಾಯಕ್ಕೆ ಸೂಕ್ತ ಮಾಹಿತಿ ನೀಡಿ ಅರ್ಹರಿಗೆ ಸೌಲಭ್ಯ ಕೊಡಿಸಬೇಕೆಂದರು. ಬಹುದಿನಗಳ ಬೇಡಿಕೆಯಂತೆ ನಗರದಲ್ಲಿ ವಿಶ್ವಕರ್ಮ ಸಮುದಾಯ ಭವನ ನಿರ್ಮಿಸಿಕೊಡಲು ಸಂಪೂರ್ಣ ಸಹಕಾರ ನೀಡುವೆನೆಂದು ಭರವಸೆ ಇತ್ತರು ಮಾಡಿದರು.

ವಿಶ್ವಕರ್ಮ ಸಮುದಾಯದ ಬಗ್ಗೆ ನನ್ನ ಅಂತರಾತ್ಮದಲ್ಲಿ ನಂಬಿಕೆ, ವಿಶ್ವಾಸ, ಅಪಾರ ಪ್ರೀತಿ ಇದ್ದು, ಎಂಥ ಸಂದರ್ಭದಲ್ಲೂ ನಿಮ್ಮ ಜೊತೆಗಿರುವೆ. ದೇಶ ಅಭಿವೃದ್ದಿಯಲ್ಲಿ ವಿಶ್ವಕರ್ಮ ಸಮುದಾಯದ ಕೊಡುಗೆ ಅಪರಿಮಿತವಾದದ್ದು, ಇದೀಗ ಎಲ್ಲ ಕ್ಷೇತ್ರಗಳಲ್ಲೂ ಕೃತಕ ಬುದ್ದಿಮತ್ತೆ(ಎಐ) ಕಾಲಿರಿಸಿದ್ದು, ಆಧುನಿಕ ತಾಂತ್ರಿಕತೆಯೊಂದಿಗೆ ಅಪ್‌ಡೇಟ್ ಆಗಿರಿ, ಮುಖ್ಯವಾಗಿ ಸಂಘಟಿ–ತರಾಗಿ, ಸರಕಾರದ ಸೌಲಭ್ಯವನ್ನು ಬಳಸಿಕೊಳ್ಳಿರೆಂದರು.

ರಾಜ್ಯ ವಿಶ್ವಕರ್ಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಪಿ.ಸುಜ್ಞಾನಮೂರ್ತಿ ಮಾತನಾಡಿ ಸಾವಿರಾರು ವರ್ಷಗಳ ಹಿಂದೆ ಯಾವುದೇ ತಾಂತ್ರಿಕತೆ ಇಲ್ಲದ ಸಂದರ್ಭದಲ್ಲಿ ಅಮರಶಿಲ್ಪಿ ಜಕಣಾಚಾರಿಯವರು ದೈವತತ್ವ ಹೊಂದಿದ್ದರಿಂದಲೇ ಸಾವಿರಾರು ದೇವಾಲಯಗಳಿಗೆ ಶಿಲ್ಪಿಯಾಗಿದ್ದಾರೆ. ಇವರ ಹೆಸರಲ್ಲಿ ವಿಶ್ವವಿದ್ಯಾನಿಲಯ ಸ್ಥಾಪಿಸಬೇಕು. ಪಠ್ಯಕ್ರಮದಲ್ಲಿ ಅವರ ತಂತ್ರಜ್ಞಾನವನ್ನು ಪರಿಚಯಿಸಬೇಕು. ಕೆಪಿಸಿಸಿ ಒಬಿಸಿ ಘಟಕದ ರಾಜ್ಯ ಉಪಾಧ್ಯಕ್ಷೆ ಡಾ.ಪವಿತ್ರಾ ಆಚಾರ್ ಮಾತನಾಡಿ ಸಮುದಾಯದ ಮಹಿಳೆಯರು ಸಂಘಟಿತರಾಗಬೇಕು. ಸಾಮಾಜಿಕ, ರಾಜಕೀಯವಾಗಿ ತೊಡಗಿಸಿಕೊಂಡು ಆರ್ಥಿಕವಾಗಿ ಸಬಲರಾಗಬೇಕೆಂದರು.

ಅಕ್ಷರದಾಸೋಹ ಸಹಾಯಕ ನಿರ್ದೇಶಕ ಡಾ.ಪ್ರಶಾಂತ್ ಮಾತನಾಡಿ ವಿಶ್ವಕರ್ಮರು ಅಪ್ರತಿಮಕಲಾವಿದರು, ಸೃಜನಶೀಲತೆ, ಕ್ರಿಯಾಶೀಲತೆ, ಸಹಿಷ್ಣುತೆ, ಸಾಮರಸ್ಯಕ್ಕೆ ಹೆಸರುವಾಸಿಯಾಗಿದ್ದು, ಕೌಶಲ್ಯ ನಿಪುಣರಾದ ನಮ್ಮಲ್ಲಿ ವಿಶ್ವಮಾನವ ಗುಣ ಅಡಗಿದೆ. ಆದರೆ ಸಂಘಟನೆ ಅತ್ಯವಶ್ಯವಾಗಿದೆ ಎಂದರು.

ತಾಲೂಕು ಅಧ್ಯಕ್ಷ ಕೆ.ಎನ್.ಕುಮಾರ್ ಮಾತನಾಡಿ ಸಮುದಾಯದ ಸಲಹೆಯಂತೆ ಸಂಘಟನೆ ನಡೆದಿದ್ದು, ಹಿರಿಯರ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದು, ಸಮುದಾಯದ ಚಟುವಟಿಕೆಗಾಗಿ ವಿಶ್ವಕರ್ಮ ಭವನ ನಿರ್ಮಿಸಲು ಸಹಕಾರ ನೀಡುವಂತೆ ಮನವಿ ಮಾಡಿದರು.

ಅರೆಮಾದಳ್ಳಿ ಮಠದ ತಾಲೂಕಿನ ವಿಶ್ವಕರ್ಮ ಸಮಾಜ ವತಿಯಿಂದ ಹಮ್ಮಿಕೊಂಡಿದ್ದು ಅವರು ಶಿಲ್ಪಿ ಚಕಣಾಚಾರಿ ಸಂಭ್ರಮೋತ್ಸವ ಸಂದರ್ಭದಲ್ಲಿ ಶಿಲ್ಪಿ ಅರುಣ್ ಯೋಗಿರಾಜ್ ಅವರಿಗೆ ಅಭಿನವ ಚಕಣಾಚಾರಿ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು ಹಾಗೂ ಮಾಜಿ ಶ್ರೀಶಿವಸುಜ್ಞಾನಮೂರ್ತಿಸ್ವಾಮೀಜಿ ಆಶೀರ್ವಚನ ನೀಡಿದರು. ಶಿಲ್ಪಿ ಡಾ.ಅರುಣ್‌ಯೋಗಿರಾಜ್, ನಿಗಮದ ಮಾಜಿ ಅಧ್ಯಕ್ಷ ನಂದಕುಮಾರ್, ರಾಜ್ಯ ವಿಶ್ವಕರ್ಮ ಸಮಾಜದ ಉಪಾಧ್ಯಕ್ಷ ಕೆ.ಎಸ್.ರೇವಣ್ಣ, ಜಿಲ್ಲಾಧ್ಯಕ್ಷ ಹುಚ್ಚಪ್ಪಾಚಾರ್, ಹನೂರು ಶ್ರೀನಿವಾಸಚಾರ್, ಯುವ ಬ್ರಿಗೇಡ್‌ನ ಅಧ್ಯಕ್ಷ ಶ್ರೀನಿವಾಸ್, ಮಹಿಳಾ ಘಟಕದ ಅಧ್ಯಕ್ಷೆ ಯಶೋಧ ತಾಂಡವಮೂರ್ತಿ, ಕಾರ್ಯಾಧ್ಯಕ್ಷೆ ಜಯಲಕ್ಷಿ ಮಾತನಾಡಿದರು. ಹುಡಾ ಅಧ್ಯಕ್ಷ ಎಚ್.ಪಿ.ಅಮರ್‌ನಾಥ್, ಮುಖಂಡರಾದ ಚಂದ್ರಚಾರ್, ಡಾ.ಹೇಮಂತ್ ಕುಮಾರ್, ಡಾ.ಭರತ್‌ಕುಮಾರ್, ಗಂಗಾಧರಚಾರ್, ಚಂದ್ರಶೇಖರ್ ಸೇರಿದಂತೆ ಸಾವಿರಾರು ಮಂದಿ ಭಾಗವಹಿಸಿದ್ದರು.

# ನೂತನ ಎಸ್ಪಿ ಡಾ.ಸುಮನ್



• **ಮಲ್ಮನ ನುಡಿ ವಾರ್ತೆ ಬಳ್ಳಾರಿ:**

ಬ್ಯಾನರ್ ಗಲಾಟೆ ಪ್ರಕರಣ–ಕ್ಕೆ ಸಂಬಂಧಿಸಿ ಅಧಿಕಾರ ವಹಿಸಿಕೊಂಡು ಕೆಲವೇ ಘಂಟೆಗಳಲ್ಲಿ ಅಮಾನತುಗೊಂಡಿದ್ದ ಪವನ್ ನೆಜ್ಜೂರ್ ಅವರ ಬೆನ್ನಲ್ಲೇ ಇದೀಗ ಬಳ್ಳಾರಿ ವಲಯದ ಐಜಿಪಿ ವರ್ತಿಕಾ ಕಟಿಯಾರ್ ಅವರನ್ನು ಸರ್ಕಾರ ಎತ್ತಂಗಡಿ ಮಾಡಿ ಆದೇಶ ಹೊರಡಿಸಿದೆ. ತೆರವಾದ ಸ್ಥಾನಕ್ಕೆ ಹರ್ಷ ಅವರನ್ನು ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದ್ದು, ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಎಸ್ಪಿ ಪವನ್ ನೆಜ್ಜೂರ್ ಅವರು ಘಟನೆಗೆ ಸಂಬಂಧಿಸಿ ಅಮಾನತ್ತುಗೊಂಡಿದ್ದು, ಚಿತ್ರದುರ್ಗ ಎಸ್ಪಿ ರಂಜಿತ್ ಕುಮಾರ್ ಬಂಡಾರು ಅವರನ್ನು ಪ್ರಕರಣಕ್ಕೆ ಸಂಬಂಧಿಸಿ ಪ್ರಭಾರಿಯನ್ನಾಗಿ ಸರ್ಕಾರ ನೇಮಕ ಮಾಡಲಾಗಿತ್ತು. ಮತ್ತೆ ಸರ್ಕಾರ ನೂತನ ಎಸ್ಪಿಯನ್ನಾಗಿ ಡಾ.ಸುಮನ್ ಡಿ.ಪನ್ನೇಕರ್ ಅವರನ್ನು ನೇಮಿಸಿ ಆದೇಶ ಹೊರಡಿಸಿದೆ.




ಹುಣಸೂರು ನಗರದ ಶಬ್ಬೀರ್ ನಗರ ಜಾಮಿಯಾ ಶಾದಿ ಮಹಲ್ ನಲ್ಲಿ ಭಾರತದ ಸಂಕಲ್ಪ ನ್ಯಾಯಕ್ಕಾಗಿ ಹೋರಾಟ ಎಸ್ ಡಿ ಪಿ ಐ ಪಕ್ಷದ ಸಮಾವೇಶವನ್ನು ಆಯೋಜಿಸಲಾಗಿತ್ತು ಕಾರ್ಯಕ್ರಮದಲ್ಲಿ. ಎಸ್ ಡಿ ಪಿ ಐ ರಾಜ್ಯ ಸಮಿತಿ ಸದಸ್ಯರಾದ ಅಬ್ರಾರ್ ಅಹ್ಮದ್ . ವೇದಿಕೆಯಲ್ಲಿ. ನಂತರ ಮಾತನಾಡಿ ಸಾರ್ವಜನಿಕರಲ್ಲಿ ಮತದಾನ ಹಕ್ಕಿನ ಬಗ್ಗೆ ಅರಿವು ಮೂಡಿಸಿದರು ಪ್ರಕ್ರಿಯವಾಗಿ ಅನಾಹುತದಿಂದ ಮತದಾರರು ರಕ್ಷಣೆ ಪಡೆಯಲು ಏನು ಮಾಡಬೇಕು ಎಂಬುದು ಅರಿವಿ ಮೂಡಿಸಿದ್ದಾರೆ ಈ ಸಂದರ್ಭದಲ್ಲಿ ಎಸ್ ಡಿಪಿಐ ಕಾರ್ಯಕರ್ತರಾದ. ಮೊಹಮ್ಮದ್ ಶಫಿ ಸದ್ದಾಮ್ ಹುಸೇನ್ ಅಕ್ಬರ್ ವಸೀಮ್ ಮೊಹಮ್ಮದ್. ತಬ್ರೆಸ್ ಮಾಜಿ.ನಗರ ಸಭಾ ಸದಸ್ ಯೂನುಸ್. ಸಮೀನಾ ಭಾನು ಇಮ್ರಾನ್ ಹಾಗೂ ಕಾರ್ಯಕರ್ತರು ಇನ್ನಿತರ ಹಾಜರಿದ್ದರು

# ಮೂಲಭೂತ ಸೌಲಭ್ಯಗಳಿಗೆ ಆಗ್ರಹಿಸಿ ಪ್ರತಿಭಟನೆ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಮೂಲಭೂತ ಸೌಕರ್ಯಗಳನ್ನು ಒದಗಿಸುವಂತೆ ಒತ್ತಾಯಿಸಿ ಜಿಲ್ಲೆಯ ಮುಧೋಳ ತಾಲೂಕಿನ ಲೋಕಾಪುರ ಪಟ್ಟಣದಲ್ಲಿ ಬುಧವಾರ ಸಾರ್ವಜನಿಕರು ಪ್ರತಿಭಟನೆ ನಡೆಸಿದರು.

ಲೋಕಾಪೂರ ಅಭಿವೃದ್ಧಿ ಯುವ ಸಮಿತಿ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಪಟ್ಟಣದ ವಿವಿಧ ವಾರ್ಡಗಳ ಸಾರ್ವಜನಿಕರು ಪಾಲ್ಗೊಂಡು ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ಆಗುತ್ತಿರುವ ವಿಳಂಬ ಹಾಗೂ ಪಟ್ಟಣ ಪಂಚಾಯತಿ ಅಧಿಕಾರಿಗಳು, ಸಿಬ್ಬಂದಿಗಳ ದುರ್ವರ್ತನೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಘೋಷಣೆ ಕೂಗಿದರು.

ಬಸವೇಶ್ವರ ವೃತ್ತದಲ್ಲಿ ಪ್ರತಿಭಟನೆ ನಡೆಸಿದ ಸಾರ್ವಜನಿಕರು, ದೀರ್ಘ ಕಾಲದಿಂದಲೂ ಲೋಕಾಪೂರ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ಸಿಗುತ್ತಿಲ್ಲ ಎಂದು ದೂರಿದರಲ್ಲದೇ ಶಾಶ್ವತ ಪರಿಹಾರ ಕಲ್ಪಿಸುವಂತೆ ಆಗ್ರಹಿಸಿದರು.

ಕೆಲ ಹೊತ್ತಿನ ನಂತರ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಅವರಿಗೆ ಲೋಕಾಪುರ ಅಭಿವೃದ್ಧಿ ಯುವ ಸಮಿತಿಯ ನೇತೃತ್ವದಲ್ಲಿ ಮನವಿ ಸಲ್ಲಿಸಲಾಯಿತು. ಪೇ ಅಂಡ್ ಯೂಸ್ ಮಾದರಿಯಲ್ಲಿ ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಮಾಡಬೇಕು. ಪಟ್ಟಣದಾದ್ಯಂತ ಚರಂಡಿ ವ್ಯವಸ್ಥೆ ಕಲ್ಪಿಸಬೇಕು. ಮುಖ್ಯ ರಸ್ತೆಗಳ ಡಿವೈಡರ್‌ಗಳ ಮೇಲೆ ಬೀದಿ ದೀಪಗಳ ಅಳವಡಿಕೆ ಮಾಡಬೇಕು. ಕೆಲಸದ ವಿಳಂಬ ತಡೆಯುವದು, ಲಂಚಮುಕ್ತ ಆಡಳಿತ ವ್ಯವಸ್ಥೆ ಕಲ್ಪಿಸಬೇಕು ಎಂಬುದು ಸೇರಿ ಹಲವಾರು ಬೇಡಿಕೆಗಳನ್ನು ಮನವಿ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಮನೆ ಉತಾರ (ಇ-ಖಾತಾ) ಸಮಸ್ಯೆ ತ್ವರಿತವಾಗಿ ಪರಿಹರಿಸಬೇಕು. ವಿದ್ಯುತ್ ಚಿತಾಗಾರ ಮತ್ತು ಮುಕ್ತಿ ವಾಹನ ವ್ಯವಸ್ಥೆ ಕಲ್ಪಿಸಬೇಕು. ಸ್ಮಶಾನಗಳ ಅಭಿವೃದ್ಧಿಗೆ ಒತ್ತು ನೀಡಬೇಕು. ಹಳ್ಳಗಳಲ್ಲಿ ಮಾಂಸ ಹಾಗೂ ತ್ಯಾಜ್ಯ ಹಾಕುವುದನ್ನು ತಡೆಯಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಸ್ಥಗಿತಗೊಂಡ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಪುನರಾರಂಭಿಸಬೇಕು, ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಿ ಅಗತ್ಯ ಸೌಲಭ್ಯ ಒದಗಿಸಬೇಕು ಎಂಬೆಲ್ಲ ಬೇಡಿಕೆಗಳನ್ನು ಸಚಿವರ ಮುಂದಿಟ್ಟರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪುರ, ಮುಧೋಳದ ಮಾದರಿಯಲ್ಲಿ ಲೋಕಾಪುರದಲ್ಲಿಯೂ 24*7 ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗುವುದು. ಈಗಾಗಲೇ ನಾಲ್ಕು ಕಡೆ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲಾಗಿದೆ ಎಂದು ಹೇಳಿದರು.

ಲಂಚಮುಕ್ತ ವ್ಯವಸ್ಥೆಗಾಗಿ ಆನ್‌ಲೈನ್ ಪ್ರಕ್ರಿಯೆ ಜಾರಿಯಲ್ಲಿದ್ದು, ಹೊಸ ವ್ಯವಸ್ಥೆಗೆ ಜನರು ಹೊಂದಿಕೊಳ್ಳಬೇಕಿದೆ. ಪಟ್ಟಣ ಪಂಚಾಯತಿಯಲ್ಲಿ ಸಿಬ್ಬಂದಿ ಕೊರತೆಯನ್ನು ಶೀಘ್ರ ಬಗೆಹರಿಸಲಾಗುವುದು ಎಂದು ಸಚಿವರು ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ಲೋಕಾಪುರ ಅಭಿವೃದ್ಧಿ ಯುವ ಸಮಿತಿಯ ವಿಕ್ರಮ್ ನಂದಯ್ಯಗೋಳ, ಮಲ್ಲಪ್ಪ ಅಂಗಡಿ, ನೀಲೇಶ ಬನ್ನೂರು, ವೆಂಕಟೇಶ ತುಳಸಿಗೇರಿ, ಭೀಮಸಿ ಅವರಾದಿ, ಶ್ರೀಕಾಂತ ಅಮೋಜಿ, ಸದಾಶಿವ ನಾವಿ, ಮಹೇಶ ಗಾಣಗೇರ, ಮಾರುತಿ ಜೋಶಿ, ಅನೀಲ ಹಂಚಾಟೆ, ಕುಮಾರ ಗಸ್ತಿ, ರೇಖಾ ನರಹಟ್ಟಿ, ಶೋಭಾ ಶಿರಹಟ್ಟಿ, ರಾಧಿಕಾ ಕರೆಯನ್ನವರ, ಶೋಭಾ ನರೇಂದ್ರ, ಭಾರತಿ ಹಿರೇಮಠ, ವಾಣಿ ಮನ್ನೂರು, ತುಂಗಮ್ಮಾ ಪಾಟೀಲ, ಮಾದೇವಿ ಮುತ್ತಿನಮಠ, ಸಂಜನಾ ಚವ್ಹಾಣ, ಸವಿತಾ ವಾಸನದ ಇತರರು ಇದ್ದರು.

# ಅಕ್ಕ ಪಡೆ ಗಸ್ತು ವಾಹನಕ್ಕೆ ಸಚಿವ ತಿಮ್ಮಾಪೂರ ಚಾಲನೆ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**



ದೌರ್ಜನ್ಯ, ಹಿಂಸೆ, ಶೋಷಣೆಗಳನ್ನು ಎದುರಿಸುತ್ತಿರುವ ಮಹಿಳೆಯರು ಮತ್ತು ಮಕ್ಕಳಿಗೆ ಸಕಾಲಕ ಸಹಾಯ ಹಸ್ತ ಮತ್ತು ರಕ್ಷಣೆ ಒದಗಿಸುವ ಅಕ್ಕ ಪಡೆ ಯೋಜನೆಯ ಗಸ್ತು ವಾಹನಕ್ಕೆ ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಬುಧವಾರ ಚಾಲನೆ ನೀಡಿದರು.

ವಿದ್ಯಾಗಿರಿ ಬಿಟಿಡಿಎ ಸರಕಾರಿ ಮಾದರಿ ಪ್ರಾಥಮಿಕ ಶಾಲಾ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಪೊಲೀಸ್, ಮಹಿಳಾ ಮತ್ತು ಮಕ್ಕಳ ಅಬಿವೃದ್ಧಿ ಇಲಾಖೆ ಹಾಗೂ ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಅಕ್ಕ ಪಡೆ ಯೋಜನೆಗೆ ಚಾಲನೆ ನೀಡಿ ಮಾತನಾಡಿದ ಅವರು, ರಾಜ್ಯದ ಬೀದರ ಜಿಲ್ಲೆಯಲ್ಲಿ ಗೃಹ ಇಲಾಖೆಯಿಂದ ರಚಿಸಲ್ಪಟ್ಟ ಅಕ್ಕ ಪಡೆ ಯಶಸ್ಸನ್ನು ಪರಿಗಣಿಸಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ರಾಜ್ಯ ಮಹಿಳಾ ಗೃಹ ರಕ್ಷಕರನ್ನೊಳಗೊಂಡ ಅಕ್ಕ ಪಡೆಯನ್ನು ರಚಿಸಿ, ರಾಜ್ಯಾದ್ಯಂತ ವಿಸ್ತರಣೆಗೊಳಿಸಲಾಗಿದೆ ಎಂದರು.

ಅಕ್ಕ ಪಡೆ ಸಮಾಜಕ್ಕೆ ಸ್ಪಂದಿಸುವ ಸುರಕ್ಷತಾ ಘಟಕವಾಗಿ ಮತ್ತು ಶೈಕ್ಷಣಿಕ ಶಕ್ತಿಯಾಗಿ ಕಾರ್ಯನಿರ್ವಹಿಸಲಿದೆ. ಸಾರ್ವಜನಿಕ ಮತ್ತು ಖಾಸಗಿ ಸ್ಥಳಗಳಲ್ಲಿ ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆ, ಘನತೆ ಮತ್ತು ಸಬಲೀಕರಣವನ್ನು ಉತ್ತೇಜಿಸಲಿದೆ.

ತರಬೇತಿ ಪಡೆದ ಅಕ್ಕ ಪಡೆ ತಂಡಗಳು ಸೂಕ್ಷ್ಮ ಪ್ರದೇಶಗಳಲ್ಲಿ ಪೆಟ್ರೋಲಿಂಗ್ ಮತ್ತು ಮಹಿಳೆಯರು, ಮಕ್ಕಳನ್ನೊಳಗೊಂಡ ಸಂಕಷ್ಟದ ಕರೆಗಳಿಗೆ ತ್ವರಿತವಾಗಿ ಸ್ಪಂದಿಸುತ್ತದೆ. ಲಿಂಗ ಸಮಾನತೆ, ಮಕ್ಕಳ ರಕ್ಷಣೆ, ಕಾನೂನು ಹಕ್ಕುಗಳು, ಸಹಾಯವಾಣಿಗಳು, ಮತ್ತು ವರದಿ ಮಾಡುವ ಕಾರ್ಯವಿಧಾನಗಳಂತಹ ವಿಷಯಗಳ ಬಗ್ಗೆ ಶಾಲಾ, ಕಾಲೇಜುಗಳಲ್ಲಿ ಜಾಗೃತಿ ನಡೆಸಲಿದೆ ಎಂದು ಸಚಿವರು ಹೇಳಿದರು.

ಜಿಲ್ಲಾ ಮಟ್ಟದಲ್ಲಿ ಮಹಿಳಾ ಗೃಹ ರಕ್ಷಕರನ್ನೊಳಗೊಂಡ ಅಕ್ಕ ಪಡೆ ತಂಡವು ಸ್ಥಳೀಯ ಪೊಲೀಸರ ಸಹಯೋಗದೊಂದಿಗೆ ಬೆಳಿಗ್ಗೆ 7 ರಿಂದ ಮಧ್ಯಾಹ್ನ 2 ಮತ್ತು ಮಧ್ಯಾಹ್ನ 2 ರಿಂದ ರಾತ್ರಿ 8 ಗಂಟೆವರೆಗೆ ಎರಡು ಪಾಳೆಯದಲ್ಲಿ ಕೆಲಸ ನಿರ್ವಹಿಸಲಿದ್ದಾರೆ. ತಂಡದ ಸದಸ್ಯರು ಶಾಲೆ, ಕಾಲೇಜು, ಬಾಲಕಿಯರ, ಮಹಿಳಾ ಹಾಸ್ಟೆಲ್, ಬಸ್, ರೇಲ್ವೆ ನಿಲ್ದಾಣಗಳು, ಸ್ಥಳೀಯ ಮಾರುಕಟ್ಟೆ, ಪ್ರೇಕ್ಷಣಿಯ ಸ್ಥಳಗಳು, ಪವಿತ್ರ ಸ್ಥಳಗಳು ಮತ್ತು ಇತರ ಸೂಕ್ಷ್ಮ ಸ್ಥಳಗಳಲ್ಲಿ ಗಸ್ತು ವಾಹನ ಸಂಚಾರ ಮಾಡಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಸಂಗಪ್ಪ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಸಿ.ಮನ್ನಿಕೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಕೆ.ಪ್ರಭಾಕರ, ಪೊಲೀಸ್ ಇಲಾಖೆಯ ಸಧಾಶಿವ, ಹೋಮಗಾರ್ಡ ಜಿಲ್ಲಾ ಸಮಾಧೀಷ್ಟರಾದ ಎಚ್.ಆರ್.ಕಂಬಳಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿ ಡಾ.ವೀಣಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಯೋಜನೆ ನಿರ್ದೇಶಕ ಮಂಜುನಾಥ ಪರಸನ್ನವರ, ಸಿಡಿಪಿಓ ರಮೇಶ ಸೂಳಿಕೇರಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಯುನಿಯನ್ ಘಟಕಕ್ಕೆ ಪದಾಧಿಕಾರಿಗಳ ಆಯ್ಕೆ



• **ಮಲ್ಲಮ್ಮ ನುಡಿ: ಹುಣಸಗಿ:**

ಪಟ್ಟಣದ ಪ್ರವಾಸಿ ಮಂದಿರದಲ್ಲಿ ರಾಜ್ಯಾಧ್ಯಕ್ಷರ ಆದೇಶ ಮೇರೆಗೆ ನಡೆದ ತಾಲೂಕು ಘಟಕಕ್ಕೆ ಪದಾಧಿಕಾರಿಗಳ ಆಯ್ಕೆಸಭೆಯಲ್ಲಿ ಕರ್ನಾಟಕ ಸ್ಟೇಟ್ ಕನಸ್ಟ್ರಕ್ಷನ್ ಸೆಂಟ್ರಲ್ ಯುನಿಯನ್ ಘಟಕದ ತಾಲೂಕು ಅಧ್ಯಕ್ಷರಾಗಿ ಮಹ್ಮದಯಾಸೀನ್ ಬಾಗೇವಾಡಿ ಅವರನ್ನು ನೇಮಿಸಲಾಯಿತು. ಈ ವೇಳೆ ತಾಲೂಕು ಪ್ರಧಾನ ಕಾರ್ಯದರ್ಶಿಗೆ ಆಯ್ಕೆಗೊಂಡ ನಾಗಯ್ಯ.ಬಿ.ವಡ್ಡರ ಮಾತನಾಡಿ, ಕರ್ನಾಟಕ ಸ್ಟೇಟ್ ಕನಸ್ಟ್ರಕ್ಷನ್ ಸೆಂಟ್ರಲ್ ಯುನಿಯನ್‌ಗೆ ಹೊಸದಾಗಿ ಪದಾಧಿಕಾರಿಗಳ ಆಯ್ಕೆಗೆ ರಾಜ್ಯಾಧ್ಯಕ್ಷರ ಸಮ್ಮತಿಸಿದ್ದು, ನೂತನವಾಗಿ ನೇಮಕಗೊಂಡವರು ಸಂಘಟನೆ ಬಲವರ್ಧನೆಗಾಗಿ ಹಾಗೂ ಕಟ್ಟಡ ಕಾರ್ಮಿಕರ ಸೌಲತ್ತುಗಳು ಪಾರದರ್ಶಕವಾಗಿಸುವ ನಿಟ್ಟಿನಲ್ಲಿ ಕಾರ್ಯನ್ಮೋಖವಾಗಬೇಕು ಎಂದು ತಿಳಿಸಿದರು. ಪದಾಧಿಕಾರಿಗಳ ನೇಮಕ:

ರುದ್ರಪ್ಪ ಬೂದಿಹಾಳ (ಗೌರವಾಧ್ಯಕ್ಷ), ಮುತ್ತು ಇಸ್ಲಾಂಪುರ (ಉಪಾಧ್ಯಕ್ಷ), ಮಾರುತಿ ಡಂಗಿ, ರಾಜು ಗಾಧಿ (ಸಹ.ಕಾರ್ಯದರ್ಶಿ), ದವಲಸಾಬ (ಜಂಟಿ ಕಾರ್ಯದರ್ಶಿ),

ಬಂದೇನವಾಜ ಮಾಳನೂರ (ಯುವ ಕಾರ್ಯದರ್ಶಿ), ಮುಬಾರಬಾನೂ ಅಗ್ನಿ

(ಮಹಿಳಾ) ಇವರನ್ನು ತಾಲೂಕು ಘಟಕಕ್ಕೆ ನೇಮಿಸಿ ಗೌರವಿಸಲಾಯಿತು.

# ಸಾಧನೆ ಯೋಜನೆ: ಪ್ರೋತ್ಸಾಹ ಧನಕ್ಕೆ ಅರ್ಜಿ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಕ್ರೀಡೆಗಳಲ್ಲಿ ಭಾಗವಹಿಸಿದ ಜಿಲ್ಲೆಯ ಕ್ರೀಡಾಪಟುಗಳು ಸಾಧನೆ ಯೋಜನೆಯಡಿ ಪ್ರೋತ್ಸಾಹ ಧನಕ್ಕಾಗಿ ಜನವರಿ 31 ವರೆಗೆ ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ.

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಾಧನೆ ಯೋಜನೆಯನ್ನು ಡಿಬಿಡಿ ನೇರ ನಗದು ವರ್ಗಾವಣೆ ತಂತ್ರಾಂಶದಡಿ ಸೇವಾಸಿಂಧು ಆನ್‌ಲೈನ್ ಪೋರ್ಟಲ್ ಮೂಲಕ ಲೈವ್ ಮಾಡಲಾಗಿದೆ. ಗ್ರಾಮ ಒನ್, ಕರ್ನಾಟಕ ಒನ್, ಬೆಂಗಳೂರು ಒನ್, ಸಿಟಿಜೆನ್ಸ್ ಪೋರ್ಟಲ್ ಆನ್‌ಲೈನ್ ವೇದಿಕೆ ತಂತ್ರಾಂಶದಡಿ ಅಳವಡಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಸಂಯೋಜಕ ಪ್ರತಿಭಾ ಮಾದರ (9606151149), ಎಂ.ಆರ್.ಡಬ್ಲ್ಯೂ ಬಾಗಲಕೋಟೆ ಪಾಂಡು ಲಮಾಣಿ (9538714441), ಬಾದಾಮಿ, ಗುಳೇದಗುಡ್ಡ ತಾಲೂಕಿನ ಎಂ.ಬಿ.ಪಾಟೀಲ (9481135932), ಹುನಗುಂದ, ಇಳಕಲ್ಲ ತಾಲೂಕಿನ ಎಸ್.ಟಿ.ಬೀರಗೊಂಡರ (8970565869), ಬೀಳಗಿ ತಾಲೂಕಿನ ಕಾವ್ಯಾ ಛಬ್ಬಿ (7676980002), ಮುಧೋಳ ತಾಲೂಕಿನ ಎಂ.ಬಿ.ಮುದ್ನೂರ (9008173773), ಜಮಖಂಡಿ ತಾಲೂಕಿನ ಎನ್.ಬಿ.ಹನಗಂಡಿ (9900417764), ರಬಕವಿ-ಬನಹಟ್ಟಿ ತಾಲೂಕಿನ ಶಬ್ಬಿರ ಪಕಾಲಿ (9739936205) ಇವರನ್ನು ಸಂಪರ್ಕಿಸುವಂತೆ ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

# ಕಾರ್ಮಿಕರ ಸುರಕ್ಷತೆಗೆ ಸರ್ಕಾರದ ಯಾವಾಗಲೂ ಸಿದ್ಧ: ಈಶ್ವರ್ ಖಂಡ್ರೆ



• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:**

ಪಟ್ಟಣದ ಪುರಭವನದಲ್ಲಿ ಕಾರ್ಮಿಕ ಇಲಾಖೆ ವತಿಯಿಂದ ತಾಲೂಕಿನ ಕಟ್ಟಡ ಕಾರ್ಮಿಕರಿಗಾಗಿ ಆಯೋಜಿಸಲಾದ ಉಚಿತ ಆರೋಗ್ಯ ತಪಾಸಣಾ ಶಿಬಿರಕ್ಕೆ ಚಾಲನೆಯನ್ನು ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ್ ಖಂಡ್ರೆ ನೀಡಿದರು.

ಶಿಬಿರದ ಮೂಲಕ ಕಟ್ಟಡ ಕಾರ್ಮಿಕರಿಗೆ ಅಗತ್ಯವಿರುವ ಆರೋಗ್ಯ ತಪಾಸಣೆಗಳನ್ನು ನಡೆಸಲಾಗಿದ್ದು, ಅವರ ಕೆಲಸದ ಸ್ಥಳದ ಸುರಕ್ಷತೆಯನ್ನು ಗಮನದಲ್ಲಿಟ್ಟು ಸುಮಾರು 735 ವಿವಿಧ ರೀತಿಯ ಸುರಕ್ಷಾ ಕಿಟ್‌ಗಳನ್ನು ವಿತರಿಸಲಾಯಿತು.

ರಾಜ್ಯದ ಅಭಿವೃದ್ಧಿಗೆ ತಮ್ಮ ಶ್ರಮವನ್ನು ಅರ್ಪಿಸುವ ಕಟ್ಟಡ ಕಾರ್ಮಿಕರ ಆರೋಗ್ಯ ಮತ್ತು ಸುರಕ್ಷತೆ ನಮ್ಮ ಸರ್ಕಾರದ ಮೊದಲ ಆದ್ಯತೆ. ಶ್ರಮಜೀವಿಗಳು ಯಾವುದೇ ಕಾರಣಕ್ಕೂ ಅಪಘಾತಗಳಿಗೆ ಒಳಗಾಗಬಾರದು ಎಂಬ ಉದ್ದೇಶದಿಂದ, ಅವರ ಕಲ್ಯಾಣ, ಸಾಮಾಜಿಕ ಭದ್ರತೆ ಹಾಗೂ ಗೌರವಯುತ ಜೀವನಕ್ಕಾಗಿ ಸರ್ಕಾರ ಹಲವು ಜನಪರ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುತ್ತಿದೆ ಎಂದರು.

ಕಾರ್ಮಿಕ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ನಮ್ಮ ಉತ್ಪನ್ನ ವಸ್ತು ನಾವು ಖರೀದಿಸಿ ಬಳಸಿದರೆ ನಮ್ಮ ಸಂಪತ್ತು ನಮ್ಮಲ್ಲೇ ಉಳಿಯುತ್ತದೆ

• **ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ :**



ನಾವು ಉತ್ಪನ್ನ ಮಾಡಿದ ವಸ್ತು ಗಳನ್ನು ನಾವು ಖರೀದಿಸಿ ಬಳಸಿದರೆ ನಮ್ಮ ಸಂಪತ್ತು ನಮ್ಮಲ್ಲೇ ಉಳಿಯುತ್ತದೆ ಎಂದು ಬ್ರಿಗೇಡಿಯರ್ ರವಿ ಮುನಿಸ್ವಾಮಿ ಹೇಳಿದರು.

ಪಟ್ಟಣದ ಪಂಡಿತ ಶಿವಚಂದ್ರ ನೆಲ್ಲಗಿ ವೃತ್ತದಲ್ಲಿ ಬೆಂಗಳೂರು ಪರಿಪೂರ್ಣ ಸನಾತನ ಚಾರಿಟಬಲ್ ಟ್ರಸ್ಟ್ ನಿಂದ ರಾಜ್ಯದಾದ್ಯಂತ ಮಾಜಿ ಸೈನಿಕರಿಂದ ನಡೆದ ಸ್ವದೇಶಿ ಬಳಸಿ-ದೇಶ ಬೆಳೆಸಿ ಜಾಗೃತಿ ಮೂಡಿಸಲು ಆಗಮಿಸಿದ ಸೈಕಲ್ ಜಾಥಾಕ್ಕೆ ಅದ್ಧೂರಿ ಸ್ವಾಗತ ಸಮಾರಂಭದಲ್ಲಿ ಮಾತನಾಡಿದ ಅವರು.

ಅನ್ನ ಕೊಡುವ ರೈತರು, ದೇಶ ಹಾಗೂ ಜನರ ರಕ್ಷಣೆಯಲ್ಲಿ ಸೈನಿಕರ ಪಾತ್ರ ಅತ್ಯಂತ ಹಿರಿದಾಗಿದ್ದು. ದೇಶದಲ್ಲಿ ಉತ್ಪನ್ನವಾಗುವ ಸ್ವದೇಶಿ ಪದಾರ್ಥ ಬಳಸುವ ಮುಖ್ಯ ದುಡಿಯುವ ಕೈಗಳಿಗೆ ಉದ್ಯೋಗ ದೊರೆತು,

ಮರುಬಳಕೆಗೆ ಅನುಕೂಲವಾಗುತ್ತದೆ. ದೇಶದ ಆರ್ಥಿಕ ವ್ಯವಸ್ಥೆ ಸುಧಾರಣೆ ಆಗಲಿದೆ ಎಂದರು.

ಮೈಸೂರು, ತಮಿಳುನಾಡು, ತೆಲಂಗಾಣ ಸೇರಿದಂತೆ ಮಾಜಿ, ಸೈನಿಕರು, ಉದ್ಯೋಗಪತಿ ಸೇರಿದಂತೆ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಹಿರಿಯ ನಾಗರಿಕರೂ ತಂಡದಲ್ಲಿದ್ದು, ಡಿ.13 ರಂದು ಬೆಂಗಳೂರಿನಿಂದ ಆರಂಭಿಸಿ ಪ್ರತಿನಿತ್ಯ 100 ರಿಂದ 140 ಕಿ.ಮೀದಂತೆ ಮೊದಲ ಹತದಲ್ಲಿ 2200 ಕಿ.ಮೀ ಸೈಕಲ್ ಮೂಲಕ ಬಂದಿದೆವೆ.

ಐಟಿ ಸಿಸಕೋ ವ್ಯವಸ್ಥಾಪಕಿ ಶಾಂತಾ ಮಾತನಾಡಿ. ಪಾಶ್ಚಾತ್ಯ ಅನುಕರಣೆಯನ್ನು

ಬಿಟ್ಟು ಭಾರತೀಯ ಸಂಸ್ಕೃತಿಯನ್ನು ಬೆಳೆಸಬೇಕಿದೆ. ಕುಟುಂಬದ ಒಗ್ಗಟ್ಟು ಕಾಯ್ದುಕೊಳ್ಳುವ

ಮೂಲಕ ದೇಶದ ಏಕತೆ ಸಾಧಿಸಬಹುದು. ಇಂದಿನ ಪೀಳಿಗೆ ಇದನ್ನು ಅರ್ಥ ಮಾಡಿಕೊಳ್ಳಬೇಕಿದೆ ಎಂದರು.

ಲಕ್ಷ್ಮಿ ವೆಂಕಟೇಶ್ವರ ಶಾಲಾ ಕಾರ್ಯದರ್ಶಿ ಶಿವಶಂಕರ ತರನಳ್ಳಿ ಮಾತನಾಡಿ. ರಾಜ್ಯಾದ್ಯಂತ ಬ್ರಿಗೇಡಿಯರ್ ರವಿ ಮುನಿಸ್ವಾಮಿ ನೇತೃತ್ವದಲ್ಲಿ ಸೈಕಲ್ ಮೂಲಕ ಸಂಚರಿಸಿ ಸ್ವದೇಶಿ ಉತ್ಪನ್ನಗಳ ಬಳಕೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಹಾಗೂ ದೇಶಾಭಿಮಾನ, ತಾಯ್ನೆಲದ ಭಾಷಾಭಿಮಾನ ಮತ್ತು ಐಕ್ಯತೆ ಮೂಡಿಸಲು ಚಳಿ ಲೆಕ್ಕಿಸದೆ ಸೈಕಲ್ ಜಾಥ ಹೊರಟಿರುವುದು ಎಲ್ಲರಲ್ಲೂ ಅಭಿಮಾನ ಮೂಡಿಸುತ್ತದೆ. ಎಂದು ಹೇಳಿದರು.

ಬ್ರಿಗೇಡಿಯರ ರವಿ ಮುನಿಸ್ವಾಮಿ, ಕರ್ನಲ್ ಕಂದಸ್ವಾಮಿ, ನೀಲಕಠ, ರೇಶ ನರಸಯ್ಯ, ಡಾ. ಜೆ.ಕೆ ಪಿಳ್ಳೆ, ಶ್ರೀಬಾಬು, ಸಹ್ರನಾಮ ಅಯ್ಯರ್, ಹೇಮಂತ

ಜಾಧವ, ಸಾಗರ, ಐಟಿ ಸಿಸಕೋ ವ್ಯವಸ್ಥಾಪಕ ಶ್ರೀಮತಿ ಶಾಂತಾ, ರಮೇಶ ಜಗತಾಪ, ಸ್ಥಾನಿಯರಾದ ನಿಜಲಿಂಗಪ್ಪ ಜಕ್ಕಾ, ಮಲ್ಲಿಕಾರ್ಜುನ ಭಂಗೂರೆ, ಶರಣಪ್ಪ ಹುಲಸೂರೆ, ಸಾಗರ ಬಿರಾದಾರ,

ಶೈಲೇಶ ಚವ್ಹಾಣ, ಅರುಣ ಗೌಳಿ, ಚಿನ್ನುರೆಡ್ಡಿ, ಗಾಯಕರಾದ ರಾಜಕುಮಾರ ಹೂಗಾರ, ನಾಟಕ ಕಂಪನಿ ಮಾಲೀಕರಾದ ಉಪೇಂದ್ರ, ಸುರೇಶ ಮಲ್ಲುರೆಡ್ಡಿ ಕೇಶುಲ್ ಹುಮನಾಬಾದ ಸೇರಿದಂತೆ ಅನೇಕರಿದ್ದರು.

# ಭಕ್ತರಿಗೆ ಚರಂಡಿಯ ಗಬ್ಬುವಾಸನೆಯ ಕೊಡುಗೆ

**ನಾಗರಾಜ ಮಂಜಗುಣಿ**

**ಮಲ್ಲಮ್ಮ ನುಡಿ ವಾರ್ತೆ ಗೋಕರ್ಣ :**



ವಿಶ್ವಪ್ರಸಿದ್ಧ ಮಹಾಬಲನ ಆತ್ಮಲಿಂಗವಿರುವ ಗೋಕರ್ಣದಲ್ಲಿ ಚರಂಡಿ ವ್ಯವಸ್ಥೆ ಅವ್ಯವಸ್ಥೆಯಿಂದಾಗಿ ಗಬ್ಬು ನಾರುತ್ತಿದೆ. ಇದು ಸಮುದ್ರಮಟ್ಟಕ್ಕಿಂತ ತಗ್ಗಿನಲ್ಲಿ ಇರುವುದರಿಂದ ನೂರಾರು ಮನೆಗಳ ಹೊಲಸು ನೀರು ಬಿಟ್ಟಿದ್ದರೂ ಕೂಡ ಇಲ್ಲಿಯ ನೀರು ಹಾಗೇ ಉಳಿದಕೊಳ್ಳುತ್ತದೆ. ಜತೆಗೆ ಪ್ಲಾಸ್ಟಿಕ್ ತ್ಯಾಜ್ಯವು ರಾಶಿ ರಾಶಿಯಾಗಿ ಕಂಡುಬರುತ್ತಿದೆ.

ಮಳೆಗಾಲದ ಸಮಯದಲ್ಲಿ ನೀರಿನ ಮಟ್ಟ ಏರಿಕೆಯಾಗಿರುವುದರಿಂದ ಚರಂಡಿಯಲ್ಲಿರುವ ಎಲ್ಲ ತ್ಯಾಜ್ಯಗಳನ್ನು ಸಮುದ್ರಕ್ಕೆ ಹಾಕುತ್ತದೆ. ನಂತರ ಮಳೆಗಾಲ ಮುಗಿಯುವವರೆಗೂ ಸ್ವಲ್ಪಮಟ್ಟಿಗೆ ದೇವಸ್ಥಾನಕ್ಕೆ ಬರುವ ಭಕ್ತರು ನಿರಾಳವಾಗಿ ಯಾವುದೇ ಗಬ್ಬು ವಾಸನೆಯಿಲ್ಲದೇ ಸಂಚರಿಸುವಂತಾಗಿತ್ತು. ಮತ್ತೆ ಮಳೆಗಾಲ ಮುಗಿದ ನಂತರ ಸಮುದ್ರದಲ್ಲಿ ಉಸುಕಿನ ದಿಬ್ಬ ಬೀಳುವುದರಿಂದ ಚರಂಡಿಯ ನೀರು ನಿಂತಲ್ಲಿಯೇ ನಿಲ್ಲುವಂತಾಗಿದೆ.

ಇದು ನಿನ್ನೆ ಮೊನ್ನೆಯ ಸಮಸ್ಯೆಯಲ್ಲ. ಅನಾದಿಕಾಲದಿಂದಲೂ ಹೀಗೆ ನಡೆದುಕೊಂಡು ಬರುತ್ತಿದ್ದರೂ ಆಡಳಿತ ವ್ಯವಸ್ಥೆಯ ವೈಫಲ್ಯದಿಂದಾಗಿ ಗೋಕರ್ಣ ಇನ್ನು ನಲುಗುವಂತಾಗಿದೆ. ಬೇರೆ ಬೇರೆ ಭಾಗಗಳಲ್ಲಿ ಪೌರಾಣಿಕ ಹಿನ್ನೆಲೆಯಲ್ಲಿ ದೇವಾಲಯಗಳಿಗೆ ತೆರಳಿದರೆ ಶಿಸ್ತುಬದ್ಧ ವ್ಯವಸ್ಥೆ ಕಂಡುಬರುತ್ತದೆ. ಆದರೆ ಗೋಕರ್ಣದ ಈ ಚರಂಡಿ ವ್ಯವಸ್ಥೆ ಮಾತ್ರ ಇದುವರೆಗೂ ವ್ಯವಸ್ಥಿತವನ್ನಾಗಿಸಲು ಸಾಧ್ಯವಾಗಿಲ್ಲ. ಮಳೆಗಾಲದಲ್ಲಿ ನೀರು ಹೆಚ್ಚಾದರೆ ಶ್ರೀ ಮಹಾಬಲೇಶ್ವರನ ಆತ್ಮಲಿಂಗಕ್ಕೂ ನೀರು ನುಗ್ಗುತ್ತದೆ. ಮಹಾಬಲನೇ ಇಂತಹ ಸಂಕಷ್ಟವನ್ನು ಅನುಭವಿಸಿದರೂ ಕೂಡ ಇಲ್ಲಿಯ ಚರಂಡಿ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಪರ್ಯಾಯವಾಗಿ ಹಾಗೆ ಇದನ್ನು ಅಭಿವೃದ್ಧಿಪಡಿಸಬಹುದು ಎನ್ನುವದು ಆಡಳಿತ ವ್ಯವಸ್ಥೆ ಗಮನಹರಿಸಿದಂತೆ ಕಂಡುಬರುತ್ತಿಲ್ಲ. ಗೋಕರ್ಣಕ್ಕೆ ಅಭಿವೃದ್ಧಿ ಪ್ರಾಧಿಕಾರ ರಚಿಸಿ ಇಲ್ಲಿಯ ಅವ್ಯವಸ್ಥೆಗಳನ್ನು ಸರಿಪಡಿಸಿ ಇಲ್ಲಿಗೆ ಬರುವ ಭಕ್ತರಿಗೆ ಮೂಲಭೂತ ಸೌಲಭ್ಯ ಸರಿಯಾಗಿ ಒದಗಿಸಿದರೆ ಪ್ರವಾಸಿಗರ ಸಂಖ್ಯೆ ದುಪ್ಪಟ್ಟಾಗಲಿದೆ.

ಈ ಭಾಗದ ಶಾಸಕ ದಿನಕರ ಶೆಟ್ಟಿ, ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರಿಗೂ ಕೂಡ ಇಲ್ಲಿಯ ಅಭಿವೃದ್ಧಿಯ ಕುರಿತು ಮನವಿ ಸಲ್ಲಿಸಲಾಗಿದೆ. ಆದರೂ ಕೂಡ ಇಲ್ಲಿಯ ಅವ್ಯವಸ್ಥೆಯ ಬಗ್ಗೆ ಜಾಗೃತರಾದಂತೆ ಕಂಡುಬಂದಂತಿಲ್ಲ. ಎಲ್ಲ ರಾಜಕಾರಣಿಗಳು ತಮ್ಮ ತಮ್ಮ ಹುದ್ದೆಗಳನ್ನು ಬಲಪಡಿಸಿಕೊಳ್ಳಲು ಮಾತ್ರ ಚಟಪಡಿಸುತ್ತಿದ್ದಾರೆಯೇ ಹೊರತು ಅಭಿವೃದ್ಧಿಯ ಬಗ್ಗೆ ಚಿಂತನೆ ನಡೆಸುತ್ತಿಲ್ಲ ಎಂಬ ಆರೋಪವು ಕೇಳಿಬರುತ್ತಿದೆ. ಮುಖ್ಯ ಕಡಲತೀರದಲ್ಲಿ ಹಾಗೂ ರಾಮಮಂದಿರಕ್ಕೆ ತೆರಳುವ ರಸ್ತೆ ಸೇರಿದಂತೆ ವಿವಿದೆಡೆ ಪ್ಲಾಸ್ಟಿಕ್ ತ್ಯಾಜ್ಯಗಳು ಪ್ರತಿನಿತ್ಯ ಕಂಡುಬರುತ್ತದೆ. ಆದರೆ ಕಸವಿಲೇವಾರಿ ಕೂಡ ಸರಿಯಾಗಿ ಮಾಡುತ್ತಿಲ್ಲ. ಇದರಿಂದಾಗಿ ಜಾನುವಾರುಗಳು ಪ್ಲಾಸ್ಟಿಕ್ ತ್ಯಾಜ್ಯಗಳನ್ನು ತಿನ್ನುತ್ತಿರುವುದು ಕಂಡುಬರುತ್ತಿದೆ. ಇದರಿಂದಾಗಿ ಜಾನುವಾರುಗಳು ಪ್ಲಾಸ್ಟಿಕ್ ಸೇವನೆಯಿಂದಾಗಿ ಸಾವನ್ನಪ್ಪುತ್ತಿರುವುದು ಕಂಡುಬರುತ್ತಿದೆ. ಇದನ್ನು ಸರಿಪಡಿಸುವವರು ಯಾರು ಎನ್ನುವುದೇ ಯಕ್ಷಪ್ರಶ್ನೆಯಾಗಿದೆ.

# ಕನ್ನಡಕ್ಕೆ ಹೆಚ್ಚಿನ ಮನ್ನಣೆ ನೀಡಬೇಕು: ತೊರ್ಕೆ

• **ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ :**

ಇತ್ತೀಚಿಗೆ ಮಾತೃಭಾಷೆಗಿಂತ ಅನ್ಯ ಭಾಷೆಗಳ ಮೇಲೆ ಅವಲಂಬನೆ ಅಧಿಕವಾಗಿದ್ದು, ಇಂತಹ ವ್ಯಾಮೋಹ ಕಡಿಮೆಮಾಡಿ ಮಾತೃಭಾಷೆಯಾದ ಕನ್ನಡಕ್ಕೆ ಹೆಚ್ಚಿನ ಮಾನ್ಯತೆ ನೀಡಬೇಕು. ವಿದ್ಯಾರ್ಥಿಗಳು ಕೂಡ ಇದನ್ನು ಅಳವಡಿಸಿಕೊಂಡು ಭಾಷೆಗೆ ಗೌರವ ನೀಡುವ ಮೂಲಕ ತಾವು ಕೂಡ ಕನ್ನಡ ಗಟ್ಟಿಗೊಳಿಸಲು ಕಾರಣೀಕರ್ತರಾಗುತ್ತೀರಿ ಎಂದು ಸಾಹಿತಿ ನಾಗೇಂದ್ರ ನಾಯಕ ತೊರ್ಕೆ ಹೇಳಿದರು.

ಅಂಕೋಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಕೆ.ಎಲ್.ಇ ಶೇಷಗಿರಿ ಪಿಕಳೆ ಶಿಕ್ಷಣ ಮಹಾವಿದ್ಯಾಲಯದ ಆಶ್ರಯದಲ್ಲಿ ಬುಧವಾರ ಕಾಲೇಜಿನ ಸಭಾಭವನದಲ್ಲಿ ಹಮ್ಮಿಕೊಂಡ 'ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಕನ್ನಡ, ಬದಲಾಗುತ್ತಿರುವ ಶೈಕ್ಷಣಿಕ ಪರಿಸರ' ವಿಷಯದ ಮೇಲೆ ಆಯೋಜಿಸಿದ ಪ್ರಬಂಧ ಸ್ಪರ್ಧೆಯ ವಿಜೇತರಿಗೆ ಪತ್ನಿ ದಿ.ಮಾಣು ನಾಯಕ ಸ್ಮರಣಾರ್ಥ ಪ್ರಾಯೋಜಿಸಿದ ಬಹುಮಾನ ವಿತರಿಸಿ ಅವರು ಮಾತನಾಡಿದರು.

ಅಧ್ಯಕ್ಷತೆ ವಹಿಸಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಗೋಪಾಲಕೃಷ್ಣ ನಾಯಕ ಮಾತನಾಡಿ, ಶಿಕ್ಷಣ ನೀತಿ ಬದಲಾವಣೆ ಆಗುತ್ತಿದೆ. ಆದರೂ ಕೂಡ ನಾವು ನಮ್ಮ ಮಾತೃಭಾಷೆಗೆ ಹೆಚ್ಚಿನ ಮನ್ನಣೆ ನೀಡಬೇಕು. ಎಲ್ಲ ಭಾಷೆಗಳು ಕೂಡ ಶ್ರೇಷ್ಠವಾದದ್ದೇ. ಆದರೆ ಹೃದಯ ಭಾಷೆ ಕನ್ನಡವಾಗಿರಲಿ ಎಂದರು.

## ಎಸ್.ಡಿ.ಪಿ.ಐ ಪಕ್ಷದ ಸಮಾವೇಶ




**ಹುಣಸೂರು:** ನಗರದ ಶಬ್ಬೀರ್ ನಗರ ಜಾಮಿಯಾ ಶಾದಿ ಮಹಲ್ ನಲ್ಲಿ ಭಾರತದ ಸಂಕಲ್ಪ ನ್ಯಾಯಕ್ಕಾಗಿ ಹೋರಾಟ ಎಸ್ ಡಿ ಪಿ ಐ ಪಕ್ಷದ ಸಮಾವೇಶವನ್ನು ಆಯೋಜಿಸಲಾಗಿತ್ತು ಕಾರ್ಯಕ್ರಮದಲ್ಲಿ. ಎಸ್ ಡಿ ಪಿ ಐ ರಾಜ್ಯ ಸಮಿತಿ ಸದಸ್ಯರಾದ ಅಬ್ರಾರ್ ಅಹ್ಮದ್ . ವೇದಿಕೆಯಲ್ಲಿ. ನಂತರ ಮಾತನಾಡಿ ಸಾರ್ವಜನಿಕರಲ್ಲಿ ಮತದಾನ ಹಕ್ಕಿನ ಬಗ್ಗೆ ಅರಿವು ಮೂಡಿಸಿದರು ಪ್ರಕ್ರಿಯವಾಗಿ ಅನಾಹುತದಿಂದ ಮತದಾರರು ರಕ್ಷಣೆ ಪಡೆಯಲು ಏನು ಮಾಡಬೇಕು ಎಂಬುದು ಅರಿವಿ ಮೂಡಿಸಿದ್ದಾರೆ ಈ ಸಂದರ್ಭದಲ್ಲಿ ಎಸ್ ಡಿಪಿಐ ಕಾರ್ಯಕರ್ತರಾದ. ಮೊಹಮ್ಮದ್ ಶಫಿ ಸದ್ದಾಮ್ ಹುಸೇನ್ ಅಕ್ಬರ್ ವಸೀಮ್ ಮೊಹಮ್ಮದ್. ತಬ್ರೆಸ್ ಮಾಜಿ.ನಗರ ಸಭಾ ಸದಸ್ ಯೂನುಸ್. ಸಮೀನಾ ಭಾನು ಇಮ್ರಾನ್ ಹಾಗೂ ಕಾರ್ಯಕರ್ತರು ಇನ್ನಿತರ ಹಾಜರಿದ್ದರು.

## ಜ.15ರಂದು ಜನ್ಮದಿನ ಆಚರಣೆ

**ಭಾಲ್ಕಿ:** ಜ.15 ರಂದು ತಮ್ಮ ಜನ್ಮ ದಿನವನ್ನು ಸಾರ್ವಜನಿಕವಾಗಿ ಆಚರಣೆ ಮಾಡದಿರಲು ತೀರ್ಮಾನಿಸಿದ್ದು, ಅಭಿಮಾನಿಗಳು, ಪಕ್ಷದ ಕಾರ್ಯಕರ್ತರು ಬ್ಯಾನರ್, ಕಟೌಟ್ ಕಟ್ಟದಂತೆ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಮನವಿ ಮಾಡಿದ್ದಾರೆ.



ಇತ್ತೀಚೆಗಷ್ಟೇ ತಮ್ಮ ಪುತ್ರ ಸಂಸದ ಸಾಗರ ಖಂಡ್ರೆ ಅವರ ಜನ್ಮ ದಿನವನ್ನು ಜಿಲ್ಲೆಯ ಜನತೆ ಮತ್ತು ಅಭಿಮಾನಿಗಳು ಸೇರಿ ಅದ್ದೂರಿಯಿಂದ ಆಚರಿಸಿದ್ದಾರೆ, ಅದಕ್ಕೆ ತಾವು ಆಭಾರಿಯಾಗಿರುವುದಾಗಿ ತಿಳಿಸಿದ್ದಾರೆ.

ನಾನು ಜ.14ರಿಂದ 16ರವರೆಗೆ ತಾವು ಹೊರರಾಜ್ಯ ಪ್ರವಾಸದಲ್ಲಿರುವುದಾಗಿ ತಿಳಿಸಿರುವ ಅವರು, ಜನ್ಮ ದಿನದ ಅಂಗವಾಗಿ ಕಾರ್ಯಕರ್ತರು, ಅಭಿಮಾನಿಗಳು ಯಾರೂ ಫ್ಲೆಕ್ಸ್, ಬ್ಯಾನರ್ ಕಟ್ಟದಂತೆ, ಮಾಧ್ಯಮ ಜಾಹೀರಾತು ನೀಡದಂತೆ ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.

## ಉಸ್ಮಾನಿಯಾ ವಿಶ್ವವಿದ್ಯಾಲಯದ ಡೀನ್ ಆಗಿ ಕನ್ನಡಿಗ ಪ್ರೋ. ಲಿಂಗಪ್ಪ ನೇಮಕ



**ಹೈದರಾಬಾದ್:** ನೂರು ವರ್ಷಗಳ ಕಾಲ ಇತಿಹಾಸ ಇರುವ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಕನ್ನಡಿಗರಾದ ಕಲಬುರಗಿ ಜಿಲ್ಲೆಯ ಸುರಪುರದ ದೇವರಗೊನಾಳದ ನಿವಾಸಿಯಾಗಿರುವ ಪ್ರೋ ಲಿಂಗಪ್ಪ ಗೊನಾಳ ಅವರ ಸೇವೆಯನ್ನು ಪರಿಗಣಿಸಿದ ಉಪಕುಲಪತಿ ಕನ್ನಡ ವಿಭಾಗದ ಮುಖ್ಯಸ್ಥ ರಾಗಿ ಸೇವೆ ಸಲ್ಲಿಸಿರುವುದನ್ನು ಗುರುತಿಸಿ ಆರ್ಟ್ಸ್ ಕಾಲೇಜನ ಡೀನ್ ಆಗಿ ನೇಮಿಸಿರುವುದು ಕನ್ನಡಿಗರಿಗೆ ಹೆಮ್ಮೆಯ ಸಂಗತಿ. ಇಂದು ವಿಶ್ವವಿದ್ಯಾಲಯದಲ್ಲಿ ಪ್ರೋ ಲಿಂಗಪ್ಪ ಗೊನಾಳ ಅವರಿಗೆ ಹೈದರಾಬಾದ್ ನ ಎಲ್ಲಾ ಕನ್ನಡಿಗರ ಪರವಾಗಿ ಕನ್ನಡಿಗರ ಕಲ್ಯಾಣ ಅಭಿವೃದ್ಧಿ ಸಂಘದ ನಿಯೋಗವನ್ನು ಅವರಿಗೆ ಭೇಟಿಯಾಗಿ ಸನ್ಮಾನಿಸಿ ಗೌರವಿಸಿದರು. ಅಧ್ಯಕ್ಷ ಧರ್ಮೇಂದ್ರ ಪೂಜಾರಿ. ಉಪಾಧ್ಯಕ್ಷ ಬಸವರಾಜ ಹಂಜನಾಳೆ. ಕೀರ್ತಿ ಕುಮಾರ ಮಾನ್ವಿಕರ. ಪ್ರಭು ಪೂಜಾರಿ. ಅಮರನಾಥ ಹಿರೋಡೆ. ರಾಜಕುಮಾರ ಮನ್ನಳಿ. ಜಗನಾಥ ತೊಂಡಾರೆ. ಮಾರುತಿ ಮೇತ್ರೆ. ಪ್ರೋ ಲಿಂಗಪ್ಪ ಗೋನಾಳ ಅವರಿಗೆ ಕನ್ನಡ ಶ್ಯಾಲು ಹೊದಿರಿ. ಕನ್ನಡ ಪುಸ್ತಕವನ್ನು ನೀಡಿ ಶುಭ ಹಾರೈಸಿದರು.



ಪಿಡಿಒ ಗ್ರಾಮ ಪಂಚಾಯತ ಸಂಗೋಳಗಿ 2026ನೇ ಸಾಲಿನ ಮಲ್ಲಮ್ಮ ನುಡಿಯ ಕ್ಯಾಲೆಂಡರ್ ವಿತರಣೆ ಮಾಡಲಾಯಿತು.



ತಾಲೂಕು ಪಂಚಾಯತ್ ಇಒ ಮಾಣಿಕರಾವ್ ಪಾಟೀಲ್‌ಗೆ ಕ್ಯಾಲೆಂಡರ್ ವಿತರಣೆ ಮಾಡುತ್ತಿರುವುದು.



ಸಹಕಾರ ಸಂಘಗಳ ಉಪ ನಿಬಂಧಕರು ಮಂಜುಳಾ ಎಸ್‌ಗೆ ಕ್ಯಾಲೆಂಡರ್ ವಿತರಿಸುತ್ತಿರುವುದು.

# ಕರ್ನಾಟಕ ಬಯಲಾಟ ಅಕಾಡೆಮಿ ಪ್ರಶಸ್ತಿ ಪ್ರಕಟ

### ಐವರಿಗೆ ಗೌರವ ಪ್ರಶಸ್ತಿ, 10 ಕಲಾವಿದರಿಗೆ ವಾರ್ಷಿಕ ಪ್ರಶಸ್ತಿ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಕರ್ನಾಟಕ ಬಯಲಾಟ ಅಕಾಡೆಮಿ 2025 ನೇ ಸಾಲಿನ ಗೌರವ ಹಾಗೂ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಿದೆ.

ಕರ್ನಾಟಕ ಬಯಲಾಟ ಅಕಾಡೆಮಿ ಅಧ್ಯಕ್ಷ ಪ್ರೊ.ಕೆ.ಆರ್.ದುರ್ಗಾದಾಸ ಬಾಗಲಕೋಟೆಯಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಪ್ರಶಸ್ತಿ ಪುರಷ್ಕೃತರ ಪಟ್ಟಿ ಪ್ರಕಟಿಸಿ, ಕಳೆದ ಡಿಸೆಂಬರ 24 ರಂದು ನಡೆದ ಅಕಾಡೆಮಿಯ ಸರ್ವ ಸದಸ್ಯರ ಸಾಮಾನ್ಯ ಸಭೆಯಲ್ಲಿ ಬಯಲಾಟ ಕಲಾ ಪ್ರಕಾರಗಳಲ್ಲಿ ಕಲಾವಿದರು ನೀಡಿರುವ ಅಮೂಲ್ಯ ಹಾಗೂ ಅನನ್ಯ ಸೇವೆಯನ್ನು ಪರಿಗಣಿಸಿ ಕಲಾವಿದರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು.

ಗೌರವ ಪ್ರಶಸ್ತಿ ಪುರಸ್ಕೃತರಿಗೆ ತಲಾ 50 ಸಾವಿರ ರೂ.ಗಳ ನಗದು, ಪ್ರಶಸ್ತಿ ಫಲಕ ಹಾಗೂ ವಾರ್ಷಿಕ ಪ್ರಶಸ್ತಿ ಪುರಸ್ಕೃತರಿಗೆ ತಲಾ 25 ಸಾವಿರ ರೂ.ಗಳ ನಗದು, ಪ್ರಶಸ್ತಿ ಫಲಕ ನೀಡಿ ಗೌರವಿಸಲಾಗುವುದು ಎಂದು ದುರ್ಗಾದಾಸ ಹೇಳಿದರು.



ಕೆ.ಈರಣ್ಣ ಬಳ್ಳಾರಿ ಜಿಲ್ಲೆ(ಬಯಲಾಟ), ಹನಮಂತಪ್ಪ ಪೂಜಾರ ಕೊಪ್ಪಳ ಜಿಲ್ಲೆ(ಸಣ್ಣಾಟ), ಕಾಡಪ್ಪ ಯಲ್ಲಪ್ಪ ಉಪ್ಪಾರ ಬೆಳಗಾವಿ ಜಿಲ್ಲೆ(ಸಣ್ಣಾಟ), ಆರ್.ಬಿ.ಪುಟ್ಟೇಗೌಡ ಹಾಸನ ಜಿಲ್ಲೆ(ಮೂಡಲಪಾಯ) ಹಾಗೂ ಶ್ರೀಮತಿ ಸುಶಿಲವ್ವ ಹೆಗಡೆ ಬೆಳಗಾವಿ ಜಿಲ್ಲೆ(ದೊಡ್ಡಾಟ) ಇವರಿಗೆ ಗೌರವ ಪ್ರಶಸ್ತಿ ಪ್ರಕಟಿಸಲಾಗಿದೆ.

ವಾರ್ಷಿಕ ಪ್ರಶಸ್ತಿಗೆ ಎಚ್.ಸಿ.ಶಿವಬುದ್ಧಿ ಮೈಸೂರು ಜಿಲ್ಲೆ(ಸೂತ್ರದ ಗೊಂಬೆಯಾಟ), ಜಯಪ್ರಕಾಶಗೌಡ ಮಂಡ್ಯ ಜಿಲ್ಲೆ(ಮೂಡಲಪಾಯ), ಹೊಳೆಯಾಚೆ ಕೊಟ್ರಪ್ಪ ವಿಜಯನಗರ ಜಿಲ್ಲೆ(ಬಯಲಾಟ), ಶಿವಾಜಿ ಜಾಧವ ಬಾಗಲಕೋಟೆ ಜಿಲ್ಲೆ(ಬಯಲಾಟ), ನಂದಗೋಪಾಲ ಚಿತ್ರದುರ್ಗ ಜಿಲ್ಲೆ(ಬಯಲಾಟ), ಮಲ್ಲಪ್ಪ ಕರಿಮಲ್ಲಣ್ಣವರ ಧಾರವಾಡ ಜಿಲ್ಲೆ(ದೊಡ್ಡಾಟ), ಬಂಡ್ರಿ ಲಿಂಗಪ್ಪ ಬಳ್ಳಾರಿ ಜಿಲ್ಲೆ(ಬಯಲಾಟ), ಚೂಟಿ ಚಿದಾನಂದ ವಿಜಯನಗರ ಜಿಲ್ಲೆ(ಬಯಲಾಟ), ಓದೋ ವೀರಪ್ಪ ದಾವಣಗೆರೆ ಜಿಲ್ಲೆ(ಬಯಲಾಟ) ಹಾಗೂ ಮಳೆಪ್ಪ ಬಸಪ್ಪ ಬಡಿಗೇರ ವಿಜಯಪುರ ಜಿಲ್ಲೆ(ಬಯಲಾಟ) ಆಯ್ಕೆಯಾಗಿದ್ದಾರೆ.

ಗೌರವ ಹಾಗೂ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಬರುವ ಫೆಬ್ರವರಿ ಮೊದಲ ವಾರ ಧಾರವಾಡದಲ್ಲಿ ಆಯೋಜಿಸಲು ತೀರ್ಮಾನಿಸಲಾಗಿದೆ ಎಂದು ಬಯಲಾಟ ಅಕಾಡೆಮಿ ಅಧ್ಯಕ್ಷ ಪ್ರೊ. ಕೆ.ಆರ್.ದುರ್ಗಾದಾಸ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕಿ ಕಸ್ತೂರಿ ಪಾಟೀಲ ಹಾಗೂ ಭೀಮಪ್ಪ ಹುದ್ದಾರ ಇದ್ದರು.

## ಅತ್ಯುತ್ತಮ ಸ್ವೀಪ್ ಚಟುವಟಿಕೆಗಳ ಯೋಜನೆ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಮುಂಬರುವ ಚುನಾವಣೆಗೆ ಮುಂಚಿತವಾಗಿ ಸ್ವೀಪ್ ಚಟುವಟಿಕೆಗಳನ್ನು ಅತ್ಯುತ್ತಮವಾಗಿ ನಿರ್ವಹಿಸಲು ಅಧಿಕಾರಿಗಳು ಕ್ರಮ ಕೈಗೊಳ್ಳುವಂತೆ ರಾಜ್ಯ ಸ್ವೀಪ್ ನೋಡಲ್ ಅಧಿಕಾರಿಗಳಾದ ಶ್ರೀ ಪಿ.ಎಸ್.ವಸ್ತ್ರದ ಅವರು ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಇಂದು ಮತದಾರರ ಪಟ್ಟಿಯ ಸಂಕ್ಷಿಪ್ತ ಪರಿಷ್ಕರಣೆ –2026 ಸಂಬಂಧ ಸ್ವೀಪ್ ಕಾರ್ಯಕ್ರಮ ಹಾಗೂ ರಾಷ್ಟ್ರೀಯ ಮತದಾರರ ದಿನಾಚರಣೆ ಕುರಿತಂತೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು.

ವ್ಯವಸ್ಥಿತ ಮತದಾರರ ಶಿಕ್ಷಣ ಹಾಗೂ ಚುನಾವಣಾ ಭಾಗವಹಿಸುವಿಕೆ ಚಟುವಟಿಕೆ ಅಂಗವಾಗಿ ಮೂರು ಹಂತಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

ಮತದಾರರಿಗೆ ಜಾಗೃತಿ ಕಾರ್ಯಕ್ರಮ ಅಚ್ಚುಕಟ್ಟಾಗಿ ಕೈಗೊಳ್ಳಬೇಕು. ಮತದಾರರ ಪಟ್ಟಿಯಲ್ಲಿ ಹೆಸರು ಇರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವಂತಾಗಬೇಕು. ಚುನಾವಣಾ ಸಾಕ್ಷರತಾ ಹಾಗೂ ಜಾಗೃತಿ ಸಂಘಗಳನ್ನು ಸದೃಢಗೊಳಿಸಿ ಸೂಕ್ತ ಅರಿವು ಮೂಡಿಸುವಂತಾಗಬೇಕು ಎಂದು ಅವರು ಸಲಹೆ ನೀಡಿದರು.

ಈಗ ಯೋಜನೆ ರೂಪಿಸುವ ಕಾಲ. ಮುಂದೆ ಅಭಿಯಾನಗಳನ್ನು ಕೈಗೊಳ್ಳುವಂತಾಗಬೇಕು. ಅಧಿಕಾರಿಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸುವಂತೆ ಅವರು ಸೂಚಿಸಿದರು. ರಾಷ್ಟ್ರೀಯ ಮತದಾರರ ದಿನಾಚರಣೆ: ಬರುವ ಜನೇವರಿ 25ರಂದು ರಾಷ್ಟ್ರೀಯ ಮತದಾರರ ದಿನಾಚರಣೆ ಯಶಸ್ವಿಯಾಗಿ ಹಮ್ಮಿಕೊಳ್ಳಬೇಕು. ಹದಿನೆಂಟು ವರ್ಷ ಆದ ಯುವ ಮತದಾರರು, ವಿಶೇಷಚೇತನ ಮತದಾರರು, ಹಿಂದುಳಿದ ಜನಾಂಗಗಳ ಹಾಗೂ ಇತರೆ ಅರ್ಹರಿಗೆ ಎಪಿಕ್ ಕಾರ್ಡ್ ವಿತರಣೆ, ಪ್ರತಿಜ್ಞಾ ವಿಧಿ ಬೋಧನೆ, ಅತ್ಯುತ್ತಮ ಚುನಾವಣಾ ಕೆಲಸಗಾರರಿಗೆ ಸನ್ಮಾನ,ನಿಬಂಧ ಸ್ಪರ್ಧೆ, ಮತದಾನಕ್ಕಾಗಿ ಇರುವ ಮಾನದಂಡ 'ಗಳು,ಮಾರ್ಗಸೂಚಿಗಳ ಬಗ್ಗೆ ತಿಳಿಹೇಳಬೇಕು ಎಂದು ಸಲಹೆ ನೀಡಿದರು.

## R15 ಸರಣಿ ಮೇಲೆ ವಿಶೇಷ ರಿಯಾಯಿತಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಯಮಹಾ ಮೋಟಾರ್‌ನ 70ನೇ ವಾರ್ಷಿಕೋತ್ಸವದ ಸಂಭ್ರಮದ ಅಂಗವಾಗಿ, ಇಂಡಿಯಾ ಯಮಹಾ ಮೋಟಾರ್ ತನ್ನ ಜನಪ್ರಿಯ Yamaha R15 ಸರಣಿಯ ಮೋಟಾರ್‌ಸೈಕಲ್‌ಗಳ ಮೇಲೆ Rs. 5,000 ಗಳ ವಿಶೇಷ ರಿಯಾಯಿತಿಯನ್ನು ಘೋಷಿಸಿದೆ. ಈ ಹೊಸ ದರಗಳು ಜನವರಿ 5 ರಿಂದ ಜಾರಿಗೆ ಬರಲಿವೆ. ಈ ವಿಶೇಷ ಕೊಡುಗೆಯ ಭಾಗವಾಗಿ, Yamaha R15 ಸರಣಿಯ ಬೆಲೆಯು ಈಗ Rs. 1,50,700 ರಿಂದ (ಎಕ್ಸ್ ಶೋರೂಮ್, ದೆಹಲಿ) ಆರಂಭವಾಗಲಿದೆ. ಮೋಟಾರ್‌ಸೈಕಲ್ ಪ್ರಿಯರಿಗೆ ತನ್ನ ಇಷ್ಟದ ಸ್ಪೋರ್ಟ್ಸ್ ಬೈಕ್‌ಗಳನ್ನು ಇನ್ನಷ್ಟು ಸುಲಭವಾಗಿ ದೊರೆಯುವಂತೆ ಮಾಡುವುದು ಯಮಹಾದ ಈ ನಿರ್ಧಾರದ ಉದ್ದೇಶವಾಗಿದೆ.

Yamaha R15 ಭಾರತದ ಮಾರುಕಟ್ಟೆಗೆ ಪ್ರವೇಶಿಸಿದ ದಿನದಿಂದಲೂ ಎಂಟ್ರಿ-ಲೆವೆಲ್ ಪರ್ಫಾರ್ಮೆನ್ಸ್ ಮೋಟಾರ್‌ಸೈಕಲ್ ವಿಭಾಗದಲ್ಲಿ ಕ್ರಾಂತಿ ಮಾಡಿದೆ. ತನ್ನ ರೇಸಿಂಗ್ ವಿನ್ಯಾಸ, ಸುಧಾರಿತ ತಂತ್ರಜ್ಞಾನ ಮತ್ತು ದೈನಂದಿನ ಬಳಕೆಗೆ ಯೋಗ್ಯವಾದ ಚಾಲನಾ ಅನುಭವ ಒದಗಿಸುತ್ತಿರುವ ಕಾರಣದಿಂದ ದೇಶದ ಯುವಜನತೆಯಲ್ಲಿ ಬಹಳ ಜನಪ್ರಿಯವಾಗಿದೆ. ಭಾರತದಲ್ಲೇ ಹತ್ತು ಲಕ್ಷಕ್ಕೂ ಹೆಚ್ಚು R15 ಯುನಿಟ್‌ಗಳು ಉತ್ಪಾದನೆಯಾಗಿದ್ದು, ಇದು ಯಮಹಾದ ಉತ್ಪಾದನಾ ಸಾಮರ್ಥ್ಯ ಮತ್ತು ಭಾರತೀಯ ಮೋಟಾರ್‌ಸೈಕಲ್ ಸಂಸ್ಕೃತಿಯೊಂದಿಗೆ ಕಂಪನಿಗಿರುವ ನಿಕಟ ಸಂಬಂಧಕ್ಕೆ ಸಾಕ್ಷಿಯಾಗಿದೆ.




## ಸಿಬ್ಬಂದಿ ನೇಮಕ, ಗೌರವಧನ ಹೆಚ್ಚಳ ಚರ್ಚೆ: ಅರುಣಕುಮಾರ ಪಾಟೀಲ್

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಬೆಂಗಳೂರಿನ KSRTC ಕೇಂದ್ರ ಕಚೇರಿಯಲ್ಲಿ ಸರ್ಕಾರದ ಸಾರಿಗೆ ಕಾರ್ಯದರ್ಶಿಗಳು ಹಾಗೂ ನಾಲ್ಕೂ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರ ಉಪಸ್ಥಿತಿಯಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ 76ನೇ ಮಂಡಳಿ ನಿರ್ದೇಶಕರ ಸಭೆಯೂ KKRTC ಅಧ್ಯಕ್ಷರಾದ ಅರುಣಕುಮಾರ್ ಎಂ ವೈ ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ಜರುಗಿತು.

ಸಭೆಯಲ್ಲಿ ನಿಗಮದ ಸಮಗ್ರ ಅಭಿವೃದ್ಧಿ, ಪ್ರಯಾಣಿಕರ ಮೂಲಸೌಲಭ್ಯ ಹಾಗೂ ಸಿಬ್ಬಂದಿ-ಪ್ರಯಾಣಿಕರ ಹಿತದೃಷ್ಟಿಯಿಂದ ಹೊಸ ಬಸ್‌ಗಳ ಖರೀದಿ, ವಿವಿಧ ಕಾಮಗಾರಿ ಕಾರ್ಯಗಳು, ವೈದ್ಯಾಧಿಕಾರಿಗಳ ಹಾಗೂ ಗೋಲ್ಡ್-ಸಿಲ್ವರ್ ಮೆಡಲ್ ಪಡೆದ ಚಾಲಕರ ಮಾಸಿಕ ಗೌರವಧನ ಹೆಚ್ಚಳ, ನೇಮಕಾತಿ-ವರ್ಗಾವಣೆ ನಿಯಮಗಳು, ಅನುಕಂಪ ಆಧಾರಿತ ನೇಮಕಾತಿ, ಸಿಬ್ಬಂದಿ ಮಂಜೂರಾತಿ, ಟಿಕೆಟ್ ದರ ಪರಿಷ್ಕರಣೆ ಮತ್ತು 2025-26 ಹಾಗೂ 2026-27 ಸಾಲಿನ ಅಂದಾಜು ಆಯವ್ಯಯದ ಕುರಿತು ಹಾಗೂ ಇನ್ನಿತರೆ ಮಹತ್ವದ ವಿಷಯಗಳ ಮೇಲೂ ಚರ್ಚಿಸಲಾಯಿತು. ಎಲ್ಲ ವಿಷಯಗಳಲ್ಲೂ ಶೀಘ್ರ ಹಾಗೂ ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದ್ದು. ಕಲ್ಯಾಣ ಕರ್ನಾಟಕ ಪ್ರದೇಶದ ಸಾರಿಗೆ ಸೇವೆಗಳನ್ನು ಇನ್ನಷ್ಟು ಸದೃಢ, ಸುರಕ್ಷಿತ ಮತ್ತು ಜನಪರವಾಗಿಸಲು ನಿಗಮ ಬದ್ಧವಾಗಿದೆ ಎಂಬ ಸಂದೇಶ ನೀಡಲಾಯಿತು.




ಈ ಸಂದರ್ಭದಲ್ಲಿ ಸಾರಿಗೆ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಎನ್ ವಿ ಪ್ರಸಾದ್, ಕರಾರಸಾ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಅಕ್ರಂ ಪಾಷಾ, ಬೆಮಸಾ ನಿಗಮ ವ್ಯವಸ್ಥಾಪಕ ನಿರ್ದೇಶಕರಾದ ಶಿವಕುಮಾರ ಕೆ ಬಿ, ಕಕರಸಾ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀಮತಿ ಸುಶೀಲಾ ಬಿ, ವಾಕರಸಾ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀಮತಿ ಪ್ರಿಯಾಂಗ ಎಂ ಹಾಗೂ ಕಕರಸಾ ನಿಗಮದ ಇಲಾಖಾ ಮುಖ್ಯಸ್ಥರು ಸಭೆಯಲ್ಲಿ ಉಪಸ್ಥಿತರಿದ್ದರು.




# ವಿಭಾಗೀಯ ಮಟ್ಟದಲ್ಲಿ ಪ.ಜಾತಿ ಮತ್ತು ಪ.ಪಂಗಡದ ಸ್ಥಿತಿಗತಿ ಆಧ್ಯಯನ: ಎಂಎಲ್‌ಸಿ ಶಿವಕುಮಾರ್

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ದಲಿತ ಸಂಪಾದಕ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ಮಾಡಿ ಮುಖ್ಯಮಂತ್ರಿಶ್ರೀ ದಲಿತ ಸಿದ್ದರಾಮಯ್ಯನವರ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು ಎಂದು ವಿಧಾನ ಪರಿಷತ್ ಸದಸ್ಯ ಶಿವಕುಮಾರ ತಿಳಿಸಿದರು.

ಮಾಧ್ಯಮ ಅಕಾಡೆಮಿ ಆಯೋಜಿಸಿದ್ದ ಪ.ಪಂಗಡದ ಪತ್ರಿಕೆಗಳ ಸಂಪಾದಕರಿಗೆ ಡೆಸ್ಕ್ಯೂಸ್ ಕಾರ್ಯಾಗಾರದ ಮುಖ್ಯ ಅತಿಥಿಗಳಾಗಿ, ಭಾಗಹಿಸಿ ಅವರು ಮಾತನಾಡಿದರು. ವಿಭಾಗೀಯ ಮಟ್ಟದಲ್ಲಿ ಮಾಸ ಪತ್ರಿಕೆಗಳ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ಮಾಡಲಾಗುವುದು ಹೊಸ ಜಾಹಿರಾತು ನೀತಿ ಜಾರಿಯಾಗುತ್ತದೆ ಅದರಲ್ಲಿ ಪ.ಜಾತಿ ಮತ್ತು ಪ.ಪಂಗಡಗಳ ಅಲ್ಪ ಸಂಖ್ಯಾತರ, ಹಿಂದುಳಿದ ಸಂಪಾದಕರ ನೇತೃತ್ವದ ಪತ್ರಿಕೆಗಳಿಗೆ ಆದ್ಯತೆ ನೀಡುವಂತೆ, ಸರ್ಕಾರದ ಗಮನ ಸೆಳೆದಿದ್ದೇನೆ. ಎಸ್ಸಿ/ಎಸ್ಟಿ ಸಂಪಾದಕರ ಮೇಲೆ ಜಾಸ್ತಿ, ಜವಾಬ್ದಾರಿಯಿದೆ ದಲಿತ ಪತ್ರಕರ್ತರು ಸ್ವಲ್ಪ ತಪ್ಪು ಮಾಡಿದರೆ ಅದೇಮಹಾ ಅಪರಾಧ ಎಂಭಂತೆ ಬಿಂಬಿಸುವ ಸಮಾಜಗಳಿವೆ. ಆದ್ದರಿಂದ ಮೈಯಲ್ಲಾಕಣ್ಣಾಗಿ ಪತ್ರಿಕೆಯನ್ನು ಮುನ್ನಡೆಸಿಕೊಂಡು ಹೋಗಬೇಕಿದೆ. ಸಮಾಜದ ಸ್ವಾಸ್ಥ್ಯವನ್ನೇ ಹಾಳು ಮಾಡುವವರು ಹಿಂದಿನ ಸರ್ಕಾರಗಳನ್ನು ನಾವು ನೋಡಿದ್ದೇವೆ. ಸಮಾಜದಲ್ಲಿ ನಡೆಯುವ ಸುಳ್ಳನ್ನೇ ಸತ್ಯ ಎಂದು ಬಿಂಬಿಸುವವರಿದ್ದಾರೆ. ಸುದ್ದಿ ಮಾಡುವಾಗ ಯಾವುದು ಸತ್ಯ, ಯಾವುದು ಸುಳ್ಳು ಎಂಬುದನ್ನು ಪರಿಶೀಲಿಸಿ ಸುದ್ದಿ ಮಾಡುವಂತೆ ಸಂಪಾದಕರಿಗೆ ಕಿವಿಮಾತು ಹೇಳಿದರು. ದೊಡ್ಡ ದೊಡ್ಡ ಹಣ ಇರುವಂತಹ ಉದ್ಯಮಿಗಳು ರಾಜಕಾರಣಿಗಳು ಪತ್ರಿಕೋದ್ಯಮದ ಅರಿವೇ ಇಲ್ಲದಂತವರು ಪತ್ರಿಕೋದ್ಯಮಕ್ಕೆ ಕಾಲಿಟ್ಟು ಪತ್ರಿಕಾ ವೃತ್ತಿಯನ್ನೇ ಹಾಳು ಮಾಡುತ್ತಿದ್ದಾರೆ ಯಾವುದೇ ಅಮಿಷಕ್ಕೆ ಒಳಗಾಗದಂತೆ ಪತ್ರಿಕೆಗಳನ್ನು ನಡೆಸಬೇಕೆಂದು ತಿಳಿಸಿದರು. ಮುಖ್ಯಮಂತ್ರಿಗಳಾಗಿ ಹಿರಿಯ ಪತ್ರಕರ್ತರು ಹಾಗೂ ಅಂಕಣಕಾರರೂ ಆದ ಶಿವಾಜಿ ಗಣೇಶನ್ ಮಾಡಿರುವುದನ್ನು ನೋಡಿದ್ದೇವೆ. ದಲಿತ, ಹಿಂದುಳಿದ, ಅಲ್ಪಸಂಖ್ಯಾತರು ಯಾವುದೇ ಪ.ಜಾ ಮತ್ತು ಪ.ಪಂಗಡಗಳ ಸಂಪಾದಕರ ಕುರಿತು ಮಾತನಾಡಿದರು. ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷರಾದ ಶ್ರೀಮತಿ ಆಯೇಶಾಖಾನಂ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕ.ರಾ. ಪ.ಜಾತಿ ಹಾಗೂ ಪ.ಪಂಗಡಗಳ ಪತ್ರಿಕಾ ಸಂಪಾದಕರ ಸಂಘದ ರಾಜ್ಯಾಧ್ಯಕ್ಷ ಚಲುವರಾಜ್ ಸಂಪಾದಕರು ಅನುಭವಿಸುವ ಬಗ್ಗೆ ಕಾರ್ಯಾಗಾರದ ಬೆಳಕು ಚೆಲ್ಲಿದರು. ಐಐಟಿ ಪದವೀದರರು ಮತ್ತು ಎಐ ಪರಿಣಿತರಾದ ರಾಹುಲ್ 'ಸುದ್ದಿಮನೆಯಲ್ಲಿ ಎಐ ಬಳಕೆ ಬಗ್ಗೆ ಉಪನ್ಯಾಸ ನೀಡಿದರು. ಸಂಪನ್ಮೂಲವ್ಯಕ್ತಿ ಕುಮಾರ್ ಎಸ್. ಡಿಜಿಟಲ್ ಯುಗದಲ್ಲಿ ಸ್ಥಳೀಯ ಪತ್ರಿಕೆಗಳ ಪ್ರಸ್ತುತತೆ ಉಳಿಸಿಕೊಳ್ಳುವುದು ಹೇಗೆ ಎಂಬುದರ. ಮಾಹಿತಿ ನೀಡಿದರು. ಸುಳ್ಳು ಸುದ್ದಿಗಳ ಪತ್ತೆ ಕುರಿತು ಶ್ರೀಮತಿ ಶ್ರೀ ಡಿ.ಎನ್ ರವರು ಮಾಹಿತಿ ನೀಡಿದರು.



ಕರ್ನಾಟಕ ಮಾಧ್ಯಮ ಅಕಾಡೆಮಿ ಕಾರ್ಯದರ್ಶಿ ಸಹನಾ ಎಂ. ಪ್ರಾಸ್ತಾವಿಕ ಭಾಷಣ ಮಾಡಿ, ಸ್ವಾಗತಿಸಿ, ವಂದಿಸಿದರು. 40ಕ್ಕೂ ಹೆಚ್ಚು ಎಸ್ಸಿ/ಎಸ್ಟಿ ಪತ್ರಿಕಾ ಸಂಪಾದಕರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಅಕಾಡೆಮಿ ಸಿಬ್ಬಂದಿ ವರ್ಗದವರು ಹಾಜರಿದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)